ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 30
೨೫ ಮೇ ೧೯೫೮
★
ಪುಟ ೧೦ ಬೆಲೆ: ೧೩ ನಯೇ ಪೈಸೆ

ದೇವೀಕುಲಂ ಕ್ಷೇತ್ರದ ಉಪಚುನಾವಣೆಯಲ್ಲಿ—

ಕಮ್ಯೂನಿಸ್ಟ್ ಪಾರ್ಟಿಯ ದಿಗ್ವಿಜಯ

ಇಡೀ ಭಾರತದ ಗಮನವನ್ನು ಸೆಳೆದಿದ್ದ ಮೇ 16ರಂದು ನಡೆದ ದೇವೀಕುಲಂ ಉಪ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಉಮೇದುವಾರರಾದ ಶ್ರೀಮತಿ ರೋಸಮ್ಮ ಪೊನ್ನೂಸ್‌ರವರು ಕಾಂಗ್ರೆಸ್ ಉಮೇದುವಾರರಿಗಿಂತ 7000 ಮತಗಳನ್ನು ಹೆಚ್ಚಿಗೆ ಗಳಿಸಿ ದಿಗ್ವಿಜಯ ಗಳಿಸಿದ್ದಾರೆ. ಕೇರಳ ರಾಜ್ಯದಲ್ಲಿ ಕಮ್ಯೂನಿಸ್ಟ್ ಪಕ್ಷವು ಆಡಳಿತೆ ವಹಿಸಿಕೊಂಡ ನಂತರದಲ್ಲಿ ನಡೆಯುತ್ತಿರುವ ಪ್ರಥಮ ಚುನಾವಣೆ ಇದಾಗಿತ್ತು. ದೇವೀಕುಲಂನಲ್ಲಿ ನಡೆದ ಈ ಉಪ ಚುನಾವಣೆಯ ಫಲಿತಾಂಶವು ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಸರಕಾರದ ಬಗ್ಗೆ ತಮಗಿರುವ ವಿಶ್ವಾಸವನ್ನು ವ್ಯಕ್ತಗೊಳಿಸಿದ್ದಾರೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಚುನಾವಣೆಯಲ್ಲಿ ನಾಲ್ಕು ಮಂದಿ ಸ್ಪರ್ಧಿಗಳಿದ್ದರು. ಒಂದು ಲಕ್ಷ ಅರವತ್ತು ಸಾವಿರ ಮತದಾರರಿರುವ ಈ ಕ್ಷೇತ್ರ ಶೇಕಡ 70ಕ್ಕೂ ಹೆಚ್ಚು ಮಂದಿ ಮತದಾರರು, ಅಂದರೆ 1,15,291 ಮಂದಿ ಮತದಾನವಿತ್ತಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿಯ ಉಮೇದುವಾರರು ಒಟ್ಟು ಮತಗಳಲ್ಲಿ ಶೇ. 41ರಷ್ಟು ಮತ ಗಳಿಸಿದ್ದಾರೆ.

ಒಟ್ಟು ಮತದಾರರು:	1,60,617
ಪೋಲಾದ ಓಟುಗಳು	1,15,291
ಶ್ರೀಮತಿ ರೋಸಮ್ಮ ಪೊನ್ನೂಸ್ (ಕಮ್ಯೂನಿಸ್ಟ್)	55,819
ಶ್ರೀ ಬಿ. ಕೆ. ನಾಯರ್ (ಕಾಂಗ್ರೆಸ್)	48,730
ಶ್ರೀ ಕೆ. ಎಸ್. ಸುಬ್ರಮಣ್ಯಂ (ಸ್ವತಂತ್ರ)	7,690
ಶ್ರೀ ಡಾಮಿನಿಕ್ (ಸ್ವತಂತ್ರ)	650
ಕುಲಗೆಟ್ಟ ಮತಗಳು	2,402

ಇದೇ ಕ್ಷೇತ್ರದಲ್ಲಿ 1957ರಲ್ಲಿ ನಡೆದ ಚುನಾವಣೆಯಲ್ಲಿ ದೊರೆತ ಮತಗಳ ವಿವರ:

ಕಮ್ಯೂನಿಸ್ಟ್ ಪಾರ್ಟಿ (ರೋಸಮ್ಮ ಪೊನ್ನೂಸ್)	33,809
ಕಾಂಗ್ರೆಸ್	24,123
ರಿವೊಲ್ಯೂಷನರಿ ಸೋಷಲಿಸ್ಟ್ ಪಕ್ಷ	7,098
ಸ್ವತಂತ್ರ	11,799
ಸ್ವತಂತ್ರ	6,204

ಕಳೆದ ಚುನಾವಣೆಯಲ್ಲಿಯೂ ಸಹ ರೋಸಮ್ಮ ಪೊನ್ನೂಸ್‌ರವರು ಒಂಭತ್ತು ಸಾವಿರ ಅಧಿಕ ಮತ ಗಳಿಸಿ ವಿಜಯ ಗಳಿಸಿದ್ದರು.

ಕಮ್ಯೂನಿಸ್ಟ್ ಪಾರ್ಟಿ ಗೌರವ ಹೆಚ್ಚಿದೆ

ಈ ಉಪ ಚುನಾವಣೆಯಲ್ಲಿನ ವಿಜಯದಿಂದ ಕಮ್ಯೂನಿಸ್ಟ್ ಪಕ್ಷದ ಗೌರವ ಅಪಾರವಾಗಿ ಅಧಿಕಗೊಂಡಿದೆ. ಪ್ರತಿಗಾಮಿ ಶಕ್ತಿಗಳಿಗೆ ಭಾರೀ ಪರಾಭವವಾಗಿದೆ. ಕಾಂಗ್ರೆಸ್ಸು, ಪ್ರಜಾ ಸೋಷಲಿಸ್ಟ್ ಪಕ್ಷ, ಮುಸ್ಲಿಂ ಲೀಗ್, ದೊಡ್ಡ ಭೂಮಾಲಿಕರು, ಪ್ಲಾಂಟರುಗಳು ಇವರೆಲ್ಲರೂ ಒಂದುಗೂಡಿ ಕಮ್ಯೂನಿಸ್ಟ್ ಪಾರ್ಟಿ ಉಮೇದುವಾರರನ್ನು ಹೇಗಾದರೂ ಸೋಲಿಸಬೇಕೆಂದು ಪ್ರಚಾರ ನಡೆಸಿದ್ದರು. ಕ್ಯಾಥೊಲಿಕ್ ಚರ್ಚ್‌ಗಳು ಬೇಕಾದಷ್ಟು ಹಣ ವ್ಯಯ ಮಾಡಿ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರ ಪರ ಪ್ರಚಾರ ನಡೆಸಿದ್ದುವು. ಸಚಿವರುಗಳು ಚುನಾವಣಾ ಪ್ರಚಾರದಲ್ಲಿ ಭಾಗವಹಿಸುವುದಿಲ್ಲವೆಂದು ಕಮ್ಯೂನಿಸ್ಟ್ ಪಾರ್ಟಿಯು ತೀರ್ಮಾನಿಸಿ, ಅದರಂತೆ ನಡೆದುಕೊಂಡು ಇತರ ರಾಜ್ಯಗಳಿಗೆ ಮೇಲ್ಪಂಕ್ತಿ ಹಾಕಿ, ಪ್ರಜಾಪ್ರಭುತ್ವ ರೀತ್ಯ ಚುನಾವಣೆ ನಡೆಸುವ ಭರವಸೆ ಇತ್ತಿತು. ಕಾಂಗ್ರೆಸ್ ಉಮೇದುವಾರರ ಪರವಾಗಿ ಪ್ರಚಾರ ನಡೆಸಲು ಮದರಾಸಿನ ಮುಖ್ಯಮಂತ್ರಿ ಕಾಮರಾಜನಾಡಾರ್ ಮತ್ತು ಇತರ ಮಂತ್ರಿಗಳು ಧಾವಿಸಿದ್ದರು. ಕೇಂದ್ರ ಸಚಿವರಾದ ಎಸ್. ಕೆ. ಪಾಟೀಲರು ಚುನಾವಣೆ ಪ್ರಚಾರಕ್ಕೆ ಬರುವವರಿದ್ದರು, ಆದರೆ ಕೊನೆ ಘಳಿಗೆಯಲ್ಲಿ ತಮ್ಮ ನಿರ್ಧಾರವನ್ನು ಬದಲಿಸಿದರು. ಹೆಚ್ಚು ಮಂದಿ ತಮಿಳು ಮಾತನಾಡುವ ಜನರಿರುವುದರಿಂದ ಅವರನ್ನಾಕರ್ಷಿಸಲು ಸಾಧ್ಯವಾಗುವುದೆಂದು ಕಾಂಗ್ರೆಸ್ಸು ಲೆಖ್ಖಹಾಕಿತ್ತು. ಚುನಾವಣೆಯಲ್ಲಿ ತಮ್ಮ ಗೆಲವು ಶತಸ್ಸಿದ್ಧವೆಂದು ಘೋಷಿಸಿದ್ದಿತು.

ಚುನಾವಣೆಯ ಮುನ್ನಾ ದಿನ, ಮತದಾರರಲ್ಲಿ ಗೊಂದಲವೆಬ್ಬಿಸಲು ಕೇರಳ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಎಂ. ಎನ್. ಗೋವಿಂದನ್ ನಾಯರ್‌ರವರ ಹೆಸರಿನಲ್ಲಿ ಸುಳ್ಳು ಕರಪತ್ರವೊಂದನ್ನು ಹೊರಡಿಸಿ, ಅದರಲ್ಲಿ ಕಮ್ಯೂನಿಸ್ಟ್ ಉಮೇದುವಾರರಾದ ರೋಸಮ್ಮ ಪೊನ್ನೂಸ್‌ರವರು ಕ್ರಾಂತಿಕಾರಿ ಸೋಷಲಿಸ್ಟ್ ಪಕ್ಷದ ಬೆಂಬಲ ಪಡೆದಿದ್ದ ಸ್ವತಂತ್ರ ಉಮೇದುವಾರ ಶ್ರೀ ಸುಬ್ರಮಣ್ಯಂರವರ ಪರವಾಗಿ ಸ್ಪರ್ಧೆಯಿಂದ ಹಿಂತೆಗೆದುಕೊಂಡಿದ್ದಾರೆಂದೂ ಮತದಾರರಾರೂ ಶ್ರೀಮತಿ ರೋಸಮ್ಮ ಪೊನ್ನೂಸ್‌ರವರಿಗೆ ಮತವೀಯಕೂಡದೆಂದು ಹೇಳಲಾಗಿತ್ತು. ಇಂಥ ಕೇಡು ರೀತಿಯಲ್ಲಿ ಪ್ರಚಾರ ನಡೆಸಿದರೂ ಸಹ ಕಾಂಗ್ರೆಸ್ಸಿಗೆ ಸೋಲಾಗಿದೆ.

ಸರಕಾರದ ಬಲ ಹೆಚ್ಚಿತು

127 ಮಂದಿ ಇರುವ ಶಾಸನ ಸಭೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಬಲ ಇಂದು 65ಆಗಿದೆ (ಕಮ್ಯೂನಿಸ್ಟ್ ಪಾರ್ಟಿಗೆ ಬೆಂಬಲವಿತ್ತಿರುವವರನ್ನು ಸೇರಿಕೊಂಡು), ಕಾಂಗ್ರೆಸ್ಸು 43, ಪ್ರಜಾ ಸೋಷಲಿಸ್ಟ್ ಪಕ್ಷ 9 (ಇದರಲ್ಲಿ ಶ್ರೀ ಜನಾರ್ಧನರವರ ಚುನಾವಣೆಯ ತಕರಾರು ಇನ್ನೂ ಇತ್ಯರ್ಥವಾಗಿಲ್ಲ. ಸುಪ್ರೀಂ ಕೋರ್ಟಿನ ಮುಂದಿದೆ. ಸುಪ್ರೀ ಕೋರ್ಟು ಅವರು ಶಾಸನ ಸಭೆಯಲ್ಲಿ ಭಾಗವಹಿಸಕೂಡದೆಂದು ಆದೇಶವಿತ್ತಿದೆ), ಮುಸ್ಲಿಂಲೀಗ್ 8, ಸ್ವತಂತ್ರರು ಇಬ್ಬರು.

ಈ ಉಪಚುನಾವಣೆಗೆ ಮುಂಚೆ ಶಾಸನ ಸಭೆಯಲ್ಲಿ ಸಭಾಧ್ಯಕ್ಷರನ್ನುಳಿದರೆ ಕಮ್ಯೂನಿಸ್ಟ್ ಪಕ್ಷ 63, ವಿರೋಧ ಪಕ್ಷಗಳು 62 ಆಗಿತ್ತು. ದೇವಿಕುಲಂ ಚುನಾವಣೆಯಲ್ಲಿ ಕಾಂಗ್ರೆಸ್ ಜಯಗಳಿಸಿದ್ದಲ್ಲಿ ಪಕ್ಷದ ಬಲಾಬಲ 63-63 ಆಗುತ್ತಿದ್ದು, ಸರಕಾರದ ಅಸ್ತಿತ್ವಕ್ಕೆ ಅಂತಕವಾಗಿರುತ್ತಿತ್ತು. ಈ ಅಂಶವನ್ನು ಪರಿಗಣಿಸಿ, ಸರಕಾರವನ್ನು ಹೇಗಾದರೂ ಉರುಳಿಸಲು ಯತ್ನಿಸುತ್ತಿರುವ ವಿರೋಧ ಪಕ್ಷಗಳು ಉಪಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರನ್ನು ಗೆಲ್ಲಿಸಲು ಯತ್ನಿಸಿದ್ದುವು. ಚುನಾವಣೆಯಲ್ಲಿ ಕಮ್ಯೂನಿಸ್ಟ್ ಉಮೇದುವಾರರು ಜಯಗಳಿಸಿದುದರಿಂದ ಸರಕಾರದ ಶಕ್ತಿಯು ನೈತಿಕವಾಗಿಯು ಸಂಖ್ಯಾಬಲದಿಂದಲೂ ವರ್ಧಿಸಿದೆ.

ಪ್ರತಿಗಾಮಿಗಳ ಅಪಪ್ರಚಾರಕ್ಕೆ ಉತ್ತರ

ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಸರಕಾರವು ಅಧಿಕಾರವಹಿಸಿಕೊಂಡಂದಿನಿಂದಲೂ ನಿರಂತರವಾಗಿ ಅಪಪ್ರಚಾರ ನಡೆಸುವ ಕಾಂಗ್ರೆಸ್ಸಿಗರಿಗೆ ಮತ್ತು ಪ್ರತಿಗಾಮಿಗಳಿಗೆ ಈ ಉಪಚುನಾವಣೆಯಲ್ಲಿ ಜನತೆ ಸರಿಯಾದ ಉತ್ತರವನ್ನಿತ್ತಿದೆ. ಕಮ್ಯೂನಿಸ್ಟ್‌ರು ಆಡಳಿತಕ್ಕೆ ಬಂದ ಮೇಲೆ ರಾಜ್ಯದಲ್ಲಿ ಅನಾಯಕತೆ ಹೆಚ್ಚಿದೆ, ನ್ಯಾಯ ಮತ್ತು ಶಿಸ್ತಿನ ಪರಿಪಾಲನೆಯಾಗುತ್ತಿಲ್ಲ, ಪೋಲೀಸರ ಬಗ್ಗೆ ಸರಕಾರದ ನೀತಿಯು ಅವರನ್ನು ನಿಷ್ಕ್ರಿಯಗೊಳಿಸಿದೆ, ಪ್ಲಾಂಟೇಷನುಗಳಲ್ಲಿ ಅರಾಜಕತೆ ಹೆಚ್ಚಿದೆ ಎಂದೆಲ್ಲ ಅಪಪ್ರಚಾರ ಮಾಡುತ್ತಿದ್ದ ಕಮ್ಯೂನಿಸ್ಟ್ ವಿರೋಧಿಗಳಿಗೆ ದೇವಿಕುಲಂ ಉಪಚುನಾವಣೆ ಸರಿಯಾದ ಬದಲನ್ನಿತ್ತಿದೆ. ಪ್ರಧಾನವಾಗಿ ಪ್ಲಾಂಟೇಷನುಗಳಿಂದ ಕೂಡಿರುವ ಕ್ಷೇತ್ರದಲ್ಲಿ ಕಮ್ಯೂನಿಸ್ಟ್ ಉಮೇದುವಾರರು ಮತ್ತೆ ಆಯ್ಕೆಯಾಗಿದ್ದಾರೆ ಅಲ್ಲಿ ಚುನಾವಣೆಯ ಸಂಬಂಧದಲ್ಲಿ ಯಾವ ಬಗೆಯ ದೊಡ್ಡ ಘಟನೆಯು ಸಂಭವಿಸದಿರುವುದು, ಚುನಾವಣೆಯು ಶಾಂತಿ ಮತ್ತು ಶಿಸ್ತಿನಿಂದ ನಡೆದಿದೆ ಎಂಬುದಕ್ಕೆ ನಿದರ್ಶನವಾಗಿದೆ. ಸರಕಾರದ ಪೋಲೀಸು ನೀತಿಗೆ ಜನತೆಯ ಮೆಚ್ಚುಗೆಯನ್ನು ಈ ಚುನಾವಣೆ ತೋರಿಸಿದೆ.

ಫಲಿತಾಂಶದ ಬಗ್ಗೆ ಪ್ರತಿಕ್ರಿಯೆ

ದೇವೀಕುಲಂ ಉಪ ಚುನಾವಣೆಯ ಫಲಿತಾಂಶವು ದೇಶದ ಎಲ್ಲೆಡೆಗಳಿಂದಲೂ ಹೆಚ್ಚಿನ ಪ್ರತಿಕ್ರಿಯೆಯನ್ನುಂಟುಮಾಡಿದೆ. ದೇಶದ ಎಲ್ಲ ಪತ್ರಿಕೆಗಳೂ ಈ ಬಗ್ಗೆ ಅಗ್ರಲೇಖನಗಳನ್ನು ಬರೆದಿವೆ. ಕೆಲವು ಪತ್ರಿಕೆಗಳು ಕಮ್ಯೂನಿಸ್ಟರ ವಿಜಯವನ್ನು ಸ್ವಾಗತಿಸಿದರೂ, ಕಾಂಗ್ರೆಸ್‌ಗೆ ಎಚ್ಚರಿಕೆಯನ್ನಿತ್ತಿವೆ. ಕಾಂಗ್ರೆಸ್, ಕಮ್ಯೂನಿಸ್ಟ್ ಪ್ರಭಾವವನ್ನು ಕುಗ್ಗಿಸಲು ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕೆಂದು ಒತ್ತಾಯಪಡಿಸಿವೆ. "ಹಿಂದೂಸ್ತಾನ್ ಟೈಂಸ್" ನಂಥ ಪತ್ರಿಕೆಗಳು ಉಪ ಚುನಾವಣೆಗಳ ಬಗ್ಗೆ ಬರೆಯುತ್ತಾ, ಈ ಚುನಾವಣೆಯ ವಿಜಯದಿಂದ ಅದು, ಜನತೆ ಕಮ್ಯೂನಿಸ್ಟ್ ಪಕ್ಷದ ನೀತಿಗಳಿಗೆ ಮತವಿತ್ತಿದೆಯೆಂದು ಭಾವಿಸುವುದು ತಪ್ಪೆಂದೂ, ಅದು ಕಾಂಗ್ರೆ

(ಕೊನೇ ಪುಟ ನೋಡಿ)

ರಾಷ್ಟ್ರೀಯ - ಅಂತರರಾಷ್ಟ್ರೀಯ

ತಾತಾ ಉಕ್ಕಿನ ಕಾರ್ಖಾನೆಯಲ್ಲಿ ಧರಣಿ ಮುಷ್ಕರ

ಮೇ 12ರಂದು ಒಂದು ದಿನದ ಮುಷ್ಕರವು ಜಮ್‌ಷೆಡ್ ಪುರದ ತಾತಾ ಉಕ್ಕಿನ ಕಾರ್ಖಾನೆಯಲ್ಲಿ ಯಶಸ್ವಿಯಾಗಿ ನಡೆಯಿತು. ಮುಷ್ಕರವನ್ನು ಮುರಿಯಲು ಇಂಟಕ್ ಎಷ್ಟೇ ಯತ್ನಿಸಿದರೂ ಸಹ ವಿಫಲಗೊಂಡಿತು. ಎ.ಐ.ಟಿ.ಯು.ಸಿ. ನಾಯಕತ್ವದಲ್ಲಿರುವ ಮಜ್ದೂರ್ ಯೂನಿಯನ್ ನೇತೃತ್ವದಲ್ಲಿ ಕೆಲಸಗಾರರು ತಮ್ಮ ಬೇಡಿಕೆಗಳನ್ನು ಪಡೆದುಕೊಳ್ಳಲು ದೃಢ ನಿರ್ಧಾರದಿಂದ ಹೋರಾಡುತ್ತಿದ್ದಾರೆ.

ಒಂದು ದಿನದ ಪೂರ್ಣ ಮುಷ್ಕರವಾದ ನಂತರ, ಕಾರ್ಖಾನೆಯಲ್ಲಿ ಧರಣಿ ಮುಷ್ಕರ ಆರಂಭವಾಗಿದೆ. ಮ್ಯಾನೇಜ್‌ಮೆಂಟ್ ಹಲವು ಡಿಪಾರ್ಟ್‌ಮೆಂಟುಗಳನ್ನು ಲಾಕ್ಔಟ್ ಮಾಡಿದೆ. ಮೇ 12ರ ಮುಷ್ಕರವನ್ನು ನ್ಯಾಯಬಾಹಿರವೆಂದು ಸಾರಿದ್ದರಿಂದಾಗಿ ಮಾಲಿಕರು 40 ಜನ ಕಾರ್ಮಿಕರನ್ನು ಕೆಲಸದಿಂದ ಸಸ್ಪೆಂಡ್ ಮಾಡಿದ್ದರಿಂದಾಗಿ ಧರಣಿ ಮುಷ್ಕರವನ್ನು ಕೆಲಸಗಾರರು ಆರಂಭಿಸಿದರು. ಮೇ 20 ರಂದು ಕೆಲಸಗಾರರ ಸಂಘದ ಕಾರ್ಯದರ್ಶಿಯವರನ್ನು ಬಂಧಿಸಲು ಪೋಲೀಸರು ಕೆಲಸಗಾರರ ಮೇಲೆ ಗುಂಡು ಹಾರಿಸಿದ್ದಾರೆ. ತತ್ಪರಿಣಾಮವಾಗಿ 60 ಮಂದಿ ಕಾರ್ಮಿಕರಿಗೆ ಗಾಯಗಳಾಗಿ, ಒಬ್ಬನ ಮರಣ ಸಂಭವಿಸಿದೆ. ಮುಷ್ಕರವನ್ನು ಮುರಿಯಲು ಪೋಲೀಸರು ದಬ್ಬಾಳಿಕೆಯ ಅಸ್ತ್ರವನ್ನು ಪ್ರಯೋಗಿಸುತ್ತಿದ್ದಾರೆ ಜಮ್‌ಷೆಡ್ ಪುರದಲ್ಲಿ 144 ನೇ ಸೆಕ್ಷನ್ ಜಾರಿಗೊಳಿಸಲಾಗಿದೆ. ತಾತಾ ಉಕ್ಕಿನ ಕಾರ್ಖಾನೆಯಲ್ಲಿ ಈ ವರೆಗೆ ಮೂರು ಬಾರಿ ಮಾತ್ರ ಮುಷ್ಕರಗಳಾಗಿವೆ, ಅದು ಸಹ 1920, 1922 ಮತ್ತು 1928, 36000 ನೌಕರರನ್ನೊಳಗೊಂಡ ಈ ಬಾರಿ ನಡೆಯುತ್ತಿರುವ ಮುಷ್ಕರ ಬಹಳ ಮುಖ್ಯತ್ವವುಳ್ಳದ್ದಾಗಿದೆ.

ಪಂಜಾಬ್ ಕಾಂಗ್ರೆಸ್ಸಿನಲ್ಲಿ ಬಿಕ್ಕಟ್ಟು

ಪಂಜಾಬ್ ಕಾಂಗ್ರೆಸ್‌ನಲ್ಲಿ ಬಿಕ್ಕಟ್ಟು ತೀವ್ರಗೊಂಡಿದೆ. ಮುಖ್ಯಮಂತ್ರಿ ಪ್ರತಾಪ್‌ಸಿಂಗ್ ಕೈರೋನ್‌ರವರ ಮಂತ್ರಿಮಂಡಲ ಉರುಳುವ ಸ್ಥಿತಿಯಲ್ಲಿದೆ. ಕಾಂಗ್ರೆಸ್ ಹೈಕಮಾಂಡ್ ಕೈರೋನ್‌ರವರು ಶಾಸನ ಸಭಾ ಕಾಂಗ್ರೆಸ್ ಪಕ್ಷದಲ್ಲಿ ವಿಶ್ವಾಸ ಮತ ಕೋರಬೇಕೆಂದು ಆದೇಶವಿತ್ತಿದೆ.

ಪಂಜಾಬ್ ಕಾಂಗ್ರೆಸ್ಸಿನಲ್ಲಿ ಯಾವಾಗಲೂ ಗುಂಪು ಕಾಳಗಗಳು ನಡೆಯುತ್ತಲೇ ಇದೆ. ಅಕಾಲಿ ದಳದೊಂದಿಗೆ ಕಾಂಗ್ರೆಸ್ಸಿನ ಒಕ್ಕೂಟದಿಂದಾಗಿ ಈ ಅಂತರಿಕ ಬಿಕ್ಕಟ್ಟು ಇನ್ನೂ ಹೆಚ್ಚಾಗಿದೆ.

ಶ್ರೀ ಗೋಪಿಚಂದ್ ಭಾರ್ಗವರವರನ್ನು ಮಂತ್ರಿಮಂಡಲಕ್ಕೆ ಕಾಂಗ್ರೆಸ್ ಹೈಕಮಾಂಡ್ ಆದೇಶದ ಮೇಲೆ ತೆಗೆದುಕೊಳ್ಳಲಾಯಿತು. ಆದರೆ ಇಂದು ಭಾರ್ಗವರವರೇ ಕೈರೋನ್‌ರಿಗೆ ಪ್ರತಿಯಾಗಿ ನಿಂತಿದ್ದಾರೆ, ಮಂತ್ರಿಮಂಡಲದೊಳಗೇ ಒಡಕುಂಟಾಗಿದೆ. ಭಾರ್ಗವರವರು ಸಾಮಾನ್ಯವಾಗಿ ಯಾವಾಗಲೂ ಅಕಾಲಿ ದಳದೊಂದಿಗೆ ಸಂಪರ್ಕ ಹೆಚ್ಚಾಗಿರಿಸಿಕೊಂಡಿದ್ದರು. ಆದರಿಂದಾಗಿ ಮಂತ್ರಿ ಮಂಡಲದಲ್ಲಿ ಸೇರಿದ ಇವರಿಗೆ ಕೈರೋನ್‌ರ ವಿರುದ್ಧ ಗ್ಯಾನಿಕರ್ತಾರ್ ಸಿಂಗ್‌ರನ್ನು ಎತ್ತಿ ಕಟ್ಟಲು ಸುಲಭವಾಯಿತು. ಪ್ರತಾಪ್‌ಸಿಂಗ್ ಕೈರೋನ್‌ರವರ ಮೇಲೆ ಲಂಚ ರುಷುವತ್ತುಗಳ ಆಪಾದನೆಯನ್ನು ಹೊರಿಸಲಾಗಿದೆ.

ಪ್ರತಾಪಸಿಂಗ್ ಕೈರೋನ್‌ರವರು ಉರುಳಿದಲ್ಲಿ ಜನರಿಗೇನೋ ಸಂತೋಷವಾಗುತ್ತದೆ, ಆದರೆ ಅವರ ಬದಲಿಗೆ ಅಧಿಕಾರಕ್ಕೆ ಬರುವವರಾರು ? ಭಾರ್ಗವ ಮತ್ತು ಕರ್ತಾರ್‌ಸಿಂಗ್ ರವರು ಬಂದಲ್ಲಿ ಪರಿಸ್ಥಿತಿ ಇನ್ನು ಹದಗೆಡುತ್ತದೆ. ಇದಲ್ಲದೆ ಸರದಾರ್ ಬಲದೇವ್‌ಸಿಂಗ್ ಮತ್ತು ಸರದಾರ್ ಸ್ವರಣ್‌ಸಿಂಗ್‌ರವರ ಹೆಸರುಗಳನ್ನೂ ಸೂಚಿಸಲಾಗುತ್ತಿದೆ. ಮುಂದಿನ ತಿಂಗಳಲ್ಲಿ ಕೈರೋನ್‌ರವರು ವಿಶ್ವಾಸ ಮತ ಪಡೆಯುವುದರಿಂದ, ಅವರ ಅಧಿಕಾರ ಸಮಾಪ್ತಿಯಾಗುವುದು ಖಂಡಿತವಾಗಿದೆ. ಮೈಸೂರಿನಲ್ಲಿ ನಿಜಲಿಂಗಪ್ಪನವರ ಮಂತ್ರಿ ಮಂಡಲದ ಉರುಳುವಿಕೆಯಿಂದ ಆರಂಭವಾದ ಈ ಕ್ರಮದಲ್ಲಿ ಪಂಜಾಬ್‌ನಲ್ಲಿ ಕೈರೋನ್ ಸರಕಾರ ಎರಡನೆಯದಾಗುತ್ತದೆ.

ಒರಿಸ್ಸಾದಲ್ಲಿ ಮತ್ತೆ ಮೆಹ್ತಾಬ್ ಸರಕಾರ ?

ಒರಿಸ್ಸಾದಲ್ಲಿ ರಾಜಕೀಯ ಬಿಕ್ಕಟ್ಟು ಏರ್ಪಟ್ಟು, ಡಾ॥ ಹರೆಕೃಷ್ಣಮೆಹ್ತಾಬ್‌ರವರ ಕಾಂಗ್ರೆಸ್ ಸರಕಾರ ರಾಜೀನಾಮೆ ಸಲ್ಲಿಸಿದೆ. ವಿರೋಧ ಪಕ್ಷಗಳವರು ಒಂದುಗೂಡಿ ಸರಕಾರ ಸ್ಥಾಪಿಸುವ ಯತ್ನ ಇನ್ನು ಸಫಲಗೊಂಡಿಲ್ಲ. ಕಮ್ಯೂನಿಸ್ಟ್ ಪಾರ್ಟಿಯು ಗಣತಂತ್ರ ಪರಿಷತ್ ಸರಕಾರದ ರಚನೆಗಾಗಿ ಮಂಡಿಸಿರುವ ಏಳು ಅಂಶಗಳ ಕಾರ್ಯಕ್ರಮದ ಆಧಾರದ ಮೇಲೆ ಗಣತಂತ್ರ ಪರಿಷತ್ ಮತ್ತು ಪ್ರಜಾ ಸೋಷಲಿಸ್ಟ್ ಪಕ್ಷಗಳ ಸಂಯುಕ್ತ ಸರಕಾರಕ್ಕೆ ಬೆಂಬಲ ಕೊಡುವುದಾಗಿ ಸೂಚಿಸಿದೆ. ಆದರೂ ಈವರೆಗೆ ಸರಕಾರ ರಚಿಸುವ ಯತ್ನ ಕೈಗೂಡಿಲ್ಲ. ಈ ಮಧ್ಯೆ ಕಾಂಗ್ರೆಸ್ಸು ಮೂರು ಉಪ ಚುನಾವಣೆಗಳಲ್ಲಿ ವಿಜಯಗಳಿಸಿದೆ. 139 ಮಂದಿ ಸದಸ್ಯರಿರುವ ಶಾಸನ ಸಭೆಯಲ್ಲಿ ಕಾಂಗ್ರೆಸ್ಸಿನ ಶಕ್ತಿ ಇಂದು 66 ಆಗಿದೆ, ಅಲ್ಲದೆ ಕಾಂಗ್ರೆಸ್ಸಿಗೆ ಜರ್‌ಖಂಡ್ ಪಕ್ಷದ ಐದು ಮಂದಿ ಸದಸ್ಯರ ಪೂರ್ಣ ಬೆಂಬಲವಿದೆ. ಇದರಿಂದಾಗಿ ಕಾಂಗ್ರೆಸ್ ಇಂದು ಭದ್ರವಾದ ಸರಕಾರ ರಚಿಸುವ ಭರವಸೆಯನ್ನು ಹೊಂದಿದೆ.

ಮೆಹ್ತಾಬ್ ಮಂತ್ರಿ ಮಂಡಲ ರಾಜೀನಾಮೆ ಸಲ್ಲಿಸಬೇಕೆಂದು ಆದೇಶವಿತ್ತಿದ್ದ ಕಾಂಗ್ರೆಸ್ ಹೈ ಕಮಾಂಡ್, ತನ್ನ ನಿರ್ಧಾರವನ್ನು ಬದಲಿಸಿದೆ. ತಮ್ಮ ಸಂಪುಟದ ರಾಜೀನಾಮೆಯನ್ನು ಒತ್ತಾಯ ಮಾಡದೆ ಅಧಿಕಾರ ಮುಂದುವರಿಸುವ ಸೂಚನೆಗಳು ಕಾಣಬರುತ್ತಿವೆ. ರಾಜ್ಯಪಾಲರು ಈಗಾಗಲೇ ಸರಕಾರ ಶಾಸನ ಸಭೆಯಲ್ಲಿ ಬಹುಸಂಖ್ಯೆಯಿರುವ ಪಕ್ಷವನ್ನು ಸರಕಾರ ರಚಿಸಲು ಆಹ್ವಾನಿಸಿರುವುದಾಗಿ ತಿಳಿಸಿದ್ದಾರೆ.

ಪಾಕೀಸ್ತಾನದ ಪ್ರಚೋದಕರ ಕೃತ್ಯ

ಅಸ್ಸಾಂ ಗಡಿಪ್ರದೇಶದಲ್ಲಿ ಪಾಕೀಸ್ಥಾನ ಪಡೆಗಳು ಕಳೆದ ಕೆಲವು ದಿನಗಳಿಂದ ಒಂದೇ ಸಮನೆ ಗುಂಡಿನ ಮಳೆಗರೆಯುತ್ತಿದೆ. ಆಸ್ಸಾಂಗಡಿ ಪ್ರದೇಶದಲ್ಲಿರುವ ದಾಮ್ಕಿ ಗ್ರಾಮದ ಮೇಲೆ ಒಂದೇ ಸಮನೆ ಗುಂಡು ಹಾರಿಸಲ್ಪಡುತ್ತಿದೆ. ಆ ಪ್ರದೇಶದಿಂದ ನಿವಾಸಿಗಳನ್ನು ಸುರಕ್ಷಿತ ಸ್ಥಳಗಳಿಗೆ ರವಾನಿಸಲಾಗಿದೆ. ವಿನಾ ಕಾರಣವಾಗಿ ಭಾರತ ಗಡಿಯನ್ನು ಅತಿಕ್ರಮಿಸಿ, ಪಾಕೀಸ್ತಾನದ ಪಡೆಗಳು ಗುಂಡು ಹಾರಿಸುತ್ತಿರುವುದು ಪ್ರಚೋದಕರ ಕೃತ್ಯವಾಗಿದೆ. ಭಾರತ ಸರಕಾರವು ಈಗಾಗಲೇ ಈ ಬಗ್ಗೆ ತನ್ನ ಪ್ರತಿಭಟನೆಯನ್ನು ಪಾಕೀಸ್ತಾನ ಸರಕಾರಕ್ಕೆ ಸೂಚಿಸಿದೆ. ಪಾಕೀಸ್ತಾನದ ಸೇನಾ ಪಡೆಗಳ ಈ ದುಷ್ಕೃತ್ಯವನ್ನು ತಡೆಗಟ್ಟದಿದ್ದಲ್ಲಿ ಪರಿಣಾಮ ವಿಪರೀತಗೊಳ್ಳುವುದರಲ್ಲಿ ಸಂಶಯವಿಲ್ಲ.

ಲೆಬನಾನ್‌ನಲ್ಲಿ ಉತ್ಕಟ ಪರಿಸ್ಥಿತಿ

ಕಳೆದ 11 ದಿನಗಳಿಂದ ಮಧ್ಯಪ್ರಾಚ್ಯ ರಾಷ್ಟ್ರವಾದ ಲೆಬನಾನನಲ್ಲಿ ಅಧ್ಯಕ್ಷ ಚಮೋನ್‌ರ ಸರಕಾರದ ವಿರುದ್ಧ ಜನತೆಯ ದಂಗೆಯ ಪರಿಸ್ಥಿತಿಯು ತೀವ್ರಗೊಂಡಿದೆ. ದಂಗೇಕೋರ ಶಕ್ತಿಗಳು ಈಗಾಗಲೇ ಚಮೋನ್ ಸರಕಾರದ ವಿರುದ್ಧ ಪ್ರತಿ ಸರ್ಕಾರವನ್ನು ಸ್ಥಾಪಿಸಿದೆಯೆಂದು ವರದಿಯಾಗಿದೆ.

ಲೆಬನಾನಿನ ಆಂತರಿಕ ಬಿಕ್ಕಟ್ಟಿನಲ್ಲಿ, ಸಾಮ್ರಾಜ್ಯವಾದೀ ಶಕ್ತಿಗಳು ಹಸ್ತಕ್ಷೇಪ ನಡೆಸಲು ಯತ್ನಿಸುತ್ತಿರುವುದರಿಂದ ಪರಿಸ್ಥಿತಿ ಹದಗೆಟ್ಟಿದೆ. ಪಶ್ಚಿಮ ರಾಷ್ಟ್ರಗಳ ಪರ ಧೋರಣೆ ಅನುಸರಿಸುತ್ತಿರುವ ಇಂದಿನ ಲೆಬನಾನ್ ಸರಕಾರದ ವಿರುದ್ಧ ನಡೆಯುತ್ತಿರುವ ಜನತೆಯ ಹೋರಾಟವನ್ನು ಹತ್ತಿಕ್ಕಲು ಯತ್ನಿಸಲಾಗುತ್ತಿದೆ. ಅಮೇರಿಕವು ಲೆಬನಾನ್ ಸರಕಾರಕ್ಕೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುತ್ತಿದೆ. ಅಧ್ಯಕ್ಷ ಚಮೋನ್‌ರವರು ಕೇಳಿಕೊಂಡಲ್ಲಿ ಅಮೆರಿಕವು ಸೈನ್ಯಪಡೆಗಳನ್ನು ಸಹ ಕಳಿಸಲು ಸಿದ್ಧವಿರುವುದಾಗಿ ಅಮೆರಿಕದ ವಿದೇಶಾಂಗ ಸಚಿವ ಜಾನ್ ಫಾಸ್ಟರ್ ಡಲ್ಲೆಸ್ ಘೋಷಿಸಿದ್ದಾರೆ. ಮಧ್ಯ ಪ್ರಾಚ್ಯದಲ್ಲಿ ತಮ್ಮ ಹಿಡಿತವನ್ನು ಭದ್ರಗೊಳಿಸಿಕೊಳ್ಳಲು, ಅಮೆರಿಕನ್ ಸಾಮ್ರಾಜ್ಯವಾದಿಗಳು ಯತ್ನಿಸುತ್ತಿದ್ದಾರೆ. ಇದರಲ್ಲಿ ಯಶಸ್ವಿಯಾದಲ್ಲಿ, ಸ್ವತಂತ್ರ ರಾಷ್ಟ್ರಗಳಾದ ಈಜಿಪ್ಟ್, ಸಿರಿಯಾ ಮೊದಲಾದುವಗಳ ಸ್ವಾತಂತ್ರಕ್ಕೆ ಧಕ್ಕೆ ಬರುತ್ತದೆ, ಅಲ್ಲದೆ ಮಧ್ಯ ಪ್ರಾಚ್ಯದಲ್ಲಿ ಶಾಂತಿಗೆ ಭಂಗ ಬರುತ್ತದೆ.

ಸೋವಿಯತ್ ಯೂನಿಯನ್ ಈ ಬಗ್ಗೆ ಪಶ್ಚಿಮ ರಾಷ್ಟ್ರಗಳಿಗೆ ಎಚ್ಚರಿಕೆಯನ್ನಿತ್ತಿದೆ. ಲೆಬನಾನಿನ ಆಂತರಿಕ ವ್ಯವಹಾರದಲ್ಲಿ ಪಶ್ಚಿಮ ರಾಷ್ಟ್ರಗಳು ಪ್ರವೇಶಿಸಿದಲ್ಲಿ, ಅದರ ಪರಿಣಾಮವು ತೀವ್ರವಾಗಿರುತ್ತದೆ ಎಂದೂ, ಅದು ಮಧ್ಯ ಪ್ರಾಚ್ಯದಲ್ಲಿ ಶಾಂತಿಗೆ ಭಂಗ ತರುವುದಷ್ಟೇ ಅಲ್ಲದೆ, ಸ್ವಾತಂತ್ರ್ಯಕ್ಕೂ ಲೆಬನಾನಿನ ಅಸ್ತಿತ್ವಕ್ಕೂ ಧಕ್ಕೆ ತರುತ್ತದೆಂದು ಸೋವಿಯತ್ ಸರಕಾರ ತಿಳಿಸಿದೆ.

ಸ್ವತಂತ್ರ ಅರಬ್ ರಾಷ್ಟ್ರವಾದ ಸಂಯುಕ್ತ ಅರಬ್ ಗಣತಂತ್ರ (ಈಜಿಪ್ಟ್-ಸಿರಿಯ) ದ ಜನತೆಯು ದಂಗೆಕೋರರಿಗೆ ವಿದೇಶೀ ಸೈನ್ಯಗಳನ್ನು ಎದುರಿಸಲು ನೆರವೀಯಲು ಮುಂದೆ ಬರಬೇಕೆಂದು ಕರೆಯಿತ್ತಿದೆ.

ಅಮೆರಿಕ ಮತ್ತು ಬ್ರಿಟನ್‌ಗಳು ಲೆಬನಾನಿನ ಬಿಕ್ಕಟ್ಟಿನಲ್ಲಿ ಕಾಲಿರಿಸಲು ಸಮಯ ಕಾಯುತ್ತಿದೆ. ಸಾಮ್ರಾಜ್ಯವಾದಿಗಳು ಪ್ರವೇಶಿಸಿದಲ್ಲಿ ಇದೇ ಮಧ್ಯ ಪ್ರಾಚ್ಯದಲ್ಲಿ ಶಾಂತಿಗೆ ಭಂಗ ಬರುವುದು. ಸಾಮ್ರಾಜ್ಯಶಾಹೀ ಶಕ್ತಿಗಳು ಆಂತರಿಕ ವ್ಯವಹಾರಗಳಲ್ಲಿ ಪ್ರವೇಶಿಸುವುದನ್ನು ತೀವ್ರವಾಗಿ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳು ಶಾಂತಿ ಶಕ್ತಿಗಳು ವಿರೋಧಿಸಬೇಕಾಗಿದೆ.

ತೀವ್ರಗೊಳ್ಳುತ್ತಿರುವ ಫ್ರೆಂಚ್ ಸಾಮ್ರಾಜ್ಯ ಶಾಹಿಯ ಬಿಕ್ಕಟ್ಟು

ಆಲ್ಜೀರಿಯದಲ್ಲಿ ಸೈನ್ಯ ಪಡೆಯ ಒಳಸಂಚು ಯಶಸ್ವಿಯಾದಂದಿನಿಂದ ಆರಂಭವಾದ ಫ್ರೆಂಚ್ ಸಾಮ್ರಾಜ್ಯವಾದಿಗಳ ಬಿಕ್ಕಟ್ಟು ತೀವ್ರಗೊಂಡಿದೆ. ಫ್ರಾನ್ಸ್‌ನಿಂದ ಹಿಂದೆ ಆಲ್ಜೀರಿಯದಲ್ಲಿ ಜನರಲ್ ಆಗಿದ್ದ ಜನರಲ್ ಸೊಸುಲೆ ಸರಕಾರದ ಕಣ್ಣು ತಪ್ಪಿಸಿ, ಆಲ್ಜೀರಿಯಕ್ಕೆ ಹೋಗಿದ್ದಾರೆ. ಅವರಿಗೆ ಅಲ್ಲಿಯ ಫ್ರೆಂಚ್ ವಲಸೆಗಾರರು ಮತ್ತು ಸೈನ್ಯ ಪಡೆಗಳು ಸ್ವಾಗತವನ್ನು ಕೋರಿವೆ. ಈಗ ಆಲ್ಜೀರಿಯದಲ್ಲಿ ಸ್ಥಾಪಿಸಲಾಗುತ್ತಿರುವ ಸಾರ್ವಜನಿಕ ರಕ್ಷಣಾ ಸರಕಾರದ ಅಧ್ಯಕ್ಷರನ್ನಾಗಿ ಅವರನ್ನು ನೇಮಿಸುವ ಸೂಚನೆಯಿದೆ.

ಮೇ 19ರಂದು ಫ್ರಾನ್ಸ್‌ನಲ್ಲಿ ಜನರಲ್ ಚಾರ್ಲ್ಸ್ ಡಿಗಾಲೆಯವರು ಪತ್ರಿಕಾಗೋಷ್ಠಿಯಲ್ಲಿ ಮಾಡಿರುವ ಹೇಳಿಕೆಯು ಬಿಕ್ಕಟ್ಟನ್ನು ಇನ್ನೂ ತೀವ್ರಗೊಳಿಸಿದೆ. ಡಿಗಾಲೆಯವರು ತಾವು ಫ್ರಾನ್ಸ್‌ನ ರಾಜ್ಯಾಂಗ ಘಟನೆಗೆ ಬದ್ಧನಾಗಿದ್ದುಕೊಂಡು

(೯ನೇ ಪುಟ ನೋಡಿ)

ನಿಜಲಿಂಗಪ್ಪನವರ ಮಂತ್ರಿ ಮಂಡಲ ಉರುಳಿಸಲು ಮೊರಾರ್ಜಿ ದೇಸಾಯಿ ಕೈವಾಡ!

ಮೈಸೂರು ವಿಧಾನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು 8ನೇ ತಾರೀಕಿನ ದಿವಸ ಶ್ರೀ ಬಿ. ಡಿ. ಜತ್ತಿಯವರನ್ನು ಪಕ್ಷದ ಧುರೀಣರನ್ನಾಗಿ ಆರಿಸಿ, ಮೈಸೂರು ಕಾಂಗ್ರೆಸ್ಸಿನಲ್ಲಿ ಕಳೆದೆರಡು ತಿಂಗಳುಗಳಿಂದ ಒಂದೇ ಸವನೆ ನಡೆದಿದ್ದ ಬಿಕ್ಕಟ್ಟನ್ನು ತಾತ್ಪೂರ್ತಿಕವಾಗಿ ಬಗೆಹರೆಸಿತು. ತಮ್ಮ ಪಕ್ಷದ ಸದಸ್ಯರ ಮುಂಧೋರಣೆಯನ್ನರಿತಿದ್ದ ಶ್ರೀ ನಿಜಲಿಂಗಪ್ಪನವರು ಎರಡು ದಿವಸಗಳ ಮುಂಚಿತವಾಗಿಯೇ ತಮ್ಮ ಮಂತ್ರಿ ಮಂಡಲದ ರಾಜೀನಾಮೆಯನ್ನು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಶ್ರೀಮನ್ನಾರಾಯಣರಿಗೆ ಒಪ್ಪಿಸಿದ್ದರು. ನವಮೈಸೂರು ರಾಜ್ಯದ ಮೊದಲನೆಯ ಮಂತ್ರಿಮಂಡಲ ಅನಪೇಕ್ಷಿತ ರೀತಿಯಲ್ಲಿ ಮುಕ್ತಾಯಗೊಂಡಿತು. ಕರ್ನಾಟಕ ಕಾಂಗ್ರೆಸ್ಸಿನಲ್ಲಿಯ ಜಾತೀಯತೆ, ಅಧಿಕಾರ ಲಾಲಸೆಗಳ ಒಳಜಗಳವನ್ನರಿತ ಜನತೆ "ಜತ್ತಿ ಮಂತ್ರಿ ಮಂಡಲ" ಹೆಚ್ಚು ದಿವಸ ಬಾಳಲಾರದೆಂದು ಭವಿಷ್ಯ ಹೇಳುತ್ತಿರುವರು.

ನಿಜಲಿಂಗಪ್ಪ ಮಂತ್ರಿ ಮಂಡಲದ ವಿರೋಧಿಗಳು ಈ ಮಂತ್ರಿ ಮಂಡಲದ ವಿರುದ್ಧ ಯಾವುದೇ ಗಂಭೀರ ಆರೋಪಗಳನ್ನು ಹೊರಿಸಿದ್ದಿಲ್ಲ. ಮೈಸೂರು ಸರಕಾರದ ಆಡಳಿತೆ ನಿರ್ಬಲವಾಗಿದೆಂಬ ಸರ್ವಸಾಧಾರಣ ಆರೋಪಗಳನ್ನಷ್ಟೇ ಮುಂದೆ ಮಾಡಿ, ಚೆನ್ನಯ್ಯ, ಹನುಮಂತಯ್ಯ, ಅಂಬ್ಲಿ ಗುಂಪಿನವರು ನಿಜಲಿಂಗಪ್ಪನವರನ್ನು ಉರುಳಿಸಿ, ಜತ್ತಿಯವರನ್ನು ಆರಿಸಿ ತಂದರು. ಕಳೆದೆರಡು ತಿಂಗಳ ಕಾಂಗ್ರೆಸ್ಸಿನಲ್ಲಿಯ ಬಿಕ್ಕಟ್ಟು ಈ ಗುಂಪಿನವರ ಅಧಿಕಾರ ಲಾಲಸೆಯಲ್ಲದೆ ಮತ್ತೇನಿಲ್ಲೆಂಬುದು ಎಲ್ಲರಿಗೆ ಗೊತ್ತು. ಕಾಂಗ್ರೆಸ್ ಹೈಕಮಾಂಡಿನವರು, ಮಂತ್ರಿಮಂಡಲದ ವಿರುದ್ಧ ನಿಮ್ಮ ಆರೋಪಗಳೇನೆಂದು ವಿಚಾರಿಸಲು, ವಿರೋಧಿ ಗುಂಪಿನವರು "ನಿಜಲಿಂಗಪ್ಪ ಮಂತ್ರಿ ಮಂಡಲ ಬಹುಸಂಖ್ಯಾಕ ಜನರಿಗೆ ಬೇಡಾಗಿದೆ. ಆದ ಕಾರಣ ಅವರು ರಾಜೀನಾಮೆ ಕೊಡಬೇಕು" ಎಂದಿಷ್ಟೇ ಕೊನೆಯ ತನಕ ಹೇಳುತ್ತ ಬಂದರು.

ತಾ. 29—3—58ರಂದು ಶ್ರೀ ನಿಜಲಿಂಗಪ್ಪನವರು ಸುದ್ದಿಗಾರರೊಂದಿಗೆ ಮಾತನಾಡುತ್ತ "ಮೈಸೂರು ವಿಧಾನ ಮಂಡಲದ ಕಾಂಗ್ರೆಸ್ ಪಕ್ಷದ ಭಿನ್ನಾಭಿಪ್ರಾಯ ಗುಂಪಿನವರಿಗೆ ಏನು ಬೇಕಾಗಿದೆ, ಅವರ ತೊಂದರೆಗಳೇನೆಂಬುನ್ನು ನಾನಿನ್ನೂ ಅರಿಯಬೇಕಾಗಿದೆ" ಎಂದು ಹೇಳಿದರು. ನಿಜಲಿಂಗಪ್ಪನವರು ಈಗ ಅಧಿಕಾರ ಬಿಟ್ಟುಕೊಟ್ಟರೂ ಅವರ ಸಂಶಯಕ್ಕಿನ್ನೂ ಉತ್ತರ ದೊರೆತಂತೆ ಕಂಡುಬರುವುದಿಲ್ಲ ಮತ್ತು ಉತ್ತರ ಸಿಗುವುದೂ ಇಲ್ಲ.

ಕರ್ನಾಟಕ ಪ್ರಾಂತವಾದಾಗ ನಿಜಲಿಂಗಪ್ಪನವರನ್ನು ಗದ್ದುಗೆಗೇರಿಸಿದವರೂ ಉತ್ತರ ಕರ್ನಾಟಕದ ಅಂಬ್ಲಿ ಗುಂಪಿನವರೇ. ಈಗ ಅವರನ್ನು ಕೆಳಗಿಳಿಸಿದವರೂ ಅದೇ ಗುಂಪಿನವರು. ಯಾಕೆಂದರೆ ಕರ್ನಾಟಕ ಪ್ರಾಂತ ರಚನೆಯಾಗುವ ಕೆಲವು ತಿಂಗಳ ಮುಂಚಿತವಾಗಿ ಕೆ. ಪಿ. ಸಿ. ಸಿ. ಅಧ್ಯಕ್ಷರ ಚುನಾವಣೆಯ ಪ್ರಶ್ನೆ ಬಂದಾಗ, ಬಿಜಾಪುರ ಚನ್ನಬಸಪ್ಪ ಅಂಬ್ಲಿಯವರು ಮಂಗಳೂರಿನ ಶಕುನಿಯಾದ ಶ್ರೀ ಶ್ರೀನಿವಾಸ ಮಲ್ಯರ ಸಹಾಯದಿಂದ, ನಿಜಲಿಂಗಪ್ಪನವರನ್ನು ಸೋಲಿಸಿ ಅಧ್ಯಕ್ಷರಾಗಿ ಆರಿಸಿಬಂದಿದ್ದರು. ಆದರೆ ಕರ್ನಾಟಕ ಪ್ರಾಂತ ರಚನೆಯಾದಾಗ ಸಾರ್ವಜನಿಕ ಒತ್ತಾಯಕ್ಕೆ ಮಣಿದು ಅಂಬ್ಲಿಯವರು ಹನುಮಂತಯ್ಯ — ಚನ್ನಯ್ಯನವರ ವಿರುದ್ಧ ನಿಜಲಿಂಗಪ್ಪನವರಿಗೆ ಬೆಂಬಲ ಕೊಟ್ಟರೂ ಇವರ ಉಪಕಾರ ಸ್ಮರಿಸಿ ನಿಜಲಿಂಗಪ್ಪನವರು ಅಂಬ್ಲಿಯವರಿಗೂ ಮಂತ್ರಿ ಪದವಿ ಕೊಡುವವರಿದ್ದರು. ಅನಾರೋಗ್ಯದ ನಿಮಿತ್ತ ಅಂಬ್ಲಿಯವರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ಇದರಿಂದ ಅಸಂತುಷ್ಟರಾದ ಅಂಬ್ಲಿಯವರು ತನಗಲ್ಲದಿದ್ದರೂ, ತನ್ನವರಾದ ಬಸಪ್ಪ ಜತ್ತಿಯವರಿಗೆ ಮಂತ್ರಿ ಪದ ಸಿಗಬೇಕೆಂದು ಪ್ರಯತ್ನ ಮಾಡಿದರು. ಕಂದಾಯ ಮಂತ್ರಿಗಳಾದ ಬೆಳಗಾವಿಯ ಎಂ. ಪಿ. ಪಾಟೀಲರ ಆರೋಗ್ಯ ನೆಟ್ಟಗಿಲ್ಲದಿರುವುದರಿಂದ, ಇವರ ಜಾಗದಲ್ಲಿ ಜತ್ತಿಯವರನ್ನು ನೇಮಿಸಬೇಕೆಂಬ ಸೂಚನೆ ಬಂದಿತ್ತು. ಟೆನೆನ್ಸಿ ಕಾಯಿದೆ ಪಾಸಾಗುವ ತನಕ ಎಂ. ಪಿ. ಪಾಟೀಲರೇ ಇರಬೇಕೆಂದೂ, ಅನಂತರ ಅವರು ಮಂತ್ರಿ ಪದವನ್ನು ಜತ್ತಿಯವರ ಸಲುವಾಗಿ ಬಿಟ್ಟುಕೊಡಬೇಕೆಂದೂ, ಮುಂದಾಳುಗಳೊಳಗೆ ಒಪ್ಪಂದವಾಗಿತ್ತಂತೆ. ಆದರೆ ಉಪ ಮಂತ್ರಿಗಳನ್ನು ನೇಮಿಸಿಕೊಳ್ಳುವಾಗ, ಜತ್ತಿಯವರು ಉಪ ಮಂತ್ರಿ ಜಾಗ ಬೇಡವೆಂದರು. ಈ ಗುಂಪಿನವರಿಗೆ ಸ್ಥಾನ ಸಿಗಲಿಲ್ಲ. ಜಿಲ್ಲಾ ಅಧ್ಯಕ್ಷ ಪದ ಚುನಾವಣೆಗಳಲ್ಲಿಯೂ ಕೆಲವು ಜಿಲ್ಲೆಗಳಲ್ಲಿ ಅಸಂತುಷ್ಟರಾದವರು ಬಹಳ ಮಂದಿಯಾದರು. ಈ ಕಾರಣಗಳಿಂದ ಕರ್ನಾಟಕ ರಾಜ್ಯೋದಯವಾಗುವಾಗ ಬೇರೆ ಬೇರೆ ಗುಂಪುಗಳೊಳಗಿನ ಸಂಬಂಧ ಕಡಿದುಹೋಗಿ, ಅಧಿಕಾರ ಸ್ಥಾನ ಸಿಗದವರೆಲ್ಲ ಒಂದಾಗಿ, ನಿಜಲಿಂಗಪ್ಪ ಮಂತ್ರಿಮಂಡಲದ ವಿರುದ್ಧ ಒಳಸಂಚು ನಡೆಸಿದರು. ಹೈದರಾಬಾದ ಕರ್ನಾಟಕದ ಅಣ್ಣಾರಾವ ಗುಣಮುಖಿಯ ಗುಂಪಿನವರೂ, ಉತ್ತರ ಕರ್ನಾಟಕದ ಅಂಬ್ಲಿ ಗುಂಪಿನವರೂ, ಬಳ್ಳಾರಿಯ ಸುಬ್ರಮಣ್ಯಂ, ಮಂಗಳೂರಿನ ಕೆ. ಕೆ. ಶೆಟ್ಟಿ ಪಂಗಡದವರೆಲ್ಲ ಹಳೆ ಮೈಸೂರಿನ ಚೆನ್ನಯ್ಯ—ಹನುಮಂತಯ್ಯ ಗುಂಪುಗಳೊಡನೆ ಸೇರಿದರು. ಕರ್ನಾಟಕದ ಜನತಾಭಿವೃದ್ಧಿಯಾಗಬೇಕು, ಶಿಥಿಲವಾಗುತ್ತಿರುವ ಆಡಳಿತೆ ಸುಧಾರಣೆಯಾಗಬೇಕೆಂಬ ಉದ್ದೇಶದಿಂದ ಈ ಗುಂಪುಗಳ ಮುಂದಾಳುಗಳು ಒತ್ತಟ್ಟಿಗೆ ಸೇರಿ ನಿಜಲಿಂಗಪ್ಪನವರ ಮಂತ್ರಿಮಂಡಲದ ವಿರುದ್ಧ ಅವಿಶ್ವಾಸ ಚಳುವಳಿ ಪ್ರಾರಂಭ ಮಾಡಲಿಲ್ಲ. ಅಧಿಕಾರದ ಯಂತ್ರ ತಮ್ಮ ಹಸ್ತಗತವಾಗಬೇಕೆಂಬದೊಂದೇ ಉದ್ದೇಶ ಇವರಿಗಿದ್ದಂತೆ ಕಂಡುಬರುತ್ತದೆ.

ನಿಜಲಿಂಗಪ್ಪನವರು ಮೃದು ಹೃದಯದವರೂ ನಿಸ್ವಾರ್ಥಿಗಳೂ ಎಂದು ಎಲ್ಲರೂ ಹೇಳುತ್ತಿದ್ದರೂ ಕೂಡ ಆಡಳಿತೆ ನಡೆಸುವುದರಲ್ಲಿ ಇವರು ಯಶಸ್ವಿಯಾಗಿಲ್ಲೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆಡಳಿತೆ ಶಿಥಿಲತೆಯ ಕಾರಣವನ್ನೇ ಮುಂದೆ ಮಾಡಿ ಈ ಹೊತ್ತು ನಿಜಲಿಂಗಪ್ಪನವರ ಮಂತ್ರಿಮಂಡಲವನ್ನು ಉರುಳಿಸಲಾಯಿತು. ಅಂಬ್ಲಿ ಗುಂಪಿನವರಾದ ಜತ್ತಿಯವರಿಗೆ ನಿಜಲಿಂಗಪ್ಪನವರು ತಮ್ಮ ಮಂತ್ರಿ ಮಂಡಲದಲ್ಲಿ ಸೇರಿಸಿಕೊಂಡಿದ್ದರೆ, ಅವರ ಮಂತ್ರಿಮಂಡಲ ಈ ರೀತಿ ಅವಿಸ್ವಾಸಕ್ಕೆ ಎರವಾಗುತ್ತಿರಲಿಲ್ಲ. ಅಂಬ್ಲಿ ಗುಂಪಿನವರ ಬೆಂಬಲದಿಂದ ಅವರ ಮಂತ್ರಿಮಂಡಲ ಜೀವಂತ ಉಳಿಯುತ್ತಿತ್ತು. ಆದ ಕಾರಣ ಅಂಬ್ಲಿ ಗುಂಪಿನವರು ಈಗಿನ ಪರಿಸ್ಥಿತಿಯಲ್ಲಿ ಕರ್ನಾಟಕದ "ಕಿಂಗ್ ಮೇಕರ್ಸ್"(ರಾಜರನ್ನಾಗಿ ಮಾಡುವವರು) ಎಂದರೆ ತಪ್ಪಾಗಲಾರದು. ಅಂಬ್ಲಿ—ಜತ್ತಿಯವರು ಮೊರಾರ್ಜಿ ದೇಸಾಯರಿಗೆ "ಬೇಕಾದವರು." "ನೆಹರೂ ನಂತರ ಯಾರು?" ಎಂಬ ಪ್ರಶ್ನೆ ಹಲವಾರು ಸಲ ದೇಶದ ಮುಂದೆ ಕೇಳಲ್ಪಟ್ಟಿತ್ತು. ಕಾಂಗ್ರೆಸ್ಸಿನಲ್ಲಿ ನೆಹರೂರವರ ಉತ್ತರಾಧಿಕಾರಿಯಾಗಲಿಕ್ಕೆ ಕೆಲವರಾದರೂ ಪ್ರಯತ್ನ ಮಾಡುತ್ತಿರಬೇಕು. ಇವರ ಪೈಕಿ ಮೊರಾರ್ಜಿ ದೇಸಾಯರೂ ಒಬ್ಬರು. ಮುಂಬಯಿಯ "ದೊಡ್ಡ ಮನುಷ್ಯ"ರೆಂದೆನಿಸಿಕೊಂಡಿದ್ದ ಎಸ್. ಕೆ. ಪಾಟೀಲರಿಗೆ ಕೇಂದ್ರದಲ್ಲಿ ಮಂತ್ರಿ ಪದ ದೊರೆತಾಗ, ಇವರ ಸಂಘಟನಾ ಶಕ್ತಿಗೆ ಮಹತ್ವ ಸಿಗಬಹುದೆಂದು ಎಷ್ಟೋ ಜನರು ಭಾವಿಸಿದ್ದರು. ಆದರೆ ಇವರು ವಲ್ಲಭಾಯಿ ಪಟೇಲರ ಗುಂಪಿನವರಾದ್ದರಿಂದ, ಇವರು ನೆಹರೂರವರ "ಮೆಚ್ಚಿಗೆಯ ಮಗ"ನಾಗಲಿಲ್ಲ. ಮೊರಾರ್ಜಿದೇಸಾಯರು ಮೊದಲಿನಿಂದಲೂ ನೆಹರೂರವರ ಹಿತಕಟಾಕ್ಷಕ್ಕೆ ಬಲಿಯಾದವರು. ಮೆಚ್ಚಿಗೆಯನ್ನು ಪಡೆದವರು. ಕೇಂದ್ರ ಮಂತ್ರಿಮಂಡಲದಲ್ಲಿ ಸೇರಿಸಿಕೊಂಡ ನಂತರ, ಅಖಿಲ ಭಾರತ ರಾಜಕಾರಣದಲ್ಲಿ ಹೆಚ್ಚಿನ ಪ್ರಾಶಸ್ತ್ಯ ಪಡೆಯಬೇಕೆಂಬ ಆಕಾಂಕ್ಷೆ ಮೊರಾರ್ಜಿಯವರಲ್ಲಿ ಒಡಮೂಡಿರಬೇಕು. ಬೇರೆ ಬೇರೆ ಪ್ರಾಂತಗಳಲ್ಲಿ ತನ್ನ ಗುಂಪುಗಳನ್ನು ರಚಿಸಬೇಕೆಂಬ ಹವಣಿಕೆಯಿವರಲ್ಲಿದೆ. ಎಲ್ಲಾ ರಾಜ್ಯಗಳಲ್ಲಿ ತನ್ನ ಬೆಂಬಲಿಗರ ಸಂಖ್ಯೆ ಬೆಳೆದರೆ ಕಾಂಗ್ರೆಸ್ಸಿನ ಮುಂದಿರುವ "ನೆಹರೂರ ನಂತರ ಯಾರು?" ಎಂಬ ಪ್ರಶ್ನೆಗೆ "ನೆಹರೂ ನಂತರ ಮೊರಾರ್ಜಿ" ಎಂದು ಉತ್ತರ ಬರುವಂಥಾ ವಾತಾವರಣ ಹುಟ್ಟಿಸಬೇಕೆಂಬ "ಆಕಾಶದಲ್ಲಿ ಅರಮನೆ ಕಟ್ಟುವ" ಹಂಚಿಕೆಯನ್ನು ಮೊರಾರ್ಜಿ ದೇಸಾಯರು ಹೆಣೆಯುತ್ತಿದ್ದಾರೆಂದು ತಿಳಿದುಬರುತ್ತದೆ.

ಮುಂಬಯಿ ಮಂತ್ರಿ ಮಂಡಲ ಮೊರಾರ್ಜಿ ಕೈಯಲ್ಲಿದ್ದಂತೆ. ಕರ್ನಾಟಕದಲ್ಲಿ ಕೂಡ ತಮ್ಮ ಹಿತೈಷಿಗಳಾದ ಅಂಬ್ಲಿ ಜತ್ತಿ ಗುಂಪಿನವರ ಮಂತ್ರಿ ಮಂಡಲ ರಚಿಸಬೇಕೆಂಬ ಆಕಾಂಕ್ಷೆ ಅವರಲ್ಲಿತ್ತು. ಮಂಗಳೂರಿನ ಕುಟಿಲನೀತಿಯ ರಾಜಕಾರಣಿಗಳಾದ ಶ್ರೀನಿವಾಸ ಮಲ್ಯರು ನೆಹರೂರವರ ನೆಚ್ಚಿನವರು. ಕರ್ನಾಟಕದ ರಾಜಕೀಯದ ಕುರಿತು ಮಲ್ಯರ ಯಾವುದೇ ಸಲಹೆಗಳಿಗೆ ನೆಹರೂರವರು ಬಹಳ ಮಹತ್ವ ಕೊಡುತ್ತಿರುವರಂತೆ. ಅಂಬ್ಲಿ ಗುಂಪಿಗೆ ಮಲ್ಯರ ಬೆಂಬಲ ಸಿಕ್ಕಿದ್ದರಿಂದ ಮೊರಾರ್ಜಿಯವರಿಂದಾಗಿ ಹೈಕಮಾಂಡಿನ ಆಶೀರ್ವಾದ ಪಡೆಯಲಿಕ್ಕೆ ಅಂಬ್ಲಿ ಗುಂಪಿನವರಿಗೆ ಅನುಕೂಲವಾಯಿತು.

ಮಾರ್ಚ್ ತಿಂಗಳಲ್ಲಿ ನಿಜಲಿಂಗಪ್ಪಾ ಮಂತ್ರಿಮಂಡಲದ ವಿರುದ್ಧ ಸಹಿ ಸಂಗ್ರಹ ನಡೆದಾಗ, ಕಾಂಗ್ರೆಸ್ ಅಧ್ಯಕ್ಷ ಢೇಬರರೂ, ನೆಹರೂರವರು, ಈ ಪದ್ಧತಿಯನ್ನು ಕಟುವಾಗಿ ಟೀಕಿಸಿದರು. ಹೈದರಾಬಾದಿನಲ್ಲಿ ಢೇಬರ ಭಾಯಿಯವರು ಹೀಗೆ ಸಹಿ ಸಂಗ್ರಹ ಮಾಡುವವರ ಮೇಲೆ ಶಿಸ್ತುಭಂಗ ಕ್ರಮ ತೆಗೆದುಕೊಳ್ಳಲಾಗುವುದೆಂದು ಘರ್ಜಿಸಿದರು. ವಿರೋಧಿ ಗುಂಪಿನವರು ಮಂತ್ರಿ ಮಂಡಲದ ಮೇಲೆ ನಿಶ್ಚಿತ ಆರೋಪ ಹೊರಿಸದಿದ್ದಾರೆ, ಅವರ ಕೃತಿಗೆ ಪುಷ್ಟಿ ದೊರೆಯಲಾರದೆಂದು ಹೇಳಿದ್ದರು. ಮೊರಾರ್ಜಿ ದೇಸಾಯರು ಆರ್ಥಿಕ ಮಂತ್ರಿಗಳಾದ ಕೂಡಲೇ ಬೆಂಗಳೂರಿಗೆ ಪ್ರಯಾಣ ಬೆಳೆಸಿ, ವಿರೋಧಿ ಗುಂಪಿನವರನ್ನು ಕಂಡು ವಿಚಾರ ವಿನಿಮಯಮಾಡಿ, ದಿಲ್ಲಿಗೆ ಹೋಗಿ ನೆಹರೂ–ಢೇಬರರ ಕಿವಿಯಲ್ಲೇನು ತುಂಬಿದರೋ ತಿಳಿಯಲಿಲ್ಲ. ಮೊರಾರ್ಜಿಯವರ ಬೆಂಗಳೂರು ಸಂದರ್ಶನದ ತರುವಾಯ ಢೇಭರರ ಸಿಂಹ ಘರ್ಜನೆ ತಣ್ಣಗಾಯಿತು. ಇದರರ್ಥವೇನಂದರೆ, ನಿಜಲಿಂಗಪ್ಪ ಮಂತ್ರಿ ಮಂಡಲದ ವಿರುದ್ಧ ವಿರೋಧಿ ಗುಂಪಿನವರ ಕೃತಿಗೆ ಹೈಕಮಾಂಡಿನಲ್ಲಿ ಬೆಂಬಲವಿಲ್ಲೆಂದು ಏನು ತೋರುತ್ತಿತ್ತು, ಇದನ್ನು ಅಲ್ಲಗಳೆದು, ಬಹುಸಂಖ್ಯಾತ ವಿಧಾನ ಸಭಾಸದಸ್ಯರ ಅಭಿಪ್ರಾಯಕ್ಕೆ ಮನ್ನಣೆ ಕೊಡದಿರುವುದೆಂದರೆ ಪ್ರಜಾಪ್ರಭುತ್ವವನ್ನು ಕೊಲೆಮಾಡಿದಂತೆಯಾಗುತ್ತದೆ, ಕಾರಣ ಹೊಸ ಮಂಡಲ ರಚಿಸುವುದೇ ಯೋಗ್ಯ ಮಾರ್ಗವೆಂದು ಹೈಕಮಾಂಡ್ ಒಪ್ಪುವಂತೆ ಮಾಡಿದ ಸಂಪೂರ್ಣ ಜವಾಬ್ದಾರಿ ಮೊರಾರ್ಜಿ ದೇಸಾಯರದ್ದಂತೆ.

.ಶ್ರೀ ಮನ್ನಾರಾಯಣರು ಬೆಂಗಳೂರನ್ನು ಸಂದರ್ಶಿಸುವ ಮುಂಚಿತವಾಗಿ ಶ್ರೀನಿವಾಸ ಮಲ್ಯರು ಚೆನ್ನಯ್ಯ–ಹನುಮಂತಯ್ಯನವರಿಗೆ ಭೆಟ್ಟಿಯಾಗಿ, ಇವರಿಬ್ಬರೂ ಮುಂದಾಳ್ತನವನ್ನು ಬೇಡಬಾರದೆಂದೂ, ಜತ್ತಿಯವರ ಮುಂದಾಳ್ತನಕ್ಕೆ ಒಪ್ಪಿಕೊಂಡರೆ, ಹೊಸ ಮಂತ್ರಿ ಮಂಡಲ ರಚಿಸುವ ನಿರ್ಣಯ ತೆಗೆದುಕೊಳ್ಳಲಾಗುವುದೆಂದು ಹೇಳಿವರೆಂದೂ ವದಂತಿಯಿದೆ. ಹೀಗೆ ಮೊರಾರ್ಜಿ–ಮಲ್ಯರ ಕುಟಿಲ ನೀತಿಯಿಂದಾಗಿ ಕರ್ನಾಟಕ ರಾಜಕಾರಣ ಕೆಡಹತ್ತಿದೆ.

ತನಗೆ ಮುಖ್ಯ ಮಂತ್ರಿ ಪದ ಸಿಗುವುದಿಲ್ಲೆಂದು ತಿಳಿದೇ "ಸಾಮೂಹಿಕ ಮುಂದಾಳುತ್ವ"ವಿರಬೇಕೆಂಬ ಘೋಷಣೆಯನ್ನು ಮುಂದೆ ಮಾಡಿದ್ದರು. ಈ ವಿರೋಧಿ ಗುಂಪಿನಲ್ಲಿ ಅಧಿಕಾರ ಬೇಡುವವರೇ ಬಹಳ ಮಂದಿಯಿರುವುದರಿಂದ, ಜತ್ತಿ ಮಂತ್ರಿ ಮಂಡಲ ಎಷ್ಟು ದಿವಸ ಬಾಳಬಹುದೆಂದು ಎಲ್ಲರೂ ಸಂಶಯಪಡುತ್ತಿರುವರು. ನಿಜಲಿಂಗಪ್ಪ ಮಂತ್ರಿ ಮಂಡಲ ಉರುಳಿಸಬೇಕೆಂಬ ಒಂದೇ ಉದ್ದೇಶದಿಂದ ಇವರೆಲ್ಲ ಒತ್ತಟ್ಟಿಗೆ ಸೇರಿದ್ದರಿಂದ, ತನ್ನ ಮುಂದಾಳ

(೬ನೇ ಪುಟ ನೋಡಿ)

ಸಾಮೂಹಿಕ ಕಮ್ಯೂನಿಸ್ಟ್ ಪಕ್ಷ ಕಟ್ಟುವುದೆಂದರೇನು?

ಎನ್. ಎಲ್. ಉಪಾಧ್ಯಾಯ

ಅಧಿಕ ಸಂಖ್ಯೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಗೆ ಸದಸ್ಯರನ್ನು ಸೇರಿಸಬೇಕೆಂಬ ಅಖಿಲ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಧೋರಣೆಯ ವಿಷಯದಲ್ಲಿ ಎರಡು ವಿಧದ ಅಭಿಪ್ರಾಯಗಳನ್ನು ಅನೇಕ ಸದಸ್ಯರೂ ಹಿತೈಷಿಗಳೂ ವ್ಯಕ್ತಪಡಿಸಿದ್ದಾರೆ. ಹೆಚ್ಚು ಸಂಖ್ಯೆಯಲ್ಲಿ ಸದಸ್ಯರನ್ನು ಸೇರಿಸುವುದರಿಂದ ಕಮ್ಯೂನಿಸ್ಟ್ ಪಾರ್ಟಿಯು ತನ್ನ ಕ್ರಾಂತಿಕಾರಿ ವೈಶಿಷ್ಟ್ಯತೆಯನ್ನು ಕಳಕೊಂಡು ಇತರ ಪಕ್ಷಗಳಂತಾಗುವುದೆಂಬ ಭಯವನ್ನು ಕೆಲವರು ಸೂಚಿಸಿದ್ದಾರೆ. ಇನ್ನು ಕೆಲವರು ಪಾರ್ಟಿಗೆ ಸದಸ್ಯರನ್ನು ಸೇರಿಸುವ ಕ್ರಮವನ್ನು ಇನ್ನೂ ಸಡಿಲಗೊಳಿಸಬೇಕೆಂದೂ, ಇತರ ಪಕ್ಷಗಳಂತೆ ಸಹಸ್ರಾರು ಸಂಖ್ಯೆಯಲ್ಲಿ ಸಾಮೂಹಿಕ ರೀತಿಯಂದ ಸದಸ್ಯರನ್ನು ಸೇರಿಸಲವಕಾಶ ಕೊಡಬೇಕೆಂದೂ ಅಭಿಪ್ರಾಯ ಪಟ್ಟಿದ್ದಾರೆ. ಇದನ್ನು ನಾವೊಪ್ಪದಿದ್ದರೆ ಹಿತೈಷಿಗಳದ್ದೇ ಒಂದು ಪ್ರತ್ಯೇಕ ಸದಸ್ಯ ವರ್ಗವನ್ನು ಆರಂಭಿಸಬೇಕಾಗುವುದು.

ಈ ಎರಡು ಅಭಿಪ್ರಾಯಗಳನ್ನು ಭಾರತ ಕಮ್ಯೂನಿಸ್ಟ್ ಪಕ್ಷವು ತಿರಸ್ಕರಿಸಿದೆ. ಕಮ್ಯೂನಿಸ್ಟ್ ಪಾರ್ಟಿಗೆ ಆದಷ್ಟು ಹೆಚ್ಚು ಸದಸ್ಯರನ್ನು ಸೇರಿಸುವ ಕ್ರಮ ಮತ್ತು ಷರತ್ತುಗಳನ್ನು ಸಡಿಲುಗೊಳಿಸಬಾರದೆಂದೂ ಪಾರ್ಟಿಯು ತೀರ್ಮಾನಿಸಿದೆ.

ಅಧಿಕ ಸಂಖ್ಯೆಯಲ್ಲಿ ಸದಸ್ಯರನ್ನು ಸೇರಿಸುವುದೇಕೆ?

ಕಮ್ಯೂನಿಸ್ಟ್ ಪಾರ್ಟಿಯು ಕಾಂಗ್ರೆಸ್ಸಿಗೆದುರಾಗಿರುವ ಮತ್ತು ಕಾಂಗ್ರೆಸ್ಸನ್ನು ಹೋಗಲಾಡಿಸಿ ಅದರ ಸ್ಥಾನದಲ್ಲಿ ಬರುವ ಪಕ್ಷವೆಂಬುದನ್ನು ಜನ ಅರಿತಿದೆ. ಎಲ್ಲಾ ಪ್ರಜಾಪ್ರಭುತ್ವವಾದಿ ಮತ್ತು ಪ್ರಗತಿಗಾಮಿ ಶಕ್ತಿಗಳನ್ನು ಒಂದುಗೂಡಿಸಿ ಕಾಂಗ್ರೆಸ್ಸಿನ ಜನ ವಿರೋಧಿ ಧೋರಣೆಗಳನ್ನು ವಿರೋಧಿಸುವ ಪಕ್ಷವೆಂದು ಸ್ಪಷ್ಟವಾಗಿದೆ. ಅಂಥಹ ಪಾರ್ಟಿಯು ತನ್ನ ಸಂಘಟನೆ ವಿಸ್ತೃತಗೊಳಿಸಿ ಬಲಪಡಿಸಲು ಕ್ರಮ ತೆಗೆದುಕೊಂಡು, ತನ್ನ ಹೋರಾಟ ಶಕ್ತಿಯನ್ನು ಅಧಿಕಗೊಳಿಸಲು ಮುಂದೆ ಬಂದಾಗ ಅದು ಎಲ್ಲರ ಗಮನವನ್ನು ಸೆಳೆಯುವುದರಲ್ಲಿ ಆಶ್ಚರ್ಯವೇನಿಲ್ಲ. ನಮ್ಮ ಪಾರ್ಟಿಯ ಘಟನೆಯಲ್ಲಾದ ಬದಲಾವಣೆಗಳು ಪಾರ್ಟಿಗೆ ಹೆಚ್ಚಿನ ರಾಷ್ಟ್ರೀಯ ಮತ್ತು ಜನಪ್ರಿಯ ರೂಪಕೊಟ್ಟಿವೆ ಮತ್ತು ಅದೇ ಸಮಯದಲ್ಲಿ ಅದರ ಗುಣ ಹೆಚ್ಚು ಕಮ್ಯೂನಿಸ್ಟ್ ಆಗಿದೆ.

ಹೊಸ ಪರಿಸ್ಥಿತಿಯ ಮುಖ್ಯ ಲಕ್ಷಣಗಳನ್ನು ತಿಳಿಯುವುದು ಅಗತ್ಯ.

ಕಳೆದೈದು ವರ್ಷಗಳಲ್ಲಿ ಭಾರತದ ರಾಜಕೀಯ ರಂಗದಲ್ಲಿ ಮಹತ್ವದ ಬದಲಾವಣೆಗಳಾಗಿವೆ. ಇದರಿಂದ ಹೊಸ ವರ್ಗ ಸಂಬಂಧಗಳೂ ಬಂದಿವೆ. ಅತಿಮುಖ್ಯವಾದ ಬೆಳವಣಿಗೆಯೆಂದರೆ ಜನತೆಯಲ್ಲಿ ಕಂಡು ಬರುವ ಜಾಗೃತಿ. ಕಮ್ಯೂನಿಸ್ಟ್ ಪಾರ್ಟಿಯು ದೊಡ್ಡ ಶಕ್ತಿಯಾಗಿ ದೇಶದ ರಾಜಕೀಯ ಜೀವನದಲ್ಲಿ ಬೆಳೆದು ಬಂದಿರುವುದು ಇದರ ಪರಿಣಾಮವಾಗಿದೆ. ಕಳೆದ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ಶೇ. 11ರಷ್ಟು ಮತಗಳಿಸಿದೆ; ಲೋಕಸಭೆಯಲ್ಲೂ, ಪಶ್ಚಿಮ ಬಂಗಾಳ ಮತ್ತು ಆಂಧ್ರ ರಾಜ್ಯಗಳಲ್ಲೂ ಮುಖ್ಯ ವಿರೋಧ ಪಕ್ಷವಾಗಿ ಬಂತು; ಕಾಂಗ್ರೆಸ್ಸಿನ ಗುತ್ತೇದಾರಿ ಅಧಿಕಾರವನ್ನು ಮುರಿದು ಕೇರಳದಲ್ಲಿ ಸರಕಾರ ರಚಿಸಿತು.

1951—52ರ ಚುನಾವಣೆಯಲ್ಲಿ ಬಿಹಾರ್, ಯು. ಪಿ. ಮಧ್ಯಪ್ರದೇಶ್ ಮತ್ತು ರಾಜಸ್ಥಾನ್ ಪ್ರಾಂತಗಳಲ್ಲಿ ನಮಗೆ ಒಂದೂ ಸ್ಥಾನ ದೊರೆಯಲಿಲ್ಲ. ಆದರೆ ಈಗ ಪ್ರತಿಯೊಂದು ರಾಜ್ಯದ ಶಾಸನ ಸಭೆಗಳಲ್ಲೂ ನಮ್ಮ ಪ್ರತಿನಿಧಿಗಳಿದ್ದಾರೆ.

1951—52ರ ಚುನಾವಣೆಲ್ಲಿ ನಮಗೆ ಒಟ್ಟು 62 ಲಕ್ಷ ಮತ ದೊರೆತ್ತಿತ್ತು. ಅದರಲ್ಲಿ ಆಂಧ್ರ ಮತ್ತು ತೆಲಂಗಾಣಗಳಲ್ಲಿ 23 ಲಕ್ಷ ಮತಬಿದ್ದು, ಇತರ ಪ್ರಾಂತಗಳಲ್ಲಿ 10 ಲಕ್ಷಕ್ಕಿಂತ ಕಡಿಮೆ ಮತಗಳಿಸಿದ್ದೆವು. ಈಸಲ ಕೇರಳದಲ್ಲಿ 23 ಲಕ್ಷ, ಪಶ್ಚಿಮ ಬಂಗಾಳದಲ್ಲಿ 19 ಲಕ್ಷ, ಆಂಧ್ರದಲ್ಲಿ 25 ಲಕ್ಷ ಮತ್ತು ಪಂಜಾಬಿನಲ್ಲಿ 10 ಲಕ್ಷಕ್ಕೆ ಹೆಚ್ಚು ಮತ ದೊರೆತಿದೆ. ಏನೂ ಶಕ್ತಿಯಿಲ್ಲದ ರಾಜ್ಯಗಳಲ್ಲೂ ನಾವು ತಕ್ಕ ಮಟ್ಟಿನ ಮತಪಡೆದಿದ್ದೇವೆ.

ಚುನಾವಣೆಯ ನಂತರವೂ ಈ ಬೆಳವಣಿಗೆ ಮುಂದರಿದಿದೆ. ಸಾಮಾನ್ಯ ಜನತೆ ವಾಮಪಕ್ಷಕ್ಕೆ ವಾಲುತ್ತಿರುವುದು ಕಂಡು ಬರುತ್ತಿದೆ.

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿಗೆ ಸೇರಿರುವ ಕಾರ್ಮಿಕ ಸಂಘಗಳ ಸಂಖ್ಯೆ ಹೆಚ್ಚಾಗಿದೆ. ಅದರ ಸದಸ್ಯತ್ವ ಮತ್ತು ವರ್ಚಸ್ಸು ಹೆಚ್ಚಾಗಿದೆ. ಪಶ್ಚಿಮ ಬಂಗಾಲ ಮತ್ತು ಬಿಹಾರಿನ ಗಣಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಇದರ ವರ್ಚಸ್ಸು ಬೆಳೆಯುತ್ತಿರುವುದು ಗಮನಾರ್ಹವಾಗಿದೆ.

ಪಶ್ಚಿಮ ಬಂಗಾಳದ ಕಮ್ಯೂನಿಸ್ಟ್ ಪತ್ರಿಕೆಯಾದ "ಸ್ವಾಧೀನತಾ" ದಿನಪತ್ರಿಕೆಗೆ 2 ಲಕ್ಷ ನಿಧಿಯ ಕರೆಗೆ ದೊರೆತ ಅದ್ಭುತ ಬೆಂಬಲ, ತಮಿಳುನಾಡ್ ಮತ್ತು ಆಂಧ್ರಗಳಲ್ಲಿ ಪಾರ್ಟಿ ನಿಧಿಗೆ ಆದ ವಸೂಲಿ ಕೇರಳದಲ್ಲಿ ಸಾಮೂಹಿಕ ಸಂಘಟನೆಗಳ ಬೆಳವಣಿಗೆ ಮತ್ತು ಇಡೀ ರಾಷ್ಟ್ರದ ಮೇಲೆ ಕೇರಳ ಸರಕಾರ ಬೀರುತ್ತಿರುವ ಪ್ರಭಾವಗಳಿಂದ ಪಾರ್ಟಿಯ ವರ್ಚಸ್ಸು ಬೆಳೆಯುತ್ತಿರುವುದು ಕಂಡುಬರುತ್ತಿದೆ.

ಸಂಯುಕ್ತಪ್ರಾಂತ ಮತ್ತು ಮಧ್ಯಪ್ರದೇಶಗಳಲ್ಲಿ ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಂದ ಇದು ಸ್ಪಷ್ಟವಾಗುತ್ತದೆ. ಯು. ಪಿ. ಯಲ್ಲಿ 14 ನಗರದಲ್ಲಿ ಬಹು ಸಂಖ್ಯಾತ ಸ್ಥಾನಗಳು ಪಾರ್ಟಿಗೆ ದೊರೆತಿವೆ. ಹಿಂದೆಲ್ಲೂ ನಮಗೆ ಬಹುಮತವಿರಲಿಲ್ಲ. ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ವಿಮರ್ಶಿ ಮಾಡುತ್ತಾ "ಬನಾರಸ್"ವೆಂಬ ದಿನಪತ್ರಿಕೆಯು "ಕಾಂಗ್ರೆಸ್ ಅಧಿಕಾರವನ್ನು ಎದುರಿಸುವುದರಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ಎಲ್ಲರಿಗಿಂತ ಮುಂದೆ ಬಂದಿದೆ"ಎಂದು ವಿವರಿಸಿದೆ. ಮಧ್ಯಪ್ರದೇಶದ ರಾಜ್ಯಪಾಲರಾದ ಡಾಕ್ಟರ್ ಖಟ್ಜುರವರು ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಮಾತಾಡುತ್ತಾ "ರಾಜ್ಯದಲ್ಲಿ ಕಮ್ಯೂನಿಸ್ಟರ ಪ್ರಭಾವ ಬೆಳೆಯುತ್ತಿದೆಂದು ಎಚ್ಚರಿಕೆ ಕೊಟ್ಟಿದ್ದಾರೆ. ಈ ಪ್ರದೇಶಗಳಲ್ಲಿ ಹಿಂದೆ ಪಾರ್ಟಿಯ ಪ್ರಭಾವ ಕಡಿಮೆಯಿತ್ತು.

ನಮ್ಮ ವರ್ಚಸ್ಸಿಗನುಗುಣವಾಗಿ ಪಾರ್ಟಿ ಸದಸ್ಯರ ಸಂಖ್ಯೆಯಿಲ್ಲ. ನಮ್ಮ ಸದಸ್ಯರ ಸಂಖ್ಯೆ ಮತ್ತು ಸಂಘಟನಾ ದುರ್ಬಲತೆ ಈಗ ಎದ್ದು ಕಾಣುತ್ತಿದೆ. ಅಧಿಕ ಸಂಖ್ಯೆಯ ಬೃಹತ್ ಕಮ್ಯೂನಿಸ್ಟ್ ಪಾರ್ಟಿಯನ್ನು ಸಂಘಟಿಸುವುದು ಈಗ ಅತ್ಯಂತ ಜರೂರು ಮತ್ತು ಅತ್ಯಗತ್ಯ ಕರ್ತವ್ಯವಾಗಿದೆ. ಸಹಸ್ರಾರು ಸಂಖ್ಯೆಯಲ್ಲಿ ಪಾರ್ಟಿಗೆ ಸದಸ್ಯರನ್ನು ಸೇರಿಸಿ ಅವರನ್ನು ಸಾಮೂಹಿಕ ಚಟುವಟಿಕೆಗೆಳೆದು, ಶಿಕ್ಷಣ ಕೊಟ್ಟು ಉತ್ತಮ ಕ್ರಿಯಾಶೀಲ ಕಮ್ಯೂನಿಸ್ಟರನ್ನಾಗಿ ಮಾಡಲು ಪಾರ್ಟಿಘಟನೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗಿತ್ತು. ಅಮೃತಸರದಲ್ಲಿ ಅದನ್ನು ಮಾಡಲಾಗಿದೆ.

ಅಧಿಕ ಸಂಖ್ಯೆಯ ಸಾಮೂಹಿಕ ಪಾರ್ಟಿಯನ್ನು ಕಟ್ಟಬೇಕೆಂಬ ಘೋಷಣೆ ಹೊಸದೇನಲ್ಲ. 1948ರಲ್ಲಿ ನಡೆದ ಎರಡನೇ ಪಾರ್ಟಿ ಅಧಿವೇಶನದ ಪೂರ್ವದಲ್ಲಿ ಈ ಪ್ರಶ್ನೆ ಬಂದಿತ್ತು. ಆಗ ಪಾರ್ಟಿ ಸದಸ್ಯರ ಸಂಖ್ಯೆ 2,000ದಿಂದ 1 ಲಕ್ಷಕ್ಕೇರಿತ್ತು. ಸೆಲ್‌ಗಳ ಬದಲು ಶಾಖೆಗಳನ್ನು ಮಾಡುವ ತಿದ್ದುಪಡಿ ತರಬೇಕೆಂಬ ಸೂಚನೆಯೂ ಬಂದಿತ್ತು. ಆದರೆ ಎರಡನೇ ಪಾರ್ಟಿ ಅಧಿವೇಶದಲ್ಲಿ ಅದು ಚರ್ಚೆಗೆ ಬರಲಿಲ್ಲ.

ಮಧುರೆಯಲ್ಲಿ ನಡೆದ ಮೂರನೇ ಪಾರ್ಟಿ ಅಧಿವೇಶನದಲ್ಲೂ ಈ ಪ್ರಶ್ನೆ ಬಂದು ಅದರಲ್ಲೂ ಸಂಘಟನಾ ನಿರ್ಣಯದಲ್ಲಿ ನಮ್ಮ ಜೊತೆಗೆ ದುಡಿದು ಹೋರಾಡುವ ಸಮರಶೀಲರನ್ನೆಲ್ಲಾ ಕೂಡಲೇ ಪಾರ್ಟಿಗೆ ಸೇರಿಸಬೇಕೆಂದು ಹೇಳಲಾಗಿತ್ತು, ಆದರೂ ಘಟನೆಯಲ್ಲಿ ಹೆಚ್ಚಿನ ಬದಲಾವಣೆ ಮಾಡಲಿಲ್ಲ.

ನಾಲ್ಕನೆಯ ಪಾಲ್ಘಾಟ್ ಕಾಂಗ್ರೆಸ್ಸಿನ ನಂತರ ಮತ್ತು ಚುನಾವಣೆ ನಂತರ ಹೊಸ ರೀತಿಯಲ್ಲಿ ಈ ಪ್ರಶ್ನೆ ಬಂತು. ನಮ್ಮ ಹೋರಾಟಗಳಲ್ಲಿ ಭಾಗವಹಿಸಿದ ಅನೇಕ ಮಂದಿ ಪಾರ್ಟಿಗೆ ಸೇರಲು ಮುಂದೆ ಬಂದರು. ಇದರ ಪರಿಣಾಮವಾಗಿ ಪಾರ್ಟಿ ಸದಸ್ಯರ ಸಂಖ್ಯೆಯನ್ನು ಇಮ್ಮಡಿಗೊಳಿಸಬೇಕೆಂಬ ಕೇಂದ್ರ ಸಮಿತಿಯ ಕರೆ ಕೆಲವೇ ತಿಂಗಳಲ್ಲಿ ಯಶಸ್ವಿಯಾಗಿ ಪೂರೈಸಿತು. ನಮ್ಮ ತೀರ್ಮಾನ ಎಷ್ಟು ಸಮಯೋಚಿತವಾದದ್ದೆಂದು ಇದರಿಂದ ತಿಳಿಯುತ್ತದೆ.

ಈಗಿನ ಪರಿಸ್ಥಿತಿಯಲ್ಲಿ ಇನ್ನೂ ಕೆಲವು ಹೊಸ ಅಂಶಗಳಿವೆ. ಈಗಿನ ಕಾಲಘಟ್ಟದಲ್ಲಿ ಶಾಂತಿಯುತ ಮಾರ್ಗದಿಂದ ಸಮಾಜವಾದವನ್ನು ಸಾಧಿಸಲು ಸಾಧ್ಯವೆಂದು ಅಂತರರಾಷ್ಟ್ರೀಯ ಪಕ್ಷಗಳೂ ನಮ್ಮ ಪಾರ್ಟಿಯೂ ಘೋಷಿಸಿದೆ. ಇದಕ್ಕೂ ಬಲವಾದ ಪಾರ್ಟಿ ಅಗತ್ಯವಿದೆ.

ಶಾಂತಿಯುತ ಸಾಧನೆಯ ದಾರಿ ಸರಳವಾದದ್ದೇನಲ್ಲ. ಪ್ರತಿಗಾಮಿಗಳ ಪ್ರತಿಭಟನೆಯನ್ನು ಯಶಸ್ವಿಯಾಗಿ ಎದುರಿಸಬೇಕಾದರೆ ಇತರ ಸುಧಾರಣಾವಾದಿ ಪಕ್ಷಗಳಂತೆ ನಾವಿದ್ದರೆ ಸಾಧ್ಯವಿಲ್ಲ. ಸಮಾಜವಾದಿ ಕ್ರಾಂತಿಕಾರಿ ಗುಣಗಳನ್ನು ಕಮ್ಯೂನಿಸ್ಟ್ ಪಾರ್ಟಿ ಪಡೆದಿರಬೇಕು. ಆದ್ದರಿಂದ ಹೊಸ ಪರಿಸ್ಥಿತಿಯ ಪೂರ್ಣ ಅವಕಾಶವನ್ನು ಪಯೋಗಿಸುವಾಗ ಮಾರ್ಕ್ಸ್–ಲೆನಿನ್‌ರವರು ತಿಳಿಸಿದ್ದ ಕಮ್ಯೂನಿಸ್ಟ್ ಪಾರ್ಟಿ ಸಂಘಟನೆಯ ಮೂಲಭೂತ ಅಂಗಳನ್ನು ನಾವು ಕಡೆಗಣಿಸಲು ಸಾಧ್ಯವಿಲ್ಲ.

ಕಮ್ಯೂನಿಸ್ಟ್ ಪಾರ್ಟಿಯು ಕಾರ್ಮಿಕರ, ರೈತರ ಮತ್ತಿತರ ಶ್ರಮಜೀವಿ ಜನತೆಯ ಪಕ್ಷವೆಂದು ನಮ್ಮ ಘಟನೆ ಸಾರಿದೆ. ಇತರ ವರ್ಗದವರು ಪಾರ್ಟಿಯಲ್ಲಿದ್ದರೂ ಮೂಲಭೂತವಾಗಿ ನಮ್ಮ ಪಾರ್ಟಿಯು ಕಾರ್ಮಿಕ ಮತ್ತಿತರ ಶ್ರಮಜೀವಿ ವರ್ಗಕ್ಕೆ ಪ್ರಾಧಾನ್ಯತೆ ಕೊಡುತ್ತದೆ. ಕಾರ್ಮಿಕ ವರ್ಗದವರನ್ನು ತರಬೇತು ಮಾಡಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಿ, ಅಧಿಕಾರ ಸ್ಥಾನಗಳಲ್ಲೂ ತರಲು ಪ್ರಯತ್ನಿಸುವುದಗತ್ಯ.

ಎರಡನೇದಾಗಿ ಮಾರ್ಕ್ಸ್–ಲೆನಿನ್ ಸಿದ್ಧಾಂತವನ್ನು ಕಮ್ಯೂನಿಸ್ಟ್ ಪಾರ್ಟಿ ಅಂಗೀಕರಿಸಿದೆ. ಈ ಸಿದ್ಧಾಂತದ ಆಧಾರದ ಮೇಲೆ ನಮ್ಮ ದೇಶದ ಪರಿಸ್ಥಿತಿಯನ್ನರಿತು ಕಾರ್ಯಕ್ರಮ, ಧೋರಣೆಗಳನ್ನು ರಚಿಸುತ್ತದೆ. ಇದಕ್ಕೆ ಪಾರ್ಟಿ ಗಮನ ಕೊಡಬೇಕಾಗಿದೆ.

ಮೂರನೇದಾಗಿ ನಮ್ಮ ಪಾರ್ಟಿಯು ಕ್ರಾಂತಿಕಾರಿ ಪಕ್ಷವಾಗಿದೆ. ಸಮಾಜವಾದಿ ಕ್ರಾಂತಿಗೆ ಉತ್ಪಾದನಾ ಶಕ್ತಿಗಳನ್ನು ಸಾಮಾಜಿಕ ಗೊಳಿಸಿ ಹೊಸ ಸಮಾಜ ಸ್ಥಾಪಿಸಲು ಜನತಾ ಪ್ರಭುತ್ವ ಸರಕಾರ ರಚಿಸಬೇಕಾಗಿದೆ. ಈ ಗುರಿ ಬಗ್ಗೆಯೂ ಪಾರ್ಟಿಯಲ್ಲಿ ಸ್ಪಷ್ಟ ಅಭಿಪ್ರಾಯ ಅಗತ್ಯ. ಸುಧಾರಣಾವಾದಿ ಪಕ್ಷಗಳಿಗೂ ನಮಗೂ ಇರುವ ವ್ಯತ್ಯಾಸಗಳಲ್ಲಿ ಇದೂ ಒಂದು—ಅಂದರೆ, ಕಾರ್ಮಿಕ ವರ್ಗ ಅಧಿಕಾರಕ್ಕೆ ಬಂದು, ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಜನತಾ ಪ್ರಜಾಪ್ರಭುತ್ವ ಸರಕಾರ ರಚಿಸುವುದು. ಇತರ ದೇಶಗಳ ಕ್ರಾಂತಿಯ ಅನುಭವವಿದು. ಇದಕ್ಕೆ ನಮ್ಮ ಪಾರ್ಟಿ ಪ್ರಚಾರ ಮಾಡುವ ಪಕ್ಷ ಮಾತ್ರವಲ್ಲದೆ ಕೃತಿಯ, ಸಕ್ರಿಯ ಕ್ರಾಂತಿಕಾರಿ ಪಾರ್ಟಿಯಾಗಿದೆ. ಈ ಗುರಿಯನ್ನಿಟ್ಟುಕೊಂಡೇ ನಮ್ಮ ಪಾರ್ಟಿಯ ಘಟನೆ ತಯಾರಾಗಿದೆ. ಅದರಲ್ಲಿ ಕಾರ್ಮಿಕ ವರ್ಗ ರೈತ ಮತ್ತಿತರ ಶ್ರಮಜೀವಿ ಜನತೆಯ ಮುಂದರಿದ, ತ್ಯಾಗಶೀಲ ಮತ್ತು ವರ್ಗ ಜಾಗೃತಿಯ ಸದಸ್ಯರಿರುವ, ಅವರು ಪಾರ್ಟಿ ಘಟಕಗಳಲ್ಲಿ ಸಂಘಟಿತರಾಗಿದ್ದು, ಸಾಮೂಹಿಕವಾಗಿಯೂ ಶಿಸ್ತಿನಿಂದಲೂ ದುಡಿದು, ಜನತೆಯ ನಡುವೆ ನಿಕಟ ಸಂಪರ್ಕವಿರುವ ಪಾರ್ಟಿಯೆಂದು ಹೇಳಿದ್ದೇವೆ.

ಪಾರ್ಟಿಗೆ ಯಾರು ಸದಸ್ಯರಾಗಬಹುದೆಂಬುದನ್ನು ನಾವು ತಿಳಿಸಿದ್ದೇವೆ. ಪಾರ್ಟಿಯ ಕಾರ್ಯಕ್ರಮ ಮತ್ತು ಘಟನೆಯನ್ನೊಪ್ಪಿ, ಚಂದಾ ಕೊಟ್ಟರೆ ಮಾತ್ರ ಸಾಲದು. ಆತನು ಪಾರ್ಟಿಯ ಘಟಕದಲ್ಲಿ ದುಡಿಯುತ್ತಿ…

ಸಂಘಟನೆಯ ಬಗ್ಗೆ ಅಮೃತಸರ ಅಧಿವೇಶನದ ಗೊತ್ತುವಳಿ

ಇಚ್ಛಿಸದಿರುವುದು ಆಗಿದೆ. ಇದನ್ನು ನಿವಾರಿಸಬೇಕು.

ಪಾರ್ಟಿಗೆ ಹೊಸ ಕಾರ್ಯಕರ್ತರನ್ನು ಕೂಡಿಸುವುದು ಪಾರ್ಟಿ ಚಟುವಟಿಕೆಯ ಅಂಗವಾಗಿರಬೇಕು, ಹಾಗೇ, ಅವರಿಗೆ ಶಿಕ್ಷಣವನ್ನು ಕೊಡುವುದು ಕೂಡ ಆಗಿರಬೇಕು. ಕಾರ್ಮಿಕ ವರ್ಗ, ಬಡರೈತರು ಮತ್ತು ವ್ಯವಸಾಯ ಕೂಲಿಕಾರರಿಂದ ಸದಸ್ಯರನ್ನು ಪಾರ್ಟಿಗೆ ಸೇರಿಸಿಕೊಳ್ಳಲು ವಿಶೇಷ ಗಮನ ಕೊಡಬೇಕು. ಕಾರ್ಮಿಕ ವರ್ಗದ ನಡುವೆ ನಮ್ಮ ಚಟುವಟಿಕೆಯು ಹೆಚ್ಚಾಗಿದ್ದರೂ, ನಮ್ಮ ಪಾರ್ಟಿಯಲ್ಲಿ ಕಾರ್ಮಿಕರ ಸಂಖ್ಯೆ, ಕೈಗಾರಿಕಾ ಪ್ರದೇಶಗಳಲ್ಲೂ ಸಹ ಬಹಳ ಕಡಿಮೆ ಇದೆ ಎಂಬುದನ್ನು ಗಮನಿಸಬೇಕಾಗಿದೆ.

ಅಷ್ಟೇ ಅಲ್ಲದೆ, ಅವರನ್ನು ತರಬೇತು ಮಾಡಲು ಕ್ರಮಬದ್ಧವಾದ ಯತ್ನವಿಲ್ಲ, ಅವರನ್ನು ಕಾರ್ಯಕರ್ತರನ್ನಾಗಿ ಬೆಳೆಸಲು ಮತ್ತು ಸಾಮೂಹಿಕ ಚಟುವಟಿಕೆಯ ಕಾರ್ಯಕರ್ತರನ್ನಾಗಿ ಅವರನ್ನು ಪ್ರೋತ್ಸಾಹಿಸಲು ಕ್ರಮಬದ್ಧವಾದ ಯತ್ನವಿಲ್ಲ. ನಮ್ಮ ಮೇಲಿನ ಸಮಿತಿಗಳ ರಚನೆಯು ಹೆಚ್ಚುಮಟ್ಟಿಗೆ ಶ್ರಮಜೀವಿಗಳಿಂದ ಕೂಡಿರದಿರುವುದರಿಂದ ನಮ್ಮ ಅನೇಕ ನ್ಯೂನತೆಗಳನ್ನು ತೀವ್ರಗೊಳಿಸಿದೆ. ಪಾರ್ಟಿಯನ್ನು ವಿಸ್ತರಿಸುವುದು ಎಂದರೆ ಅದೇ ಸಮಯ ಈ ನ್ಯೂನತೆಗಳನ್ನೂ ನಿವಾರಿಸಲು ಸತತವಾಗಿ ಯತ್ನಿಸುವುದಾಗಿದೆ.

ಪ್ರಕ್ಷೋಭೆ ಮತ್ತು ಪ್ರಚಾರ

1954 ರ ಜೂನ್ ತಿಂಗಳಷ್ಟು ಮುಂಚೆಯೇ, ಅಂದರೆ ಸುಮಾರು ನಾಲ್ಕು ವರ್ಷ ಮುಂಚೆಯೇ ಕೇಂದ್ರ ಸಮಿತಿಯು ತನ್ನ ಸಂಘಟನಾ ನಿರ್ಣಯದಲ್ಲಿ ನಮ್ಮ ಪ್ರಕ್ಷೋಭೆಯ ಸ್ವಭಾವವನ್ನು ಉತ್ತಮಗೊಳಿಸುವುದರ ಮುಖ್ಯತ್ವವನ್ನು ಒತ್ತಿ ಹೇಳಲಾಗಿತ್ತು. ಅಂದಿನಿಂದ ಸಾಕಷ್ಟುಮಟ್ಟಿಗೆ ಸುಧಾರಣೆಯಾಗಿದೆ. ಆದರೆ ಅದರಲ್ಲಿ ಎತ್ತಿತೋರಿಸಲಾಗಿದ್ದ ನ್ಯೂನತೆಗಳು ಇನ್ನೂವರೆಗೆ ಸಂಪೂರ್ಣವಾಗಿ ಹೋಗಿಲ್ಲ. ಭಾಷಣಗಳನ್ನು ಜಾಗರೂಕತೆಯಿಂದ ಸಿದ್ಧಗೊಳಿಸುವುದಿಲ್ಲ, ಬಹಿರಂಗ ಸಭೆಗಳಲ್ಲಷ್ಟೇ ಅಲ್ಲದೆ, ಕೆಲವೊಮ್ಮೆ ಪಾರ್ಲಿಮೆಂಟ್ ಮತ್ತು ಶಾಸನ ಸಭೆಗಳಲ್ಲೂ ಸಹ ಪೂರ್ವ ಸಿದ್ಧತೆ ಇಲ್ಲದೆ ಭಾಷಣ ಮಾಡಲಾಗುತ್ತಿದೆ.

ಅವು ಸಾಮಾನ್ಯವಾಗಿ ಶಿಥಿಲವಾಗಿರುತ್ತದೆ, ಹೇಳಿದ್ದನ್ನೇ ಹೇಳುತ್ತಿರುವಂತಿರುತ್ತದೆ ಮತ್ತು ಘೋಷಣೆಗಳನ್ನು ವಿವರಿಸುವುದರ ಬದಲು ಬರೇ ಘೋಷಣೆಗಳನ್ನೇ ಕೊಡಲಾಗುತ್ತಿರುತ್ತದೆ, ತರ್ಕ ಮತ್ತು ಅಂಕಿ ಅಂಶಗಳನ್ನು ಮಂಡಿಸುವುದರ ಬದಲು ಖಂಡನೆ ಇರುತ್ತದೆ, ಜನತೆಯಲ್ಲಿ ರಾಜಕೀಯ ಜಾಗೃತಿಯು ಹೆಚ್ಚಿರುವುದನ್ನು ಗಣನೆಗೆ ತೆಗೆದುಕೊಳ್ಳದೆ ಇರುವುದರಿಂದ ಏಕ ತೆರನಾದ ಮತ್ತು ಸಾಮಾನ್ಯ ನಿರೂಪಣೆಗಳಿಂದ ಕೂಡಿದ ಭಾಷಣಗಳಾಗಿರುತ್ತವೆ. ದೈನಂದಿನ ಕೆಲಸ ಕಾರ್ಯಗಳಲ್ಲಿ ಪಾರ್ಟಿಯೇತರ ಜನಸಮೂಹಗಳೊಂದಿಗೆ ಸಂಪರ್ಕದಲ್ಲಿ ಪಾರ್ಟಿ ಸದಸ್ಯರುಗಳು ವೈಯಕ್ತಿಕವಾಗಿ ಮಾತನಾಡುವುದರ ಮೂಲಕ ಪ್ರಚಾರ ಮಾಡುವುದಂತೂ ಸಂಪೂರ್ಣವಾಗಿ ಇಲ್ಲವಾಗಿದೆ.

ಅಷ್ಟೇ ಅಲ್ಲದೆ ನಮ್ಮ ಅನೇಕ ಪತ್ರಿಕೆಗಳಲ್ಲಿ ಬರೆಯುವ ಲೇಖನಗಳ ಸ್ವಭಾವವು ದೊಡ್ಡ ದೊಡ್ಡ ಪದಗಳಿಂದ ಕೂಡಿರುತ್ತದೆ ಅಷ್ಟೇ ಮತ್ತು ಅದು ಸಜೀವವಾಗಿರುವುದಿಲ್ಲ, ಅಂಕಿ ಅಂಶಗಳನ್ನು ಸಮರ್ಪಕವಾಗಿ ಕೊಡುವುದಿಲ್ಲ, ಜನತೆಯ ಮನಸ್ಸಿನಲ್ಲಿ ಪ್ರಕ್ಷೋಭೆ ಉಂಟುಮಾಡುತ್ತಿರುವ ಪ್ರಶ್ನೆಗಳಿಗೆ ಸಾಕಷ್ಟು ಗಮನ ಕೊಡುವುದಿಲ್ಲ. ಕೆಲವೊಮ್ಮೆ ಪಾರ್ಟಿ ನಾಯಕರುಗಳ ಭಾಷಣಗಳು ಮತ್ತು ಹೇಳಿಕೆಗಳ [illegible]

ದೆ, ಅದನ್ನು ಸುಲಭವಾಗಿ ಸಂಕ್ಷೇಪಗೊಳಿಸಬಹುದು. ಪಾರ್ಟಿ ನಾಯಕರು ನಮ್ಮ ಪತ್ರಿಕೆಗಳಿಗೆ ಬರೆಯುವುದೇ ಕಡಿಮೆ, ಪೂರ್ವ ಸಿದ್ಧತೆ ಇಲ್ಲದೇ ತಾವು ಮಾಡುವ ಭಾಷಣಗಳಷ್ಟೇ ಪ್ರಕಟಣೆಗೆ ಸಾಕು ಎಂದು ಭಾವಿಸುತ್ತಾರೆ.

ನಮ್ಮ ಗೊತ್ತುವಳಿಗಳೂ ಸಹ ಇದೇ ಬಗೆಯ ಅನೇಕ ನ್ಯೂನತೆಗಳಿಂದ ಕೂಡಿರುತ್ತವೆ. ಸಾಮಾನ್ಯವಾಗಿ ಅದು ಉದ್ದವಾಗಿರುತ್ತದೆ, ಅನೇಕ ಅಂಶಗಳನ್ನು ಅದರಲ್ಲಿ ಕೂಡಿಸಲು ಯತ್ನಿಸಲಾಗುತ್ತದೆ, ದೊಡ್ಡ ಪದಗಳಿಂದ ಕೂಡಿರುತ್ತದೆ, ಮತ್ತು ಅವು ವಿಶಿಷ್ಟತೆಯಿಂದ ಕೂಡಿರುವುದಿಲ್ಲ ಹಾಗೂ ಜನಪ್ರಿಯ ರೀತಿಯಲ್ಲಿ ಬರೆಯಲ್ಪಟ್ಟಿರುವುದಿಲ್ಲ.

ಈ ನ್ಯೂನತೆಗಳಿಗೆ ಹೆಚ್ಚಿನ ಗಮನವನ್ನೀಯಬೇಕು ಮತ್ತು ಅವನ್ನು ನಿವಾರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ನಾವು ಸಾಮೂಹಿಕ ಪಕ್ಷವಾಗಿ ಬೆಳೆಯುತ್ತಿದ್ದೇವೆ, ಲಕ್ಷಾಂತರ ಜನ ಮಾರ್ಗದರ್ಶನಕ್ಕಾಗಿ ಎದುರು ನೋಡುತ್ತಿರುವ ಪಕ್ಷವಾಗಿ ಬೆಳೆಯುತ್ತಿದ್ದೇವೆ, ಬಹುತೇಕ ಸದಸ್ಯರುಗಳು ಕಾರ್ಮಿಕ ವರ್ಗದಿಂದ ಮತ್ತು ರೈತ ವರ್ಗದಿಂದ ಕೂಡಿರುವಂಥ ಪಕ್ಷವಾಗಿದ್ದೇವೆ ಎಂಬುದನ್ನು ಗಮನದಲ್ಲಿರಿಸಿಕೊಂಡು ನಾವು ಭಾಷಣ ಮಾಡಬೇಕು ಮತ್ತು ಲೇಖನಗಳನ್ನು ಬರೆಯಬೇಕು.

ಸಾಮೂಹಿಕ ಸಂಘಟನೆಗಳು

ಎಲ್ಲ ವಿಭಾಗಗಳ ಜನತೆಯ ನಡುವೆಯೂ ಅದರಲ್ಲೂ ಮುಖ್ಯವಾಗಿ ಕಾರ್ಮಿಕ ವರ್ಗ ಮತ್ತು ರೈತರ ನಡುವೆ ಸಾಮೂಹಿಕ ಸಂಘಟನೆಗಳನ್ನು ಕಟ್ಟಲು ನಿರಂತರವಾದ ಮತ್ತು ದೃಢವಾದ ಯತ್ನವನ್ನು ಮಾಡದಿದ್ದಲ್ಲಿ ಸಾಮೂಹಿಕ ಪಾರ್ಟಿಯನ್ನು ಕಟ್ಟಲಾಗುವುದಿಲ್ಲ. ಅಂಥ ಸಂಘಟನೆಗಳು ಇಲ್ಲದಿದ್ದಲ್ಲಿ ಪಾರ್ಟಿಯ ಪ್ರಭಾವವು ಔಪಚಾರಿಕವಾಗಿ ಮತ್ತು ಅನಿರ್ದಿಷ್ಟವಾಗಿ ಇರುತ್ತದೆ. ಅಂಥ ಸಂಘಟನೆಗಳು ಇಲ್ಲದಿದ್ದಲ್ಲಿ ಸಂಯುಕ್ತರಂಗವು ಬೆಳೆಯಲಾರದು. ಅಂಥ ಸಂಘಟನೆಗಳಿಲ್ಲದಿದ್ದಲ್ಲಿ, ಎಷ್ಟೇ ತೀವ್ರವಾದ ಚಟುವಟಿಕೆ ಇದ್ದರೂ, ಪಾರ್ಟಿ ಕಾರ್ಯಕರ್ತರುಗಳು ಜನತೆಯಿಂದ ದೂರ ಸರಿಯುತ್ತಾರೆ ಮತ್ತು ಬಂಡವಾಳಶಾಹಿ ರೂಪದಲ್ಲಿ "ಸಾಮಾನ್ಯ" ರಾಜಕೀಯ ನಾಯಕರುಗಳಾಗುತ್ತಾರೆ ಮತ್ತು ಕಮ್ಯೂನಿಸ್ಟ್ ನಾಯಕರಾಗಿ ಬೆಳೆಯುವುದಿಲ್ಲ. ಜನಸಮೂಹಗಳಲ್ಲಿ ಸ್ವಯಂ ಚಟುವಟಿಕೆಯನ್ನು ಬೆಳೆಸುವ ಮತ್ತು ಅವರ ನಡುವೆಯೇ ನಾಯಕರುಗಳನ್ನು ಬೆಳೆಸುವಂಥ ಸಂಘಟನೆಗಳಿಲ್ಲದಿದ್ದಲ್ಲಿ—ಜನತೆಯನ್ನೆದುರಿಸುತ್ತಿರುವ ಯಾವೊಂದು ಪ್ರಶ್ನೆಯನ್ನು ಬಗೆಹರಿಸಲಾಗುವುದಿಲ್ಲ, ಸಾಮೂಹಿಕ ಚಳುವಳಿಯನ್ನು ವಿಸ್ತರಿಸಲಾಗುವುದಿಲ್ಲ ಮತ್ತು ಅದನ್ನು ಮೇಲಿನ ಮಟ್ಟಗಳಿಗೆ ತೆಗೆದುಕೊಂಡು ಹೋಗಲಾಗುವುದಿಲ್ಲ.

ಆದ್ದರಿಂದಾಗಿ, ಪಾರ್ಟಿಯ ಎಲ್ಲ ಕಾರ್ಯಗಳನ್ನೂ ಹಿಂದೆ ಹೇಳಲಾಗಿರುವ ಎಲ್ಲ ಚಟುವಟಿಕೆಗಳನ್ನು ಸಾಮೂಹಿಕ ಸಂಘಟನೆಗಳನ್ನು ಕಟ್ಟುವ **ದಿಶೆಯಲ್ಲಿ ನಡೆಸಬೇಕು.** ವಿಶಿಷ್ಟವಾಗಿ ವಿನಾಯಿತಿ ಪಡೆದಿರುವ ಹೊರತು ಪ್ರತಿಯೊಬ್ಬ ಪಾರ್ಟಿ ಸದಸ್ಯರೂ ಸಾಮೂಹಿಕ ಸಂಘಟನೆಯಲ್ಲಿ ಸೇರಿರಬೇಕು.

ಕಾರ್ಮಿಕ ವರ್ಗದ ರಂಗದಲ್ಲಿ ಅನೇಕ ದೊಡ್ಡ ಬೆಳವಣಿಗೆಗಳಾಗುತ್ತಿವೆ, ಆದರೆ ಅನೇಕ ಪಾರ್ಟಿ ಸಮಿತಿಗಳು ಅದಕ್ಕೆ ಸಾಕಷ್ಟು ಗಮನ ಕೊಡುತ್ತಿಲ್ಲ. ಕಾರ್ಮಿಕರ ನಡುವೆ **ರಾಜಕೀಯ** ಕಾರ್ಯದ ಪ್ರಮಾಣವು ತುಂಬಾ ಅಲ್ಪವಾಗಿದೆ. ಅಷ್ಟೇ ಅಲ್ಲದೆ ಟ್ರೇಡ್ ಯೂನಿಯನ್ ಕಾರ್ಯಕರ್ತರ ಹಾಗೂ ಕಾರ್ಮಿಕ ಕ್ಷೇತ್ರಗಳಲ್ಲಿ [illegible]

ಟುವಟಿಕೆಗಳನ್ನು ಕೈಗೊಳ್ಳಲು ಕಾರ್ಯಕರ್ತರ ಅಭಾವವಿದೆ. ನಗರಗಳಲ್ಲಿರುವ ಪಾರ್ಟಿ ಸದಸ್ಯರು ಸ್ವಲ್ಪ ಕಾಲವನ್ನಾದರೂ ಶ್ರಮಜೀವಿಗಳ ನಡುವೆ ಕೆಲಸ ಮಾಡುವಂತೆ ಪ್ರೋತ್ಸಾಹ ನೀಡಬೇಕು.

ರಾಜಕೀಯ ನಿರ್ಣಯದಲ್ಲಿ ಎತ್ತಿ ತೋರಿಸಿರುವಂತೆ ಅತಿಶಯ ಮುಖ್ಯತ್ವವುಳ್ಳ ರೈತರ ನಡುವೆ ಇರುವ ಪಾರ್ಟಿಯ ಬಲಹೀನತೆಯನ್ನು ನಿವಾರಿಸುವುದು ಅತ್ಯಗತ್ಯವಾಗಿದೆ ಮತ್ತು ಪ್ರಬಲವಾದ **ರೈತ ಸಂಘ**ವನ್ನು ಕಟ್ಟುವುದು ಮುಖ್ಯವಾದುದಾಗಿದೆ. ಪ್ರತಿ ಪ್ರಾಂತ ಸಮಿತಿಯೂ ಈ ಕಾರ್ಯಕ್ಕೆ ವಿಶೇಷ ಗಮನವನ್ನೀಯಬೇಕಾಗಿದೆ, ರೈತರೆಡೆ ಪಾರ್ಟಿಯನ್ನು ತೆಗೆದುಕೊಂಡು ಹೋಗಬೇಕಿದೆ, ಸಾಕಷ್ಟು ಕಾರ್ಯಕರ್ತರನ್ನು ಈ ಕಾರ್ಯದಲ್ಲಿ ತೊಡಗಿಸಬೇಕಿದೆ ಮತ್ತು ಅವರ ತರಬೇತಿಗೆ ಹಾಗೂ ಇರುವಿಕೆಗೆ ವ್ಯವಸ್ಥೆ ಮಾಡಬೇಕಿದೆ. ಹಾಗೆ ಮಾಡದಿದ್ದಲ್ಲಿ ಇಡೀ ಪ್ರಜಾ ಪ್ರಭುತ್ವ ಚಳವಳಿಯು ಬಲಹೀನವಾಗಿ ಉಳಿಯುತ್ತದೆ.

ಒಂದು ವರ್ಷದೊಳಗಾಗಿ ರೈತ ಸಂಘದ ಸದಸ್ಯತ್ವವನ್ನು ೯೦ ಲಕ್ಷಕ್ಕೆ ಏರಿಸಬೇಕು.

ಒಂದು ವರ್ಷಕ್ಕೆ ಗುರಿಗಳು ಮತ್ತು ಘೋಷಣೆಗಳು

ಪ್ರತಿ ಪ್ರಾಂತ ಸಮಿತಿಯು ಈ ಅಧಿವೇಶನದ ನಂತರ ಪ್ರಾಂತಗಳಲ್ಲಿನ ಕಾರ್ಯದ ಬಗ್ಗೆ ನಿರ್ದಿಷ್ಟವಾದ ಯೋಜನೆಯನ್ನು ತಯಾರಿಸಬೇಕು ಮತ್ತು ಅದನ್ನು ಪ್ರಾಂತೀಯ ಮಂಡಲಿಯ ಮುಂದಿರಿಸಿ ಚರ್ಚಿಸಿ, ಅನುಮೋದಿಸಬೇಕು. ಆ ಯೋಜನೆಯಲ್ಲಿ ಈ ಕೆಳಕಂಡ ಅಂಶಗಳಿರಬೇಕು.

★ ಒಂದು ವರ್ಷದಲ್ಲಿ ಕೇಂದ್ರ ಮತ್ತು ಪ್ರಾಂತೀಯ ಪತ್ರಿಕೆಗಳ ಪ್ರಸಾರವನ್ನು ದ್ವಿಗುಣಗೊಳಿಸುವುದು.

★ ಟ್ರೇಡ್ ಯೂನಿಯನ್‌ಗಳು ಮತ್ತು ರೈತಸಂಘಗಳಿಗೆ ಸದಸ್ಯರನ್ನು ಸೇರಿಸಲು ಗೊತ್ತುಮಾಡುವುದು.

★ ಎಲ್ಲಿ ಬಲಹೀನವಾಗಿದೆಯೋ ಅಂಥ ಪ್ರದೇಶಗಳಲ್ಲಿ ಪಾರ್ಟಿಯನ್ನು ವಿಸ್ತರಿಸುವುದು.

★ ಸರಿಯಾದ ಅಚ್ಚುಕೂಟ, ಪಾರ್ಟಿ ಕಛೇರಿಗೆ ಕಟ್ಟಡ, ಇತ್ಯಾದಿ ವಿಶಿಷ್ಟ ಕಾರ್ಯಗಳಿಗಾಗಿ ನಿಧಿ ಸಂಗ್ರಹಿಸುವುದು.

★ ಒಂದು ವರ್ಷದಲ್ಲಿ ಪಾರ್ಟಿಯೊಳಗೆ ನಿರಕ್ಷರತೆಯನ್ನು ತೊಡೆದು ಹಾಕುವುದು.

★ ಮುಂದಿನ ಒಂದು ವರ್ಷದಲ್ಲಿ ಪುಸ್ತಕಗಳ ಪ್ರಕಟಣೆಯ ಸಂಖ್ಯೆ ಮತ್ತು ಹೆಸರುಗಳನ್ನು ನಿರ್ಧರಿಸುವುದು.

ಮುಂದಿನ ಒಂದು ವರ್ಷದ ಯೋಜನೆ ಮತ್ತು ಗುರಿಗಳ ಆಧಾರದ ಮೇಲೆ ಪ್ರತಿ ಜಿಲ್ಲಾ ಸಮಿತಿಯೂ ತನ್ನ ಸ್ವಂತ ಕಾರ್ಯವನ್ನು ಯೋಚಿಸಬೇಕು.

ಈ ಗುರಿಗಳನ್ನು ಎಷ್ಟು ಮಟ್ಟಿಗೆ ಸಾಧಿಸಲಾಗಿದೆ ಎಂಬುದನ್ನು ಆಗಾಗ ಪರಿಶೀಲಿಸಬೇಕು.

ವೈಯಕ್ತಿಕ ವಾದವನ್ನು ತೊಡೆದು ಹಾಕಿ ಶಿಸ್ತನ್ನು ಸ್ಥಾಪಿಸುವುದು

ಪಾರ್ಟಿಯ ಮುಂದಿರುವ ಕರ್ತವ್ಯದ ಸಂಘಟನಾ ಕಾರ್ಯವನ್ನು ನಾವು [illegible]

ದೆ. ಆದರೆ ಈ ಬದಲಾವಣೆಯನ್ನು **ಕಾರ್ಯರೂಪದಲ್ಲಿ** ತರಲು ಸಕ್ರಿಯವಾದ ಮತ್ತು ವ್ಯವಸ್ಥಿತವಾದ ಯತ್ನವನ್ನು ಮಾಡದಿದ್ದಲ್ಲಿ, ಇದೆಲ್ಲವೂ ಕಾಗದದ ಮೇಲೇ ಉಳಿಯುತ್ತದೆಂದು ಅನುಭವವು ತೋರಿಸಿಕೊಟ್ಟಿದೆ.

ಇದು **ಮೇಲಿನಿಂದ** ಅಂದರೆ ಕೇಂದ್ರ ಮತ್ತು ಪ್ರಾಂತೀಯ ನಾಯಕತ್ವದಿಂದ ಆರಂಭವಾಗಬೇಕಿದೆ. ಈ ಸಮಿತಿಗಳ ಮತ್ತು ಅದರ ಸದಸ್ಯರುಗಳು ತಮ್ಮ ಸ್ವಂತ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ, ತೀರ್ಮಾನಗಳು ಮಾಡುವುದು ಮತ್ತು ಅದನ್ನು ಕಾರ್ಯಗತಗೊಳಿಸುವುದರಿಂದ ದೂರ ಸರಿಯುವುದನ್ನು, ತಾವು ಮಾತಿನಲ್ಲಿ ಒಂದು ಹೇಳುವುದು ಕೃತಿಯಲ್ಲಿ ಇನ್ನೊಂದು ಮಾಡುವುದು ಬಿಟ್ಟು, ಇಡೀ ಪಾರ್ಟಿಯ ಕೆಳಗಿನ ಘಟಕಗಳಿಗೆ ಮಾದರಿಯಾಗಬೇಕಾಗಿದೆ, ವಿನಯಶೀಲತೆ, ತಾಳ್ಮೆ, ಕಾಮ್ರೇಡು ರೀತಿಯ ವರ್ತನೆ, ಟೀಕೆಗಳಿಗೆ ಗಮನ ಕೊಡುವುದು, ಇದೆಲ್ಲಕ್ಕಿಂತ ಹೆಚ್ಚಾಗಿ **ಶಿಸ್ತು**, ಇದಿಲ್ಲದಿದ್ದಲ್ಲಿ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ವೈಯಕ್ತಿಕವಾದವನ್ನು ತೊಡೆದು ಹಾಕುವುದರಿಂದ ಮತ್ತು ಶಿಸ್ತನ್ನು ಬಲಗೊಳಿಸುವುದರಿಂದ ಮಾತ್ರವೇ ಇಡೀ ಪಾರ್ಟಿಯನ್ನು ಪುನರ್ವ್ಯವಸ್ಥೆಗೊಳಿಸುವ ಕಾರ್ಯವನ್ನು ಆರಂಭಿಸಬೇಕು ಮತ್ತು ಶಿಸ್ತನ್ನು ಬಲಗೊಳಿಸಬೇಕು, **ಪ್ರಧಾನವಾಗಿ** ಇದಕ್ಕೆ ಮೇಲಿನಿಂದ ನಿದರ್ಶನವಿರಬೇಕು.

ಇಡೀ ಪಾರ್ಟಿಯನ್ನು ತೆಗೆದುಕೊಂಡಲ್ಲಿ, ಚಳವಳಿಯ ಬೆಳವಣಿಗೆಯು ಘಾತಿಯೊಂದಿಗೆ ಹೋಲಿಸಿದಲ್ಲಿ ನಮ್ಮ ನಾಯಕತ್ವ ಪಕ್ವವಾಗಿ ಮತ್ತು ಸಮರ್ಥವಾಗಿ ಬೆಳೆದಿಲ್ಲ ಎಂಬುದನ್ನು ಗಮನದಲ್ಲಿರಿಸಬೇಕಾಗಿದೆ. ಇದು ಪಾರ್ಟಿಗೆ ದೊಡ್ಡ ಅತಂಕಗಳನ್ನೊಡ್ಡುತ್ತದೆ. ಸಮಿತಿಗಳು ಸಮರ್ಪಕವಾಗಿ ಕೆಲಸ ಮಾಡಿದಲ್ಲಿ ತಕ್ಕಮಟ್ಟಿಗೆ ಈ ಅತಂಕಗಳನ್ನು ನಿವಾರಿಸಬಹುದು—ಆದರೆ ತಕ್ಕಮಟ್ಟಿಗೆ ಮಾತ್ರ ಅಷ್ಟೆ. ಎಲ್ಲ ಮಟ್ಟಗಳಲ್ಲೂ ಪಾರ್ಟಿ ನಾಯಕರುಗಳು, ಮುಖ್ಯವಾಗಿ ಕೇಂದ್ರ ಮತ್ತು ಪ್ರಾಂತೀಯ ನಾಯಕರುಗಳು ಸ್ವಂತ ಅಭ್ಯಾಸದ ಮೂಲಕ, ವಿಶೇಷ ಪರಿಣತೆಯ ಮೂಲಕ ಮತ್ತು ತಮ್ಮ ಕಾರ್ಯವನ್ನೇ ಸರಿಯಾಗಿ ಸಂಘಟಿಸಿಕೊಳ್ಳುವುದರ ಮೂಲಕ ತಮ್ಮ **ವೈಯಕ್ತಿಕ ಸಾಮರ್ಥ್ಯ**ವನ್ನು ವರ್ಧಿಸಿಕೊಳ್ಳಬೇಕು.

ಪಾರ್ಟಿಯು ಇಂದು ಅನುಭವಿಸುತ್ತಿರುವ ನ್ಯೂನತೆಗಳು ಮತ್ತು ಲೋಪಗಳನ್ನು ಕೇವಲ ಕೆಲವು ವ್ಯಾವಹಾರಿಕವಾದ ಕ್ರಮಗಳನ್ನು ತೆಗೆದುಕೊಳ್ಳುವುದರಿಂದ ಮಾತ್ರ ನಿವಾರಣೆಯಾಗುವುದಿಲ್ಲ ಎಂದು ಒತ್ತಿ ಹೇಳುವುದು ಅಗತ್ಯವಾಗಿದೆ. ಈ ನ್ಯೂನತೆಗಳು ಮತ್ತು ಲೋಪಗಳು ಪಾರ್ಟಿ ಸಂಘಟನೆಯ ಮೂಲಭೂತ ತತ್ವಗಳನ್ನು ನಿರಂತರವಾಗಿ ಅಲಕ್ಷಿಸಿರುವುದರ ಫಲವಾಗಿದೆ. ಅದನ್ನು ನಿವಾರಿಸುವ ದೃಷ್ಟಿಯಿಂದ, ಪಾರ್ಟಿ ಅಧಿವೇಶನದ ಈ ವಿಶೇಷ ಸಭೆಯು ಪಾರ್ಟಿ ಎಲ್ಲ ಘಟಕಗಳಿಗೂ, ಮುಖ್ಯವಾಗಿ ರಾಷ್ಟ್ರೀಯ ಮಂಡಲಿ, ಕೇಂದ್ರ ಕಾರ್ಯಕಾರೀ ಸಮಿತಿ ಮತ್ತು ಕೇಂದ್ರ ಸೆಕ್ರೆಟೇರಿಯಟ್‌ಗಳು ಈ ಕೆಳಕಂಡ ಕಾರ್ಯ ನಡೆಸಬೇಕೆಂದು ಕರೆ ಕೊಡುತ್ತದೆ.

1. ಅಭ್ಯಾಸ, ಟೀಕೆ ಮತ್ತು ಸ್ವಯಂ ಟೀಕೆಯ ಕ್ರಮಗಳ ಮೂಲಕ ಪಾರ್ಟಿ ಕಾರ್ಯವನ್ನು ಉತ್ತಮಗೊಳಿಸಲು ಚಳವಳಿ ನಡೆಸಬೇಕು. ಈ ಚಳವಳಿಯು ಪ್ರಧಾನವಾಗಿ ವೈಯಕ್ತಿಕವಾದವನ್ನು ತೊಡೆದು ಹಾಕಲು, ಶಿಸ್ತನ್ನು ಪುನಃ ಸ್ಥಾಪಿಸಲು, ಮಾತು ಮತ್ತು ಕೃತಿಯ ನಡುವೆ ಇರುವ ಅಂತರವನ್ನು ತೊಡೆದು ಹಾಕಲು ಮತ್ತು ಕಾಮ್ರೇಡು ರೀತ್ಯ ಸಂಬಂಧವನ್ನು ಬಲಗೊಳಿಸಲು ನಡೆಸಬೇಕು.

2. ಪಾರ್ಟಿ ಕಾರ್ಯಕ್ರಮವನ್ನು ತಯಾರಿಸಲು ಸಮರ್ಥವಾದ ಸಮಿತಿಯನ್ನು ಸ್ಥಾಪಿಸಬೇಕು.

3. ಮಾರ್ಕ್ಸ್‌ವಾದ — ಲೆನಿನ್‌ವಾದದ ಮೂಲತತ್ವಗಳ ಬಗ್ಗೆ ಇಡೀ ಪಾರ್ಟಿಯಲ್ಲಿ ಶಿಕ್ಷಣವನ್ನು ನಡೆಸಬೇಕು.

ಮಂಗಳೂರು ಪತ್ರ

ಉಡುಪಿ ತಾಲೂಕು ರೈತ ಸಮ್ಮೇಳನ

ಉಡುಪಿ ತಾಲೂಕು ರೈತ ಸಮ್ಮೇಳನವು ಕಳೆದ ತಾ. 10 ಮತ್ತು 11 ಈ ದಿನಗಳಲ್ಲಿ ಉಡುಪಿಯಲ್ಲಿ ಬಹು ಯಶಸ್ವಿಯಾಗಿ ಜರಗಿತು. ಉಡುಪಿ ತಾಲೂಕಿನ ವಿವಿಧ ಕಡೆಗಳಿಂದ ಸುಮಾರು 80 ಮಂದಿ ರೈತ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಉಡುಪಿ ತಾಲೂಕಿನ ರೈತರ ಚಳವಳದಲ್ಲಿ ಪ್ರಥಮವಾಗಿ ನಡೆದ ಈ ರೈತ ಸಮ್ಮೇಳನವು ತಾಲೂಕಿನ ರೈತ ಸಂಘಟನೆಗೂ, ರೈತ ಚಳವಳಕ್ಕೂ ಹೊಸ ಸ್ಫೂರ್ತಿಯನ್ನು ನೀಡಿದೆ.

ತಾ. 10ರಂದು ಉಡುಪಿಯ ಜಂಗಮ ಮಠದಲ್ಲಿ ಶ್ರೀ ಸಿಂಪ್ಸನ್ ಸೋನ್ಸರ ಅಧ್ಯಕ್ಷತೆಯಲ್ಲಿ ಪ್ರತಿನಿಧಿಗಳ ಸಮ್ಮೇಲನ ಜರಗಿತು. ಯೋಗ್ಯ ಭೂಮಸೂದೆಯನ್ನು ಜ್ಯಾರಿಗೆ ತರುವ ಕುರಿತು, ಜತ್ತಿ ಸಮಿತಿಯ ವರದಿಗೆ ಕೆಲವು ಮುಖ್ಯ ತಿದ್ದುಪಡೆಗಳನ್ನು ಸೂಚಿಸಿ ಆದರ ಆಧಾರದಲ್ಲಿ ಇಡಿಯ ಕರ್ನಾಟಕಕ್ಕೆ ಸಮಗ್ರ ಭೂಸುಧಾರಣಾ ಮಸೂದೆಯನ್ನು ತರುವ ಕುರಿತು, ತಾಲೂಕಿನ ರೈತ ಸಂಘಟನೆ, ಅದನ್ನು ವಿಸ್ತರಿಸುವ ಬಗ್ಗೆ ಈ ಕುರಿತು ಮುಂದಿಟ್ಟ ಠರಾವುಗಳನ್ನು ಪ್ರತಿನಿಧಿಗಳು ಚರ್ಚಿಸಿದರು. ಹಲವಾರು ಮಂದಿ ಪ್ರತಿನಿಧಿಗಳು ಈ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಸಲಹೆ ಸೂಚನೆಗಳನ್ನು ಮುಂದಿಟ್ಟರು. ಜಿಲ್ಲಾ ರೈತ ಸಂಘದ ಅಧ್ಯಕ್ಷ ಶ್ರೀ ಎ. ಕೃಷ್ಣ ಶೆಟ್ಟರು ಇಂದಿನ ರಾಷ್ಟ್ರೀಯ ಜೀವನದಲ್ಲಿ ರೈತರಿಗಿರುವ ಪಾತ್ರ ಮತ್ತು ಕರ್ತವ್ಯಗಳನ್ನು ವಿವರಿಸಿ ರೈತರು ಸಂಘಟಿತರಾಗುವ ಅವಶ್ಯಕತೆಗಳನ್ನು ವಿವರಿಸಿದರು.

ಮರುದಿನ ಸಂಜೆ ಉಡುಪಿಯ ಅಜ್ಜರಕಾಡು ಮೈದಾನಿನಲ್ಲಿ ಬಹಿರಂಗ ಅಧಿವೇಶನವು ಶ್ರೀ ಎ. ಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಸಭಾಪೂರ್ವದಲ್ಲಿ ಉದಿಯಾವರ, ಕೊಡವೂರು, ಗುಂಡಿಬೈಲು, ಕುಂಜಿಬೆಟ್ಟುಗಳಿಂದ ರೈತರ ಮೆರವಣಿಗೆಗಳು, ಘೋಷಣೆಗಳೊಂದಿಗೆ ಸಭಾಸ್ಥಳಕ್ಕೆ ಬಂದಿದ್ದುವು.

ಸಮ್ಮೇಲನವನ್ನು ಪುತ್ತೂರು ತಾಲೂಕು ರೈತ ಸಂಘದ ಕಾರ್ಯದರ್ಶಿ ಶ್ರೀ ಕೆ. ಸಂಜೀವ ರೈಯವರು ಉದ್ಘಾಟಿಸಿದರು. ಶ್ರೀ ಸಂಜೀವ ರೈಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಭೂಸುಧಾರಣೆಯನ್ನು ಇಂದಿನ ಪರಿಸ್ಥಿತಿಯಲ್ಲಿ ಜ್ಯಾರಿಗೆ ತರಬೇಕಾದ ಅವಶ್ಯಕತೆ, ಈ ವಿಷಯದಲ್ಲಿ ಯೋಜನಾ ಸಮಿತಿಯೇ ಮಾಡಿರುವ ವರದಿ ಇವನ್ನು ಖಂಡಿಸಿ ಯೋಗ್ಯ ಭೂಮಸೂದೆ ತರುವಂತೆ ಸರಕಾರವನ್ನು ರೈತರೊಂದಾಗಿ ಒತ್ತಾಯಿಸಬೇಕೆಂದೂ ಅದಕ್ಕಾಗಿ ಚಳವಳ ನಡೆಸಬೇಕೆಂದೂ, ರೈತರಿಗೆ ಕರೆ ಕೊಟ್ಟರು.

ನಂತರ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಶ್ರೀ ಯಂ. ಯಚ್. ಕೃಷ್ಣಪ್ಪನವರು ಭಾಷಣಮಾಡಿ ರೈತರು ಸಂಘಟಿತರಾಗಬೇಕಾದ ಅವಶ್ಯಕತೆಯನ್ನು ವಿವರಿಸಿ ರೈತರು ಸಂಘಟಿತರಾಗಿ ಚಳವಳ ನಡೆಸಿದರೆನೇ ರೈತರ ವಿಮೋಚನೆ ಸಾಧ್ಯವೆಂದೂ, ಒಂದು ಭೂಮಸೂದೆ ಬಂದರೂ ಕೂಡಾ ರೈತರು ಸಂಘಟಿತರಾದರೆನೇ ಅದರ ಪ್ರಯೋಜನ ಪಡೆಯಲು ಸಾಧ್ಯವೆಂದೂ ಹೇಳಿ ಜಿಲ್ಲೆಯ ಕೆಲವು ಪ್ರಜಾಸೋಶಿಯಲಿಸ್ಟ್ ಮುಖಂಡರೆನಿಸಿ ಕೊಳ್ಳುವವರು ಭೂಮ್ಮಾಲಕರ ಪರವಾಗಿ ವಾದಿಸುತ್ತಿರುವುದನ್ನೂ, ರೈತರು ಕೆಂಬಾವುಟದಡಿಯಲ್ಲಿ ಸಂಘಟಿತರಾದರೆ ಈ ಸಂಘಟನೆಯ ವಿರುದ್ಧ ಅಪಪ್ರಚಾರ ಮಾಡುತ್ತಿರುವುದನ್ನೂ ಬಯಲಿಗೆಳೆದು ಇಂದು ರೈತರ ಐಕ್ಯತೆಯು ಅತೀ ತುರ್ತಿನ ಪ್ರಶ್ನೆಯಾಗಿದೆ. ಆದುದರಿಂದ ಪ್ರ. ಸೋ. ಮುಖಂಡರು ಇನ್ನಾದರೂ ರೈತರ ಒಗ್ಗಟ್ಟನ್ನು ಬೆಳಸಲು, ಒಂದಾಗಬೇಕೆಂದೂ ಕೇಳಿಕೊಂಡರು.

ಬಳಿಕ ಹಿಂದಿನ ದಿನ ಪ್ರತಿನಿಧಿ ಅಧಿವೇಶನದಲ್ಲಿ ಮಂಜೂರಾದ ಠರಾವುಗಳನ್ನು ವಿವರಿಸಿ ಶ್ರೀಗಳಾದ ದಾಸ ಸೇರಿಗಾರ, ಸಿಂಪ್ಸನ್ ಸೋನ್ಸ್, ರಘು ಶೆಟ್ಟಿ, ರಾಮಮೋಹನ ಹೆಗ್ಡೆ ಮೊದಲಾದವರು ಭಾಷಣವಿತ್ತರು.

ಕೊನೆಗೆ ಅಧ್ಯಕ್ಷರು ಭಾಷಣ ಮಾಡಿ ಇಂದಿನ ರೈತರ ಸಂಕಷ್ಟಗಳನ್ನು ವಿವರಿಸಿ, 'ಕಾಂಗ್ರೆಸ್' ಸರಕಾರಗಳ ಭೂಮ್ಮಾಲಕರ ಪರ ನೀತಿಯ ಫಲವಾಗಿ ಒಕ್ಕಲೆಬ್ಬಿಸುವಿಕೆ ಗೇಣಿ ಏರಿಸುವಿಕೆಗಳು ಹೆಚ್ಚಾಗಿವೆ. ರೈತನಿಗೆ ದುಡಿಮೆಯ ಹೊಲದಲ್ಲಿ ಭದ್ರತೆಯಿಲ್ಲ. ಎಂಬುದನ್ನು ಹಲವು ಉದಾಹರಣೆಗಳ ಮೂಲಕ ತಿಳಿಸಿ, ರೈತರು ಒಗ್ಗಟ್ಟಾಗಿ ಸಂಘಟನಾ ಶಕ್ತಿಯನ್ನು ಬೆಳಿಸಬೇಕು. ಆ ಮೂಲಕ ತಮ್ಮ ಏಳಿಗೆಯನ್ನು ಸಾಧಿಸಬೇಕು ಎಂದು ಹೇಳಿ ಈ ವಿಷಯದಲ್ಲಿ ಕೇರಳ ಸರಕಾರದ ನೀತಿಗಳನ್ನು ವಿವರಿಸಿ ಹೇಳಿದರು.

ಸಭಾರಂಭದಲ್ಲಿ ಶ್ರೀ ಟಿ. ರಾಮಮೋಹನ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದ್ದರು. ಸಭಾಂತ್ಯದಲ್ಲಿ ಶ್ರೀ ಕೆ. ದಾಸ ಸೇರಿಗಾರರು ಧನ್ಯವಾದಗಳನ್ನಿತ್ತರು. ಸಭಾನಂತರ "ಕೋಟಿ ಚೆನ್ನಯ್ಯ" ಎಂಬ ಯಕ್ಷಗಾನ ಬಯಲಾಟವೂ ಇತ್ತು.

ಉಡುಪಿ ತಾಲೂಕು ರೈತ ಸಂಘ

ಈ ಸಮ್ಮೇಲನದಲ್ಲಿ ಉಡುಪಿ ತಾಲೂಕು ರೈತ ಸಂಘದ ಹೊಸ ಕಾರ್ಯಕಾರೀ ಸಮಿತಿಯನ್ನು ಚುನಾಯಿಸಿತು. ಈ ಹೊಸ ಕಾರ್ಯಕಾರೀ ಸಮಿತಿಯಲ್ಲಿ ಶ್ರೀ ಟ. ರಾಮಮೋಹನ ಹೆಗ್ಡೆ (ಅಧ್ಯಕ್ಷ) ಶ್ರೀ ಸಾಂತಪ್ಪ ಜತ್ತನ್ನ (ಉಪಾಧ್ಯಕ್ಷ) ಶ್ರೀ ಕೆ. ದಾಸ ಸೇರಿಗಾರ (ಕಾರ್ಯದರ್ಶಿ).

ಮೋಟರು ಮಜೂರರ ವಾರ್ಷಿಕ ಮಹಾಸಭೆ

ದ. ಕ. ಜಿಲ್ಲಾ ಅಟೋಮೊಬೈಲ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನಿನ ವಾರ್ಷಿಕ ಮಹಾಸಭೆಯು ಕಳೆದ ತಾ 11ರಂದು ಯೂನಿಯನಿನ ಅಧ್ಯಕ್ಷ ಶ್ರೀ ಪಿ. ಎಂ. ಎಚ್. ಮೂರ್ತಿ (ಅಡ್ವಕೇಟ್) ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಕಾರ್ಯದರ್ಶಿ ಶ್ರೀ ಆಲ್ಬರ್ಟ್ ಸಿಕೇರ ಇವರು ಯೂನಿಯನಿನ ಕಳೆದ ವರುಷದ ಚಟುವಟಿಕೆಗಳ ವರದಿಯನ್ನೂ ಲೆಕ್ಕಪತ್ರಗಳನ್ನೂ ಸಭೆಯ ಮುಂದಿಟ್ಟದ್ದನ್ನು ಸಭೆಯು ಸರ್ವಾನುಮತದಿಂದ ಸ್ವೀಕರಿಸಿದರು.

ಬಳಿಕ ಮುಂದಿನ ವರುಷದ ಆಡಳಿತ ಸಮಿತಿಗೆ ಶ್ರೀಗಳಾದ ಪಿ. ಯಂ. ಯನ್. ಮೂರ್ತಿ, (ಅಧ್ಯಕ್ಷ) ಎ. ಶಾಂತಾರಾಮ ಪೈ ಮತ್ತು ರಾಮಣ್ಣ ಶೆಟ್ಟಿ (ಉಪಾಧ್ಯಕ್ಷರು) ಡೇವಿಡ್ ಕರ್ಕಡ (ಪ್ರಧಾನ ಕಾರ್ಯದರ್ಶಿ) ಆಲ್ಬರ್ಟ್ ಸಿಕೇರ ಮತ್ತು ಯಂ. ಮೋನಪ್ಪ (ಜತೆಕಾರ್ಯದರ್ಶಿಗಳು), ಬಾಬು (ಕೋಶಾಧಿಕಾರಿ) ಇವರು ಇರುವ ಕಾರ್ಯಕಾರೀ ಸಮಿತಿಯನ್ನು ಆರಿಸಲಾಯಿತು.

ನಂತರ ಲೇಬರ್ ಕಮಿಶನರ್ ಮತ್ತು ಸರಕಾರದ ಮುಂದೆ ಮಜೂರರ ಹಲವಾರು ವಿವಾದಗಳು ಕಳೆದ ಅನೇಕ ಸಮಯದಿಂದ ತೀರ್ಮಾನವಾಗದೆ ಉಳಿದಿರುವುಕ್ಕೆ ಸಭೆ ಅಸಮಾಧಾನವನ್ನು ವ್ಯಕ್ತಪಡಿಸಿ ಈ ವಿವಾದಗಳನ್ನು ಕೂಡಲೇ ತೀರ್ಮಾನಿಸುವಂತೆ ಸರಕಾರವನ್ನು ಒತ್ತಾಯಿಸುವ, ಮಜೂರರ ವೇತನದಲ್ಲಿ ಶೇ. 25ರಷ್ಟು ಹೆಚ್ಚಾಗಬೇಕೆನ್ನುವ, ಎಲ್ಲಾ ಮಜೂರರಿಗೂ ರಜಾ ಸೌಕರ್ಯಗಳು ಸಿಗಬೇಕೆನ್ನುವ, ಠರಾವುಗಳಲ್ಲದೆ ಪ್ರೈವೇಟು ಕಾರುಗಳಲ್ಲಿ ಬಾಡಿಗೆಗೆ ಪ್ರಯಾಣಿಕರನ್ನು ಸಾಗಿಸುವ ದುರ್ವ್ಯವಹಾರವನ್ನು ನಿಲ್ಲಿಸಬೇಕೆಂದು ಸರಕಾರವನ್ನು ವಿನಂತಿಸುವ, ಠರಾವನ್ನೂ ಮಂಜೂರು ಮಾಡಲಾಯಿತು.

ಇತ್ತೀಚೆಗೆ ನಿಧನ ಹೊಂದಿದ ಶ್ರೀ ಪಿ. ಡಿ'ಮೆಲ್ಲೊ ಮತ್ತು ಮುಂಬಯಿಯಲ್ಲಿ ಗೂಂಡಾರ ಅತ್ಯಾಚಾರಕ್ಕೆ ತುತ್ತಾಗಿ ತೀರಿದ ಪ್ರಿಮಿಯರ್ ಓಟೋಮೊಬೈಲ್ಸ್‌ನ ಮಜೂರ ಮುಂದಾಳು ಶ್ರೀ ದಯಾನಂದ ಸುವರ್ಣ ಇವರಿಗೆ ಸಭೆ ಶ್ರದ್ಧಾಂಜಲಿಯನ್ನರ್ಪಿಸಿತು.

ನಂತರ ಶ್ರೀಗಳಾದ ಶಾಂತಾರಾಮ ಪೈ, ಆಲ್ಬರ್ಟ್ ಸಿಕೇರ, ವಾಸು ಬಂಗೇರ, ಡೇವಿಡ್ ಕರ್ಕಡ ಮೊದಲಾದವರು ಭಾಷಣ ಮಾಡಿದರು.

ಅಧ್ಯಕ್ಷರ ಭಾಷಣ, ಧನ್ಯವಾದ ಮತ್ತು ಲಘು ಉಪಾಹಾರಗಳೊಂದಿಗೆ ಸಭೆ ಕೊನೆಗೊಂಡಿತು.

ಪದ್ಮಶ್ರೀ ಡಾ॥ ಮೋದಿ ಇವರು ಮಂಗಳೂರಲ್ಲಿ

ಸುಪ್ರಸಿದ್ಧ ನೇತ್ರ ಚಿಕಿತ್ಸಕ ಡಾ॥ ಮೋದಿಯವರು ಕಳೆದ ಎರಡು ವಾರಗಳಿಂದ ದ. ಕ. ಜಿಲ್ಲೆಯಲ್ಲಿ ಸಂಚರಿಸುತ್ತಿದ್ದಾರೆ. ಕಳೆದ ತಾ. 11ರ ತನಕ 6438 ನೇತ್ರ ರೋಗಿಗಳನ್ನು ಪರೀಕ್ಷಿಸಿ 880 ಮಂದಿಗೆ ನೇತ್ರ ಚಿಕಿತ್ಸೆ ನೀಡಿದ್ದಾರೆ. ಮಂಗಳೂರಿನ ಶಿಬಿರದಲ್ಲಿ 421 ಮಂದಿಗೆ ನೇತ್ರ ಶಸ್ತ್ರ ಚಿಕಿತ್ಸೆ ಮಾಡಿದ್ದು ಎಲ್ಲವೂ ಯಶಸ್ವಿಯಾಗಿವೆ.

ಸರಳರೂ, ವಿನೀತರೂ, ಜನಸೇವಾಕಾಂಕ್ಷಿಗಳೂ ಆದ ಡಾ॥ ಮೋದಿಯವರು ಇಂತಹ ಧರ್ಮಾರ್ಥ ನೇತ್ರ ಚಿಕಿತ್ಸೆ ತನ್ನ ಕರ್ತವ್ಯವೆಂದು ತಿಳಿದಿದ್ದಾರೆ. ಅವರಿಗಾಗಿ ಏರ್ಪಡಿಸಿದ್ದ ಹಲವು ಸತ್ಕಾರ ಸಮಾರಂಭಗಳಲ್ಲಿ ಅವರು ಇದನ್ನೇ ಒತ್ತಿ ಹೇಳಿದ್ದಾರೆ. ಕಳೆದ ತಾ. 12ರಂದು ಮಂಗಳೂರು ನಗರ ಸಭೆ ಅವರಿಗಿತ್ತ ಪೌರ ಸ್ವಾಗತದಲ್ಲಿ ಡಾ॥ ಮೋದಿ ತನ್ನ ನೇತ್ರ ಚಿಕಿತ್ಸೆಯ 'ಮೋಡಿ'ಯನ್ನು ವಿವರಿಸಿದರು. ನೇತ್ರ ಚಿಕಿತ್ಸೆಯೆಂದರೆ ಅದು ಕಷ್ಟತಮವಾದ ಭಯಂಕರವಾದ ಚಿಕಿತ್ಸೆ ಎನ್ನುವ ಕಾಲ ಕಳೆದಿದೆ. ಕುಶಲವಾದ ನೇತ್ರ ವೈದ್ಯ ಅವನ್ನು ಒಂದು ಮರದ ಕೆಳಗೆ ಕೂಡಾ ಮಾಡಬಹುದು. ಭಾರತದಂತಹ ರಾಷ್ಟ್ರದಲ್ಲಿ ಹಳ್ಳಿಗಾಡಿನ ಜನರು ಆಸ್ಪತ್ರೆಗಳನ್ನೋ ಡಾಕ್ಟರುಗಳನ್ನೋ ಹುಡುಕಿಕೊಂಡು ನಗರಗಳಿಗೆ ಬರುವ ಪರಿಸ್ಥಿತಿ ಇಲ್ಲ. ವೈದ್ಯರುಗಳೂ, ಆಸ್ಪತ್ರೆಗಳೂ ಜನರ ಬಳಿ ಹೋಗಬೇಕು. ಧರ್ಮಾರ್ಥ ಚಿಕಿತ್ಸೆ ಒದಗಿಸಬೇಕು ಎಂದೂ ಅವರು ಹೇಳಿದ್ದಾರೆ.

ದೊಡ್ಡಬಳ್ಳಾಪುರ—

ವಡ್ಡನಹಳ್ಳಿಯಲ್ಲಿ ರೈತರ ಸಭೆ

ದೊಡ್ಡಬಳ್ಳಾಪುರದ ತಾಲೂಕು ಸಾಸಲು ಹೋಬಳಿ ವಡ್ಡನಹಳ್ಳಿಯಲ್ಲಿ ಆರೂಢಿ ಡಾಕ್ಟರ್ ಶ್ರೀ ಸಾಂಬಾಜಿಯವರ ಅಧ್ಯಕ್ಷತೆಯಲ್ಲಿ ರೈತರ ಬಹಿರಂಗ ಸಭೆ ನಡೆಯಿತು. ಸಭೆಯಲ್ಲಿ ಶ್ರೀ ಕೃಷ್ಣಪ್ಪ, ಜಿ. ಎನ್. ಸಿ. ಮತ್ತು ಚಿಕ್ಕಗಂಗಣ್ಣನವರು, ರೈತರ ಸಮಸ್ಯೆಗಳ ಬಗ್ಗೆ ಮಾತನಾಡಿದರು. ತಾಲ್ಲೂಕು ರೈತ ಸಂಘದ ಜಂಟಿ ಕಾರ್ಯದರ್ಶಿಗಳಾದ ಬೈರಹನುಮೇಗೌಡರು, "ಜೋಡಿ ಗ್ರಾಮಗಳಲ್ಲಿ" ರೈತರ ಜೀವನ ಮತ್ತು ಸಮಸ್ಯೆಗಳ ಬಗ್ಗೆ ಮಾತನಾಡಿದರು, ಮತ್ತು ಆರೂಢಿ ಕೇಂದ್ರದ ಎಲ್ಲಾ ಭಾಗಗಳಲ್ಲೂ ರೈತ ಸಂಘಕ್ಕೆ ಹೆಚ್ಚು ಹೆಚ್ಚಾಗಿ ಸದಸ್ಯರನ್ನು ಕೂಡಿಸಿ ಸಂಘವನ್ನು ಬಲಪಡಿಸಬೇಕೆಂದು ಕೋರಿದರು. ಅಧ್ಯಕ್ಷತೆ ವಹಿಸಿದ್ದ ಡಾಕ್ಟರ್ ಶ್ರೀ ಸಾಂಬಾಜಿಯವರು ಸ್ವಾತಂತ್ರ್ಯದ ತರುವಾಯದ ಸ್ಥಿತಿಯ ಬಗ್ಗೆ ಮಾತನಾಡಿದರು, ಶ್ರೀಮಾನ್ ನಂಜಪ್ಪನವರ ವಂದನಾರ್ಪಣೆಯೊಡನೆ ಸಭೆ ಮುಕ್ತಾಯವಾಯಿತು.

ನಿಜಲಿಂಗಪ್ಪ ಮಂತ್ರಿ ಮಂಡಲ ಉರುಳಿಸಲು ಮೊರಾರ್ಜಿ ದೇಸಾಯಿ........

(೩ನೇ ಪುಟದಿಂದ)

ನ ಹೆಸರನ್ನು ಮುಂಚಿತವಾಗಿ ನಿರ್ಣಯಿಸಲಿಕ್ಕೆ ಇವರಿಗೆ ಧೈರ್ಯವಾಗಲಿಲ್ಲ. ಎಲ್ಲಿ ಪಾರ್ಟಿ ಒಡೆಯುತ್ತದೋ ಎಂಬ ಅಂಜಿಕೆಯಿತ್ತು. ಮೂರು ತಿಂಗಳಿಮೊಮ್ಮೆ ಮಂತ್ರಿಮಂಡಲವನ್ನು ಬದಲಿಸುತ್ತಿರುವ ಘ್ರಾಸ್ಸಿನ ದಾರಿಯನ್ನು ಕರ್ನಾಟಕ ಹಿಡಿಯುತ್ತದೋ ಎಂದು ಜನರು ಹೇಳುತ್ತಿರುವರು. ಅಂತೂ ಹೊಸ ಕರ್ನಾಟಕ ರಾಜ್ಯಕ್ಕೆ ಕಾಂಗ್ರೆಸ್ಸಿನಿಂದ ಗ್ರಹಣ ಹಿಡಿಯುಹತ್ತಿದ್ದು, ಕರ್ನಾಟಕದ ಅಭಿವೃದ್ಧಿಗೆ ಜನರ ಸುಖ-ಸೋಯಿಗಳಿಗೆ ಶುಭಯೋಗವಲ್ಲೆಂದು ಜನರು ಗುಣಿಗುಣಿಸುತ್ತಿರುವರು. ನಿಜಲಿಂಗಪ್ಪ ಮಂತ್ರಿಮಂಡಲಕ್ಕಿಂತ ಜತ್ತಿ ಮಂತ್ರಿಮಂಡಲ ಯೋಗ್ಯವಾದೀತೆಂದು ಯಾರೂ ನಂಬುವಂತೆ ಕಂಡುಬರುವುದಿಲ್ಲ. ಒಮ್ಮತದಿಂದ ಆರಿಸಿಬಾರದ ಜತ್ತಿಯವರ ಮುಂದಾಳುತ್ವ ಹೆಚ್ಚು ದಿವಸ ತಾಳಲಾರದೆಂದು ಜನರು ಅಭಿಪ್ರಾಯ ವ್ಯಕ್ತಮಾಡುತ್ತಿರುವರು.

ಸುದ್ದಿ ಸಂಗ್ರಹ

ಕುಣಿಗಲ್—

ಪುರಸಭೆ ಕೆಲಸಗಾರರ ಬೇಡಿಕೆ

ಕುಣಿಗಲ್ ಪುರಸಭೆಯ ಸ್ವೀಪರ್ 26 ವರ್ಷ ವಯಸ್ಸಿನ ಕೆ. ಮುನಿಯಪ್ಪ ಎಂಬವನು 17—5—58ನೇ ದಿವಸ ಕೆಲಸಕ್ಕೆ ಹಾಜರಿ ಕೊಟ್ಟು, ತನ್ನ ಕೆಲಸದಲ್ಲಿ ತೊಡಗಿದ್ದಾಗ ಬಸ್ ನಿಲ್ದಾಣದ ಎದುರು ವಿದ್ಯುಚ್ಛಕ್ತಿ ತಗುಲಿ ಮರಣಕ್ಕೀಡಾದುದರ ಬಗ್ಗೆ ಕೆಲಸಗಾರರು ವಿಷಾದಿಸಿ ಈ ಬಗ್ಗೆ ಮೃತನಿಗೆ ಹೆಂಡತಿ ಎರಡು ಮಕ್ಕಳಿದ್ದು ತುಂಬಾ ಬಡ ಕುಟುಂಬವಾದ್ದರಿಂದ, ಪುರಸಭೆಯವರು, ಮೃತನ ಸಂಸಾರಕ್ಕೆ ಒಂದು ವರ್ಷದ ಸಂಬಳವನ್ನು ಮುಃಫತ್ತಾಗಿ ಕೊಡಿಸಿ ಕೊಟ್ಟು ಶ್ರಮಜೀವಿಗಳ ಪ್ರೀತಿಗೆ ಪಾತ್ರರಾಗಬೇಕೆಂದು, ಮುನಿಸಿಪಲ್ ಪ್ರೆಸಿಡೆಂಟರಲ್ಲಿ ವಿನಂತಿಸಿಕೊಂಡಿದೆ.

ಮತ್ತು ಸರಕಾರದವರು ನ್ಯೂ ಸ್ಕೇಲನ್ನು ತಂದಾರಾಭ್ಯದಿಂದ ಇಲ್ಲಿಯ ವರೆಗೂ ಕೆಲಸಗಾರರಿಗೆ ಕೊಡದಿದ್ದುದಕ್ಕೆ ವಿಷಾದಿಸಿ, ಈ ತಿಂಗಳ ಸಂಬಳವನ್ನೂ ಸಹ ಕೆಲಸಗಾರರು ತೆಗೆದುಕೊಂಡಿಲ್ಲ. ಈ ಬಗ್ಗೆ ಅನೇಕ ಬಾರಿ ಪುರಸಭೆಯವರ ಗಮನಕ್ಕೆ ತಂದಾಗ್ಯೂ ಪ್ರಯೋಜನವಾಗಲಿಲ್ಲವಾದ್ದರಿಂದ ಅಸಿಸ್ಟಂಟ್ ಲೇಬರ್ ಕಮಿಷನರ್ ರವರ ಗಮನಕ್ಕೂ ತಂದಿದ್ದೇವೆ. ಇಷ್ಟಾದಾಗ್ಯೂ ಕೆಲಸಗಾರರ ಬಗ್ಗೆ ತಳೆದಿರುವ ಧೋರಣೆಯನ್ನು ಖಂಡಿಸಿ ನಮ್ಮ ಬೇಡಿಕೆಗಳನ್ನು ಈಡೇರಿಸಿಕೊಡಬೇಕೆಂದು ವಿನಂತಿಸಿದ್ದೇವೆ.

ಈ ತಿಂಗಳ ಸಂಬಳವನ್ನು ಕೆಲಸಗಾರರು ತೆಗೆದುಕೊಳ್ಳದೆ ನಿರಾಕರಿಸಿದ್ದಾರೆ. ಊರಿನ ಜನಗಳ ಹಿತದೃಷ್ಟಿಯಿಂದ ಕೆಲಸ ಕಾರ್ಯಗಳಲ್ಲಿ ದಿನನಿತ್ಯವೂ ನಿರತರಾಗಿದ್ದಾರೆ

ಕುಣಿಗಲ್ ಟೌನ್ ಬೀಡಿ ಕೆಲಸಗಾರರ ಸಂಘ

ಕುಣಿಗಲ್ ಟೌನ್ ಬೀಡಿ ಕೆಲಸಗಾರರು ತಾ. 18—5—58ರಲ್ಲಿ ಸಭೆಸೇರಿ ಒಂದು ಸಂಘವನ್ನು ರಚಿಸಿ ಈ ಕೆಳಕಂಡವರನ್ನು ಕಾರ್ಯ ಸಮಿತಿಗೆ ಆರಿಸಿದ್ದಾರೆ. ರಜಿಸ್ಟ್ರೇಷ ಮಾಡಿಸುವ ಬಗ್ಗೆ ಎಲ್ಲಾ ವ್ಯವಹಾರವನ್ನು ಬಹಳ ಚಟುವಟಿಕೆಯಿಂದ ನಡೆಸಿದ್ದಾರೆ.

ಕೆ. ವಿ. ಕೃಷ್ಣಸ್ವಾಮಿ ಅಧ್ಯಕ್ಷರು, ಹುಸೇ ಷರೀಫ್ ಉಪಾಧ್ಯಕ್ಷರು, ಆರ್. ರಾಮಣ್ಣ ಕಾರ್ಯದರ್ಶಿ, ಜಹಿರುದ್ದೀನ್ ಸಹಕಾರ್ಯದರ್ಶಿ, ಅಬ್ದುಲ್ ನಜೀರ್ ಖಜಾಂಚಿ ಮತ್ತು ಇತರೆ 6 ಜನ ಸಮಿತಿ ಸದಸ್ಯರು.

ಪ್ರಕಟಣೆ

ಮುಂದಿನ ವಾರದ ಸಂಚಿಕೆಯಲ್ಲಿ "ಭಾರತ ಕಮ್ಯೂನಿಸ್ಟ್ ಪಕ್ಷದ ಅಮೃತಸರ ಅಧಿವೇಶನ"ದ ಬಗ್ಗೆ ಪ್ರಧಾನ ಕಾರ್ಯದರ್ಶಿ **ಕಾಂ। ಅಜಯ ಕುಮಾರ್ ಘೋಷ್**ರವರ ವಿಚಾರ ಪೂರ್ಣವಾದ ಲೇಖನವನ್ನು ಪ್ರಕಟಿಸಲಾಗುವುದು.

—ಸಂ.

ದೊಡ್ಡಬಳ್ಳಾಪುರದಲ್ಲಿ — ಮೇ ದಿನಾಚರಣೆ —

ಮೇ ದಿನಾಚರಣೆ ಅಂತರ ರಾಷ್ಟ್ರೀಯ ಕಾರ್ಮಿಕರ ಪವಿತ್ರ ದಿನ, 68 ವರ್ಷಗಳ ಹಿಂದೆ ಅಮೆರಿಕಾ ದೇಶೀಯ ಕಾರ್ಮಿಕರನ್ನು ಮಾನವರನ್ನಾಗಿ ಪರಿಗಣಿಸುವಂತೆ ಮಾಡಿದ ದಿನ. ಅಂದಿನಿಂದ ಇಂದಿನವರೆಗೆ ಜಗತ್ತಿನ ಮೂಲೆ ಮೂಲೆಯಲ್ಲಿ ಅವಿಚ್ಛಿನ್ನವಾಗಿ ಆಚರಣೆಯಲ್ಲಿ ಬಂದಿದೆ. ನಮ್ಮೂರಿನಲ್ಲಿ ಈಗತಾನೆ ಜನ್ಮ ತಾಳಿರುವ ಪವರ್ ಮಗ್ಗಗಳ ಕಾರ್ಮಿಕ ಸಂಘದ ಕಾರ್ಯಕಾರಿ ಸಮಿತಿಯವರು ಮೇ 25ನೇ ತಾರೀಖು ಭಾನುವಾರ ಈ ದಿನಾಚರಣೆಯನ್ನು ಜರುಗಿಸಲು ನಿರ್ಧರಿಸಿರುತ್ತಾರೆ. ಇಂಥಾ ದಿನದಲ್ಲಿ ಊರಿನ ಎಲ್ಲಾ ಕಾರ್ಮಿಕರು ಸಾಮೂಹಿಕವಾಗಿ ಮೆರವಣಿಗೆ ಹೊರಟು ಒಂದೆಡೆ ಕಲೆತು, ತಮ್ಮ ಮುಂದಿನ ಭವಿಷ್ಯವನ್ನು ನಿರ್ಧರಿಸಿಕೊಳ್ಳುವುದು ಅತಿ ಮುಖ್ಯವಾದ್ದು. ಯಾವ ವರ್ಗದ ಅಭಿವೃದ್ಧಿಯ ಮೇಲೆ ದೇಶದ ಆಗು ಹೋಗುಗಳು ನಿಂತಿದೆಯೋ ಅಂಥಾ ಕಾರ್ಮಿಕ ಹಾಗೂ ರೈತವರ್ಗ ನಮ್ಮ ದೇಶದಲ್ಲಿ ಬಂಡವಾಳಗಾರರ ಶೋಷಣೆವಳಗಾಗಿ ಹೀನಸ್ಥಿತಿಯಲ್ಲೇ ಉಳಿದಿದೆ. ಒಂದನೇ ಪಂಚವಾರ್ಷಿಕ ಯೋಜನೆ ಮುಗಿದು ಎರಡನೆಯದಕ್ಕೆ ಹೆಜ್ಜೆ ಇಟ್ಟಿದ್ದೇವೆ. ಇದಕ್ಕೆ ಯಶಸ್ಸು ಕೋರಿ ಕಾರ್ಯಗತ ಮಾಡುವುದು ಪ್ರತಿಯೊಬ್ಬ ಕಾರ್ಮಿಕನ ಕರ್ತವ್ಯ. ಆದರೂ ಇದರ ಅರಿವು ಕಾರ್ಮಿಕನಿಗಿಲ್ಲವಾಗಿದೆ. ದೇಶವಾದರೂ ಯಾರದು. ಸಮತಾವಾದ, ಸಮಾಜವಾದವನ್ನ ಘೋಷಿಸುತ್ತಿರುವ ಆಡಳಿತ ಪಕ್ಷವಾದ ಕಾಂಗ್ರೆಸ್ಸು ಸಾಗುತ್ತಿರುವದಾದರೂ ಎತ್ತ. ದೇಶದ ಪ್ರತಿಗಾಮಿ ಯಾರು, ಪ್ರಗತಿಗಾಮಿ ಯಾರೆಂಬುದನ್ನು ಅರಿಯುವುದು ಕಷ್ಟತರವಾಗಿದೆಯೇ. ಸ್ವಾತಂತ್ರ ಹೋರಾಟ ಕಾಲದಲ್ಲಿ ಭುಜಕ್ಕೆ ಭುಜಕೊಟ್ಟು, ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿ ಹೋರಾಡಿದ ಕಾರ್ಮಿಕನನ್ನು ಇಷ್ಟು ಜಾಗ್ರತೆ ಮರೆತು ಬಂಡವಾಳಶಾಹಿಗಳ ಶೋಷಣೆಗೆ ಒಳಗಾಗುವಂತೆ ಬಯಲು ಮಾಡಿರುತ್ತಾರೆ. ಈಗೀಗ ಪಟ್ಟಣಗಳಲ್ಲಿ ಕಾರ್ಮಿಕರು ಎಚ್ಚೆತ್ತುಕೊಂಡು ಸುಸಂಘಟಿತರಾಗಿ ಬಂಡವಾಳಶಾಹಿ ದೌರ್ಜನ್ಯವನ್ನು ಹೆದರಿಸಿ ಮಾನವತ್ವವನ್ನು ಕಾಪಾಡಿಕೊಳ್ಳುವ ಶಕ್ತಿ ಗಳಿಸಿಕೊಳ್ಳುತ್ತಿರುವುದು ಶ್ಲಾಘನೀಯ. ನಮ್ಮೂರಿನಲ್ಲಿ ಮೊನ್ನೆತಾನೆ ಸಂಘದ ಸದಸ್ಯರಾದ 3 ಜನ ಕಾರ್ಮಿಕರ ಮೇಲೆ ಮಾಲೀಕರಾದ ಶ್ರೀ ಬಿ. ಕೆ. ಅರಸಪ್ಪನವರು ಸಂಘದ ಸದಸ್ಯರಾದರೆಂಬ ಆಕ್ಷೇಪದಿಂದಲೋ ಅಥವಾ ಅವರಲ್ಲಿ ಕೆಲಸ ಬಿಟ್ಟು ಬಿಡುತ್ತಾರೆಂದೋ, ಅವರನ್ನು ಹೊಡೆದು, ಬಡಿದು ನಿರ್ದೋಷಿಗಳಾದ ಅವರ ಮೇಲೆ ಕಳ್ಳತನದ ಸುಳ್ಳು ಆರೋಪಣೆ ಮಾಡಿ ಅವಹೇಳನ ಮಾಡಿರುವ ಬಗ್ಗೆ ರಕ್ಷಣೆ ಕೋರಿ ಸಂಘಕ್ಕೆ ಮನವಿ ಸಲ್ಲಿಸಿರುತ್ತಾರೆ. ಯಾವ ಶ್ರಮಜೀವಿಯ ದುಡಿಮೆಯಿಂದ ಮಾಲಿಕ ತನ್ನ ಸುಖಸಂಪತ್ತನ್ನು ಹೆಚ್ಚಿಸಿಕೊಂಡು, ಭೋಗ ಭಾಗ್ಯಗಳನ್ನು ಅನುಭವಿಸುತ್ತಿರುವನೋ ಅಂತಹವನ ಮೇಲೆ ಈ ಅಮಾನುಷ ಕೃತ್ಯ ತರವಲ್ಲ. ಈ ಬಂಡವಾಳಗಾರರು ಕಾರ್ಮಿಕರನ್ನು ಮಾನವರೆಂದು, ಭಾವಿಸದೆ ಯಂತ್ರಗಳೆಂದು ತಿಳಿದಂತೆ ಕಾಣುತ್ತೆ. ಇನ್ನು ಮುಂದೆಯಾದರೂ ಈ ಭಾವನೆ ದೂರವಾಗಬೇಕು. ಕಾರ್ಮಿಕರಿಗೂ ಮಾಲೀಕರಿಗೂ ಸೌಹಾರ್ದ ಹೆಚ್ಚಾಗಬೇಕು. ಕಾನೂನು ರೀತ್ಯ ದೊರಕಬೇಕಾದ ಎಲ್ಲಾ ಸೌಲಭ್ಯಗಳೂ ಕಾರ್ಮಿಕರಿಗೆ ದೊರಕುವಂತಾಗಬೇಕು. ದೊಡ್ಡಬಳ್ಳಾಪುರದಲ್ಲಿ ಅತಿ ಜರೂರಾಗಿ ಆಗಬೇಕಾದ್ದು ವಾರದ ರಜಾ. ಕೆಲಸ ಮಾಡುವ ಕಡೆ ಸರಿಯಾದ ಗಾಳಿ ಬೆಳಕಿನ ಸೌಕರ್ಯ. ನಿಗದಿಯಾದ ಕೆಲಸದ ಕಾಲ ಒಂದೆರಡು ಮಗ್ಗಗಳಿರುವ ಸಣ್ಣ ಕುಟುಂಬದಲ್ಲಿ ಸ್ವಲ್ಪ ಹೆಚ್ಚು ಕಡಮೆಯಾದರೂ ದೊಡ್ಡ ಫ್ಯಾಕ್ಟರಿಗಳಲ್ಲಿ ಇದು ಅತಿ ಜರೂರಾಗಿ ಆಗಬೇಕು. ಫ್ಯಾಕ್ಟರಿ ಕಾನೂನು ಜಾರಿಗೆ ತರತಕ್ಕ ಅಧಿಕಾರಿಗಳು ಈ ಬಗ್ಗೆ ಸಂಪೂರ್ಣವಾದ ನೆರವು ಕೊಡಬೇಕಾಗಿ ಕೋರುತ್ತೇವೆ. ಕಾರ್ಮಿಕರಾದರೂ ತಮ್ಮ ಎಲ್ಲಾ ಹಕ್ಕುಬಾಧ್ಯತೆಗಳನ್ನು ಪಡೆದುಕೊಳ್ಳಲು ಸುಸಂಘಟಿತರಾಗಬೇಕು. ಇದರ ಸಂಕೇತ ದಿನವಾದ ಮೇ ದಿನಾಚರಣೆಯಂದು ಸಕಾಲಕ್ಕೆ ಉತ್ಸವಾದಿಯಲ್ಲಿ ಭಾಗಿಗಳಾಗಿ ಆ ಪವಿತ್ರ ದಿನವನ್ನು ಯಶಸ್ವಿಯಾಗಿ ಮಾಡಬೇಕಾಗಿ ಪ್ರಾರ್ಥಿಸುತ್ತೇವೆ.

ಕಾರ್ಮಿಕ ಸಂಘ
ದೊಡ್ಡಬಳ್ಳಾಪುರ.

ಉಡುಪಿ—

ಕಮ್ಯೂನಿಸ್ಟ್ ಪಾರ್ಟಿ ಆಫೀಸು ಉದ್ಘಾಟನಾ ಸಮಾರಂಭ

ಇದೇ ತಾ. 18—5—58ರಲ್ಲಿ ಉಡುಪಿಯ ಶಿರಿಬೀಡಿನಲ್ಲಿ ಹೊಸದಾಗಿ ತೆರೆಯಲಾದ ಉಡುಪಿ ಕಮ್ಯೂನಿಸ್ಟ್ ಪಾರ್ಟಿ ಆಫೀಸಿನ ಉದ್ಘಾಟನಾ ಸಮಾರಂಭವು ಶ್ರೀ ಸಿಂಪ್ಸನ್ ಸೋನ್ಸರ ಅಧ್ಯಕ್ಷತೆಯಲ್ಲಿ ಸಂಜೆ 7ಕ್ಕೆ ಜರಗಿತು. ಸಮಾರಂಭದ ಉದ್ಘಾಟನೆಯನ್ನು ಬೀಡಿಲೇಬರ್ ಯೂನಿಯನ್ ಕಾರ್ಯದರ್ಶಿ ಶ್ರೀ ಗುರುವ ಪೂಜಾರಿಯವರು ನೆರವೇರಿಸಿದರು. ಶ್ರೀ ಪಿ. ಶೀನ ನ್ಯಾಕರು ಸಭಿಕರನ್ನು ಸ್ವಾಗತಿಸಿ, ಆಫೀಸು ವ್ಯವಸ್ಥೆಗೆ ಸರ್ವರೀತಿಯ ಸಹಾಯ-ಸಹಕಾರವಿತ್ತವರನ್ನು ಅಭಿನಂದಿಸಿ ಮಾತಾಡಿದರು. ನಂತರ ಶ್ರೀಗಳಾದ ಬಿ. ಗೋಪಾಲ ಸುವರ್ಣ, ಇಮ್ಮಾನುವೆಲ್ ಜತ್ತನ್ನ, ಶ್ರೀನಿವಾಸ ಸೋಮಯಾಜಿ (ಹೋಟೆಲ್ ಕೀಪರ್), ನಾರಾಯಣ ಸೇರಿಗಾರ, ಟಿ. ರಾಮಮೋಹನ ಹೆಗ್ಡೆ, ಮೂಡನಿಡಂಬೂರು ಪುಟ್ಟಪ್ಪನವರು, ಬಾಳಗಟ್ಟೆ ರಾಮಚಂದ್ರ ಭಟ್, ಯು. ಎ. ಕೆ. ಪೊದುವಾಳ್ ಮೊದಲಾದವರು ಕಮ್ಯೂನಿಸ್ಟ್ ಪಾರ್ಟಿಯನ್ನು ಬಲಪಡಿಸಬೇಕಾದ ಅಗತ್ಯತೆ ಮತ್ತು ತಮ್ಮ ಹಾರ್ದಿಕ ಬೆಂಬಲವನ್ನು ಸೂಚಿಸಿ ಮಾತಾಡಿದರು. ಕೊನೆಗೆ ಸಭಾಧ್ಯಕ್ಷರು ಕಮ್ಯೂನಿಸ್ಟ್ ಪಾರ್ಟಿಯನ್ನು ಬಲಪಡಿಸಲು ವಿನಂತಿಸಿ, ಸಹಾಯ-ಸಹಕಾರವಿತ್ತವರನ್ನೆಲ್ಲಾ ಅಭಿನಂದಿಸಿ ಮಾತಾಡಿದ ಮೇಲೆ, ಧನ್ಯವಾದಾರ್ಪಣೆಯಾಗಿ ಲಘು ಪಾನೀಯದೊಂದಿಗೆ ಸಭೆ ಮುಕ್ತಾಯವಾಯಿತು.

ಜನಾಬ್ ಕರೀಂ ಸಾಹೇಬ್‌ರವರು ಅಲಾರಂ ಗಡಿಯಾರವೊಂದನ್ನು ಪಾರ್ಟಿಗೆ ದಾನವಿತ್ತಿದ್ದಾರೆ. ಮತ್ತು ಶ್ರೀಗಳಾದ ಬಿ. ಪದ್ಮನಾಭ, ಕೆ. ಶೀನ ಜೋಗಿ, ಶ್ರೀನಿವಾಸ ಸೋಮಯಾಜಿ, ಎ. ಲಕ್ಷ್ಮೀ, ಎಂ. ಲಕ್ಷ್ಮಣ, ಎಂ. ಕೊರಗ ಶೆಟ್ಟಿ ಇವರುಗಳು ಒಂದೊಂದು (7) ಬಾಟಾ ಕುರ್ಚಿಗಳನ್ನೂ, ಬಿ. ಕೊರಗ ಶೆಟ್ಟಿಯವರು ಮೇಜಿಗೆ ಹಾಕುವ ವಸ್ತ್ರವನ್ನೂ, ಯು. ಎ. ಕೆ. ಪೊದುವಾಳ್‌ರವರು 64 ಕೇಂದಲನ್ನೂ ಉದಾರವಾಗಿ ಕೊಟ್ಟಿರುತ್ತಾರೆ. ಅಲ್ಲದೆ ಸಭೆಯಲ್ಲಿ ಹಾಜರಿದ್ದ ಹೊಟೇಲ್ ಕೀಪರ್ ಶ್ರೀ ಸದಾನಂದ ಪೈಯವರು ಒಂದು ಕುರ್ಚಿಯನ್ನು ಕೊಡುವುದಾಗಿ ವಾಗ್ದಾನವಿತ್ತಿದ್ದಾರೆ.

ತೀರ್ಥಹಳ್ಳಿ—

ಕಮ್ಯೂನಿಸ್ಟ್ ಪಾರ್ಟಿ ಕಾರ್ಯಕರ್ತರ ಸಭೆ

ತಾ. 20—5—58ನೇ ಮಂಗಳವಾರ ತೀರ್ಥಹಳ್ಳಿ ಟೌನ್ ಕಮ್ಯೂನಿಸ್ಟ್ ಪಾರ್ಟಿ ಕಾರ್ಯಕರ್ತರು ಸಭೆಸೇರಿದ್ದರು. ತೀರ್ಥಹಳ್ಳಿ ಕಮ್ಯೂನಿಸ್ಟ್ ಪಾರ್ಟಿ ಕಾರ್ಯದರ್ಶಿ ಕಾಮ್ರೇಡ್ ಪಿ. ದಿನೇಶ್‌ರವರು ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಮಾಡಲಾಯಿತು.

ಬಹಳ ದಿನಗಳಿಂದ ಊಹಾಪೋಹೆಗಳಿಗೆ ಎಡೆಕೊಟ್ಟ ದೇವೀಕೊಳಂ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಸ್ಪರ್ಧಿಯಾದ ರೋಸಮ್ಮ ಪೊನ್ನೂಸ್‌ರವರು ಏಳು ಸಾವಿರ ಓಟುಗಳ ಬಹುಮತ ಪಡೆದು ಜಯಶೀಲರಾದ ಪ್ರಯುಕ್ತ ಈ ಸಭೆ ಅವರಿಗೆ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತದೆ. ದೇವೀಕೊಳಂ ಚುನಾವಣೆಯ ಸಂಬಂಧದಲ್ಲಿ ಕಾಂಗ್ರೆಸ್ ಪಕ್ಷದವರು ಹಸ್ತ ಪತ್ರಿಕೆಗಳನ್ನು ಪ್ರಕಟಿಸಿ ಹಂಚಿದ್ದಾರೆ. ಕೆಲವು ಕಡೆ ಕಾಂಗ್ರೆಸ್ ಮತ್ತು ಪಿ. ಎಸ್. ಪಿ. ಕಾರ್ಯಕರ್ತರು ಅಸಭ್ಯ ರೀತಿಯಿಂದ ವರ್ತಿಸಿದ್ದಾರೆ. ಆದರೂ ಸಹ ಶಾಂತ ರೀತಿಯಿಂದ ವರ್ತಿಸಿದ ಕಮ್ಯೂನಿಸ್ಟ್ ಕಾರ್ಯಕರ್ತರಿಗೂ ಮತ್ತು ಕೇರಳ ಪೋಲೀಸ್ ಇಲಾಖೆಯವರಿಗೂ ಈ ಸಭೆ ವಂದಿಸುತ್ತದೆ.

ಮೈಸೂರು—

ವಿಜಯ ಸಮಾರಂಭ

ದೇವಿಕುಲಂ ಉಪಚುನಾವಣೆಯಲ್ಲಿ ಕಮ್ಯೂನಿಸ್ಟ್ ಉಮೇದುವಾರರಾದ ಕಾಂ॥ ರೋಸಮ್ಮ ಪೊನ್ನೂಸ್‌ರವರು ಜಯಗಳಿಸಿದ್ದಕ್ಕಾಗಿ ಮೈಸೂರು ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಕಛೇರಿಯಲ್ಲಿ ಸಭೆ ನಡೆಯಿತು. ಸಭೆಗೆ, ಶ್ರೀ ತಗಡೂರು ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಆನಂದ ಮತ್ತು ಸ್ವಾಮಿದಾಸ್‌ರವರು ಭಾಷಣಮಾಡಿ ಈ ವಿಜಯದ ಮಹತ್ವವನ್ನು ವಿವರಿಸಿ ಅಮೃತಸರದಲ್ಲಾದ ಠರಾವಿನ ಬಗ್ಗೆ ಜನಗಳ ಬೆಂಬಲವನ್ನು ತಿಳಿಸಿದರು. ಸಿಹಿತಿಂಡಿಯ ವಿನಿಯೋಗದೊಡನೆ ಸಮಾರಂಭವು ಮುಕ್ತಾಯವಾಯಿತು.

ಅಂದವಾದ ಮುದ್ರಣ ಕೆಲಸಕ್ಕೆ
ಜನಶಕ್ತಿ
ಮುದ್ರಣಾಲಯಕ್ಕೆ ಸಂದರ್ಶನವೀಯಿರಿ

ಬೆಂಗಳೂರು—

ಸಿಲ್ಕ್ ಕಾರ್ಮಿಕನಿಗೆ ಚೂರಿಯಿಂದ ಇರಿತ

ಮೇ 19ರಂದು ಬೆಂಗಳೂರಿನಲ್ಲಿರುವ ಕೈಗಾರಿಕಾ ಪಂಚಾಯ್ತಿ ಕೋರ್ಟಿನ ಎದುರಿನಲ್ಲಿ, ಹಿಂದುಸ್ತಾನ್ ವಿಮಾನ ಕಾರ್ಖಾನೆ ನೌಕರರ ಸಂಘಕ್ಕೆ ದ್ರೋಹ ಬಗೆದು, ಮ್ಯಾನೇಜ್‌ಮೆಂಟಿನ ಬಾಲಬಡುಕನಾಗಿರುವ ಎ. ವಿ. ಸುಂದರಂ ಸಿಲ್ಕ್ ಕೆಲಸಗಾರರ ಸಂಘದ ಕಾರ್ಯಕರ್ತರಾದ ಶ್ರೀ ವೆಂಕಟೇಶ್‌ರವರನ್ನು ಚೂರಿಯಿಂದ ಇರಿದು ಘಾಯಗೊಳಿಸಿದ್ದಾರೆ.

ಎ. ವಿ. ಸುಂದರಂ, ವಿಶ್ವನಾಥನ್ ಮತ್ತು ಅವರ ಗುಂಪು ಹಿಂದೂಸ್ತಾನ ವಿಮಾನ ಕಾರ್ಖಾನೆ ನೌಕರರಿಗೆ ದ್ರೋಹ ಬಗೆದು ಸಂಪೂರ್ಣವಾಗಿ ಮ್ಯಾನೇಜ್‌ಮೆಂಟಿನ ಕಡೆಗೆ ಹೋಗಿ ಅವರ ಭಂಟರಂತೆ ಕಾರ್ಮಿಕರ ಐಕ್ಯತೆಯನ್ನು ಮುರಿಯಲು ಯತ್ನಿಸುತ್ತಿದ್ದಾರೆ. ಮನಸ್ಸಿಗೆ ಬಂದಂತೆ ಕಮ್ಯೂನಿಸ್ಟ್ ಪಾರ್ಟಿಯನ್ನು ಮತ್ತು ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸನ್ನು ಬೈಯ್ಯ ಹತ್ತಿದ್ದಾರೆ.

ಕೈಗಾರಿಕಾ ನ್ಯಾಯಾಲಯದ ಬಳಿ ಹಿಂದಿನ ದಿನ ಸಿಲ್ಕ್ ಕೆಲಸಗಾರರಿಗೂ ಅವರಿಗೂ ಈ ಬಗ್ಗೆ ವಾಗ್ವಾದವಾಗಿದ್ದುವು. ಸಿಲ್ಕ್ ಕಾರ್ಮಿಕರು ಕಮ್ಯೂನಿಸ್ಟ್ ಪಾರ್ಟಿಯ ವಿರುದ್ಧ ಕೆ. ಪಿ. ಟಿ. ಯು. ಸಿ. ವಿರುದ್ಧ, ಸುಂದರಂ ಅವರುಗಳು ಅಪಪ್ರಚಾರ ಮಾಡುತ್ತಿರುವುದನ್ನು ವಿರೋಧಿಸಿದ್ದರು. ನೈತಿಕವಾಗಿ ಯಾವ ಧೋರಣೆಯೂ ಇಲ್ಲದ ಸುಂದರಂ, ವಿಶ್ವನಾಥ್ ಇವರು ಸಿಲ್ಕ್ ಕಾರ್ಮಿಕರ ಮೇಲೆ ಗೂಂಡಾಗಿರಿ ನಡೆಸಲು ತೀರ್ಮಾನಿಸಿದ್ದು ಮೇ 19ರಂದು ತಮ್ಮ ಸಂಗಡಿಗರೊಂದಿಗೆ ಬಂದು ಸಿಲ್ಕ್ ಕೆಲಸಗಾರರ ಮೇಲೆ ಧಾಳಿ ನಡೆಸಿದರು. ಸುಂದರಂ ಚಾಕುವಿನಿಂದ ಶ್ರೀ ವೆಂಕಟೇಶ್‌ರವರಿಗೆ ಇರಿದು ಓಡಿಹೋದರು. ಘಾಯಗೊಂಡ ವೆಂಕಟೇಶರವರನ್ನು ಆಸ್ಪತ್ರೆಗೆ ಸೇರಿಸಲಾಯಿತು.

ಪೋಲೀಸರು ಸುಂದರಂ ಮೊದಲಾದವರನ್ನು ಬಂಧಿಸಿ ಅವರ ಮೇಲೆ ಕೇಸು ಹಾಕಿದ್ದಾರೆ.

ಸಿಲ್ಕ್ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಎಸ್ ಸೂರ್ಯನಾರಾಯಣ ರಾವ್ ಇವರು ಪತ್ರಿಕೆಗೆ ಹೇಳಿಕೆಯೊಂದನ್ನಿತ್ತು ಗೂಂಡಾಗಿರಿಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಪೋಲೀಸರು ಈ ಪುಂಡರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಪಡಿಸಿದ್ದಾರೆ.

ವಿಶ್ವಶಾಂತಿ ಸಮ್ಮೇಳನಕ್ಕೆ ಸಿದ್ಧತೆ

ಜುಲೈ 16 ರಿಂದ 22 ರವರೆಗೆ ಸ್ಟಾಕ್‌ಹೋಂನಲ್ಲಿ ನಡೆಯಲಿರುವ ನಿಶ್ಶಸ್ತ್ರೀಕರಣ ಮತ್ತು ಅಂತರರಾಷ್ಟ್ರೀಯ ಸಹಕಾರದ ಬಗ್ಗೆ ವಿಶ್ವಶಾಂತಿ ಪರಿಷತ್ತಿಗೆ ಸಿದ್ಧತೆ ನಡೆಯುತ್ತಿದೆ. ವಿಶ್ವದ ನಾನಾ ಭಾಗಗಳಿಂದ 3,000 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ವಿಶ್ವಶಾಂತಿ ಹೋರಾಟದಲ್ಲಿ ಸತತವಾಗಿ ಮುನ್ನಡೆಯುತ್ತಿರುವ ಶಾಂತಿ ಚಳವಳಿಯಲ್ಲಿ ಈ ಸಮ್ಮೇಳನ ಹೊಸ ಘಟ್ಟವನ್ನು ತೆರೆಯಲಿದೆ. ಇದನ್ನು "ಜನತೆಯ ಶೃಂಗ ಸಮ್ಮೇಳನ" ಎಂದು ಕರೆಯಲಾಗುತ್ತಿದೆ.

ಸಮ್ಮೇಳನಕ್ಕೆ ಅಪಾರವಾದ ಬೆಂಬಲ ವಿವಿಧ ಕಡೆಗಳಿಂದ ಬರುತ್ತಿದೆ. ಕೈರೋದಲ್ಲಿ ನಡೆದ ಆಫ್ರೋ-ಏಷ್ಯನ್ ಜನತಾ ಸಮ್ಮೇಳನವು ಈ ಸಮ್ಮೇಳನಕ್ಕೆ ಪೂರ್ಣ ಬೆಂಬಲವಿತ್ತಿದೆ.

ಭಾರತದಲ್ಲಿ ಈ ಸಮ್ಮೇಳನದಲ್ಲಿ ಭಾಗವಹಿಸಲು ಸಿದ್ಧತಾ ಸಮಿತಿಯನ್ನು ರಚಿಸಲಾಗಿದೆ. ವಿವಿಧ ಪ್ರಾಂತಗಳಲ್ಲಿ ಸಮ್ಮೇಳನಗಳನ್ನು ನಡೆಸಲು ಸಿದ್ಧತೆಯಾಗುತ್ತಿದೆ. ಭಾರತದಿಂದ ಸ್ಟಾಕ್ ಹೋಂ ಸಮ್ಮೇಳನದಲ್ಲಿ ಭಾಗವಹಿಸಲು ದೊಡ್ಡ ಪ್ರತಿನಿಧಿ ಮಂಡಲವನ್ನು ಕಳಿಸಲು ಸಿದ್ಧತೆಯಾಗುತ್ತಿದೆ.

ಜೂನ್ 1 ರಿಂದ 8 ರವರೆಗೆ ಸ್ಟಾಕ್ ಹೋಂ ಅಧಿವೇಶನದ ಬಗ್ಗೆ ಪ್ರಚಾರ ನಡೆಸಲು ಸ್ಟಾಕ್ ಹೋಂ ಅಧಿವೇಶನ ವಾರ ಆಚರಿಸಬೇಕೆಂದು ಸಿದ್ಧತಾ ಸಮಿತಿ ಕರೆಯಿತ್ತಿದೆ.

ರಾಜ್‌ಕೋಟ್‌ನಲ್ಲಿ ರೈಲ್ವೆ ದುರಂತ

ಮೇ 21ರಂದು ರಾಜ್‌ಕೋಟ್‌ನಲ್ಲಿ ಕೀರ್ತಿ ಎಕ್ಸ್‌ಪ್ರೆಸ್ ರೈಲುಕಂಬಿ ತಪ್ಪಿ ಉರುಳಿ 25ಮಂದಿ ಮಡಿದು, 52 ಮಂದಿಗೆ ಘಾಯಗಳಾಗಿವೆ ಎಂದು ವರದಿಯಾಗಿದೆ. ಭಾರತ ರೈಲ್ವೆಯಲ್ಲಿ ದುರಂತಗಳು ಒಂದಾದಮೇಲೊಂದರಂತೆ ನಡೆಯುತ್ತಲೇ ಇದೆ. ಪ್ರಯಾಣಿಕರಿಗೆ ಸುರಕ್ಷಿತ ಪ್ರಯಾಣದ ಭರವಸೆಯೇ ಇಲ್ಲವಾಗುತ್ತಿದೆ. ಸರಕಾರ ಮತ್ತು ರೈಲ್ವೆ ಬೋರ್ಡಿನವರು ಸೂಕ್ತ ಕ್ರಮ ಕೈಗೊಂಡು ಇಂಥ ದುರಂತಗಳು ಆದಷ್ಟು ಸಂಭವಿಸದಂತೆ ನೋಡುವುದರ ಬದಲು ಸುಮ್ಮನೆ ಕುಳಿತಿದೆಯೆಂದು ಹೇಳಬಹುದಾಗಿದೆ. ಸಂಭವಿಸುತ್ತಿರುವ ರೈಲ್ವೆ ದುರಂತಗಳೇ ಇದಕ್ಕೆ ಸಾಕ್ಷಿಯಾಗಿದೆ.

ರಾಜ್‌ಕೋಟ್ ದುರಂತದಲ್ಲಿ ಮರಣಕ್ಕೀಡಾದವರಿಗೆ ನಮ್ಮ ಸಂತಾಪವನ್ನು ವ್ಯಕ್ತಗೊಳಿಸುತ್ತೇವೆ.

ದೇವೀಕುಲಂ ಕಮ್ಯೂನಿಸ್ಟ್ ವಿಜಯಕ್ಕೆ ಅಭಿನಂದನೆ

ದೇವೀಕುಲಂ ಉಪ ಚುನಾವಣೆಯಲ್ಲಿ ಅಧಿಕ ಮತ ಗಳಿಸಿ ವಿಜಯ ಗಳಿಸಿದ ಕಮ್ಯೂನಿಸ್ಟ್ ಉಮೇದುವಾರರಾದ ರೋಸಮ್ಮ ಪೊನ್ನೂಸ್‌ರವರನ್ನು ಮತ್ತು ಕಮ್ಯೂನಿಸ್ಟ್ ಪಾರ್ಟಿಯನ್ನು ಅಭಿನಂದಿಸಿ, ಕಮ್ಯೂನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತ ಸಮಿತಿ ಮತ್ತು ಬೆಂಗಳೂರು ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ನಗರ ಶಾಖೆ ತಂತಿಯನ್ನು ಮೇ 20ರಂದು ಕಳಿಸಿಕೊಟ್ಟಿದೆ.

ಆಂಧ್ರ ಶಾಸನ ಸಭೆಯ ಕಮ್ಯೂನಿಸ್ಟ್ ಸದಸ್ಯರು ಚುನಾವಣೆಯ ವಿಜಯದ ಬಗ್ಗೆ ಸಂತೋಷ ವ್ಯಕ್ತಗೊಳಿಸಿ ಅಭಿನಂದನಾ ತಂತಿಯನ್ನು ಮೇ 19ರಂದು ರಾತ್ರಿಯೇ ಕಳಿಸಿಕೊಟ್ಟಿತು. ದೇಶದ ನಾನಾ ಭಾಗಗಳಿಂದ ಕಮ್ಯೂನಿಸ್ಟ್ ಪಾರ್ಟಿ ಕಛೇರಿಗೆ ಅಭಿನಂದನಾ ಪತ್ರಿಕೆಗಳು ಸುರಿಯುತ್ತಿವೆ ಎಂದು ತಿಳಿದುಬಂದಿದೆ.

ರಷ್ಯದಲ್ಲಿ ಪ್ಲಾಸ್ಟಿಕ್ ಹಡಗುಗಳ ನಿರ್ಮಾಣ !

ಮಾಸ್ಕೋದಲ್ಲಿರುವ ಕಾಲಿನಿನ್ ಕಾರ್ಖಾನೆಯಲ್ಲಿ ಈಗ ಅನೇಕ ಪ್ಲಾಸ್ಟಿಕ್ ಹಡಗುಗಳನ್ನು ತಯಾರಿಸಲಾಗುತ್ತಿದೆ. ರೂಢಿಯಲ್ಲಿರುವ ದೋಣಿಗಳೊಂದಿಗೆ ಹೋಲಿಸಿದಲ್ಲಿ ಈ ದೋಣಿಗಳು ಹೆಚ್ಚು ನಯವಾಗಿಯೂ, ಎಳೆತವಿಲ್ಲದೆಯೂ ಇವೆ ಯಾವುದರಿಂದ ಮರದ ದೋಣಿಗಿಂತಲೂ ತುಂಬಾ ಹೆಚ್ಚು ವೇಗವಾಗಿ ಇವು ಚಲಿಸುತ್ತವೆ. ಹೊರಾವರಣ ಮತ್ತು ಒಳಾವರಣಗಳ ನಡುವೆ ಯಾವುದಾದರೂ ಸರಂಧ್ರ ವಸ್ತುವನ್ನು ತುಂಬಿಸಿಡುವುದರಿಂದ ಈ ದೋಣಿಗಳ ಪ್ಲವನ ಶಕ್ತಿಯು ಉಲ್ಲೇಖನೀಯವಾಗಿರುವುದು. ಅವುಗಳನ್ನು ಸಂಪೂರ್ಣತಃ ನೀರಿನಿಂದ ತುಂಬಿಸಿದರೂ ಕೂಡ ಅವು ಮುಳುಗುವುದಿಲ್ಲ !

ಹಡಗುಗಳ ನಿರ್ಮಾಣಕ್ಕಾಗಿ ಉಪಯೋಗಿಸುವ ಸುನಮ್ಯ ವಸ್ತುಗಳ ಬಾಳಿಕೆಯು ಅತ್ಯುತ್ತಮ ಉಕ್ಕಿಗಿಂತಲೂ ಎಷ್ಟು ಮಾತ್ರವೂ ಕಡಿಮೆಯಾಗಿಲ್ಲ. ಅದರ ನಿರ್ದಿಷ್ಟ ತೂಕವು ಸುಮಾರು ಶೇಕಡ ೮೦ಷ್ಟು ಕಡಿಮೆಯಾಗಿದೆ. ವಾತಾವರಣದ ಮತ್ತು ಹವಾಮಾನದ ಪ್ರಭಾವಗಳಿಗೆ ನಿರೋಧಕವಾಗಿರುವ ಈ ದೋಣಿಗಳು ೭ರಿಂದ ಹಿಡಿದು ೨೦೦ ಡಿಗ್ರಿಗಳ ಸೆಂಟಿಗ್ರೇಡ್ ಶೀತೋಷ್ಣತೆಯನ್ನು ತಡೆದುಕೊಳ್ಳಬಲ್ಲವು. ಅವಕ್ಕೆ ತುಕ್ಕು ಹಿಡಿಯುದಿಲ್ಲ ಮತ್ತು ಪೆಟ್ರೋಲ್ 'ಪ್ಯಾರಾಫಿನ್' 'ಪೆಟ್ರೋಲಿಯಂ' ತೈಲಗಳು ಮತ್ತು ಉಪ್ಪು ನೀರು— ಇವುಗಳಿಂದ ಈ ದೋಣಿಗಳ ಮೇಲೆ ಯಾವ ಪರಿಣಾಮವೂ ಉಂಟಾಗದು.

೧೦೦ ಟನ್ನುಗಳ ಭಾರವನ್ನು ಹೊರಬಲ್ಲ ಸಾಮಾನು ದೋಣಿಗಳನ್ನೂ, ೧೫೦ ಅಶ್ವಶಕ್ತಿಯ ಎಳೆತದ ದೋಣಿಗಳನ್ನೂ, ೧೦೦ ಜನ ಪ್ರಯಾಣಿಕರನ್ನು ಹೊರಬಲ್ಲ ದೋಣಿಗಳನ್ನೂ ಹಾಗೂ ಸಣ್ಣ ವಿಹಾರ ನೌಕೆಗಳನ್ನೂ ಒಳಗೊಂಡು ಅನೇಕ 'ಪ್ಲಾಸ್ಟಿಕ್' ದೋಣಿಗಳನ್ನು ಮಾಸ್ಕೋ ಇಂಜಿನಿಯರರು ಬೇಗನೆ ರೂಪಿಸಲಿರುವರು.

'ತಾಸ್'

ಓದುಗರ ಓಲೆ

ಪೀಣ್ಯ ಗ್ರಾಮದ ವಿ. ಪಿ. ಚೇರ್ಮನ್ನರ ದುರಾಡಳಿತೆ !

ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರದ ಹೋಬಳಿ ಪೀಣ್ಯ ಗ್ರಾಮದ ಪಂಚಾಯಿತಿ ಚೇರ್ಮನರ ಆಡಳಿತವನ್ನು ಹಿಟ್ಲರನ ಆಡಳಿತಕ್ಕೆ ಹೋಲಿಸಬಹುದು. ಪೀಣ್ಯ ಗ್ರಾಮದ ರಸ್ತೆ ದುರುಸ್ತಿಗಾಗಿ ಮಣ್ಣನ್ನು ಹೊಡೆಸಲು ವಿ. ಪಿ. ಮೆಂಬರುಗಳ ಅನುಮತಿ ಇಲ್ಲದೆ ಏಕಪಕ್ಷವಾಗಿ ಮಣ್ಣನ್ನು ಗಾಡಿ ಒಂದಕ್ಕೆ ರೂ. 1—8—0 ಆಣೆಯಂತೆ ಕೆಲವು ವಿ. ಪಿ ಮೆಂಬರುಗಳು ಮತ್ತು ಚೇರ್ಮನರ ಹಿತೈಷಿಗಳ ಗಾಡಿಯನ್ನು ಸೇರಿಸಿಕೊಂಡು, ಒಂದು ಗಾಡಿ ಮಣ್ಣಿಗೆ ರೂ 1—8—0ಯನ್ನು ಕೊಟ್ಟು 323 ಗಾಡಿ ಮಣ್ಣನ್ನು ಹೊಡಿಸಿರುತ್ತಾರೆ. ಮತ್ತು ರೂ. 487—8—0 ಯನ್ನು ರಸ್ತೆಗೆ ಖರ್ಚು ಮಾಡಿರುತ್ತಾರೆ. ಈ ಹಣವನ್ನು ಮಂಜೂರು ಮಾಡಿಸಲು ವಿ. ಪಿ. ಮೆಂಬರುಗಳನ್ನು ಮೀಟಿಂಗಿಗೆ ಸೇರಿಸದೆ ಚೇರ್ಮನರು ತಮಗೆ ಇಷ್ಟ ಬಂದ ವಿ. ಪಿ. ಮೆಂಬರುಗಳ ಮನೆ ಮನೆಗೂ ಹೋಗಿ ವಿ. ಪಿ. ರೆಜುಲೇಶನ್ ಬುಕ್ಕಿಗೆ ರುಜು ತೆಗೆದುಕೊಳ್ಳುತ್ತಾರೆ. ನಿಜಸ್ಥಿತಿ ನೋಡಿದರೆ ಮಣ್ಣಿನ ಗಾಡಿ ಬಾಡಿಗೆ ರೂ. 0—12—0 ಆಣೆಯಂತೆ ಕೊಟ್ಟರೆ ಬೇಕಾದಷ್ಟು ಗ್ರಾಮದಲ್ಲಿ ಇರುವ ರೈತರು ಬಾಡಿಗೆಗೆ ಬರುತ್ತಾರೆ. ಒಳಗಿಂದೊಳಗೆ ಪಂಚಾಯಿತಿ ಹಣವನ್ನು ಅನ್ಯಾಯ ಮಾಡುತ್ತಿರುವ ವಿ. ಪಿ. ಚೇರ್ಮನರಿಗೆ ನಮ್ಮ ಗ್ರಾಮದ ರೈತರ ಧಿಕ್ಕಾರವಿರಲಿ ಇದಕ್ಕೆ. ಉದಾಹರಣೆಗಾಗಿ: ದಾಸರಹಳ್ಳಿ ಕೆರೆಯಿಂದ ಹಂಚಿನ ಕಾರ್ಖಾನೆಗೆ ಸುಮಾರು 2 ಮೈಲಿ 6 ಫರ್ಲಾಂಗು ದೂರದಿಂದ, ಮಣ್ಣಿನ ಗಾಡಿ ಬಾಡಿಗೆ ರೂ. 1—4—0 ಯಂತೆ ಕಾರ್ಖಾನೆಯವರು ವರ್ಷಂಪ್ರತಿ ಹೊಡೆಸುತ್ತಾರೆ. ಪೀಣ್ಯ ಗ್ರಾಮದ ರಸ್ತೆಗೆ ಸುಮಾರು 4 ಫರ್ಲಾಂಗ್ ದೂರದಿಂದ ರೂ. 1—8—0ಯನ್ನು ಕೊಟ್ಟು ಮಣ್ಣನ್ನು ಹೊಡೆಸಿರುವುದು ಶೋಚನೀಯವಾಗಿದೆ. ಇದನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ, ತಕ್ಕ ಬಂದೋಬಸ್ತು ಪಡಿಸುತ್ತಾರೆಂದೂ ಮತ್ತು ಮೇಲ್ಕಂಡ ಹಣವನ್ನೂ ಮಂಜೂರು ಮಾಡದೆ ನಡೆದಿರುವ ವಿಷಯವನ್ನೂ ಪರಿಶೀಲಿಸಬೇಕೆಂದು ಕೋರುವ,

"ನೊಂದ ರೈತ"

o o o

ಧಾರವಾಡ ಬಾನುಲಿ ಕೇಂದ್ರದ ಅವ್ಯವಸ್ಥೆ

ಧಾರವಾಡ ಬಾನುಲಿ ಕೇಂದ್ರ ಕನ್ನಡನಾಡಿನಲ್ಲಿ ತೊಂಭತ್ತು ಭಾಗ ಜನರಿಗೆ 'ಧಾರವಾಡ' ಎಂಬ ಬಾನುಲಿ ಕೇಂದ್ರವೊಂದು ಇದೆ ಎಂಬುದು ಗೊತ್ತಿಲ್ಲ. ಇನ್ನು ಗೊತ್ತಿರುವ ಇಪ್ಪತ್ತು ಭಾಗ ಜನರಿಗೂ ಆ ಕೇಂದ್ರದ ಕಾರ್ಯಕ್ರಮ ಬೇಸರ ತರಿಸುವಂತಿದೆ. ಆ ಕೇಂದ್ರದಿಂದ ದಿನ ಬೆಳಗಾದರೆ ಹಿಂದೆ ಪ್ರಸಾರ ಮಾಡಿದವರ ಕಾರ್ಯಕ್ರಮಗಳನ್ನೇ ಮತ್ತೆ ಮತ್ತೆ ಪ್ರಸಾರ ಮಾಡಲಾಗುತ್ತಿದೆ. ಆ ಕೇಂದ್ರದಿಂದ ಪ್ರಸಾರವಾಗುವ 'ಚಿತ್ರ ಸಂಗೀತ' ರಜತೋತ್ಸವ ಆಚರಿಸಿರುವ ಹಿಂದಿ ಚಿತ್ರಗಳಾಗಿವೆ. ಧಾರವಾಡ ಬಾನುಲಿಯವರು ಇನ್ನಾದರೂ ತಮ್ಮ ಕಾರ್ಯಕ್ರಮಗಳನ್ನು ಉತ್ತಮ ಪಡಿಸಿಕೊಳ್ಳುವುದು ಅಗತ್ಯ. ಅದು ಸಾಧ್ಯವಾಗದಿದ್ದರೆ ಈ ಪ್ರಯೋಜಕ ಬಾನುಲಿ ಕೇಂದ್ರವನ್ನು ಮುಚ್ಚಿಬಿಡಲೆಂದು ಕೋರಿಕೊಳ್ಳುತ್ತೇನೆ. ಆಗ ಸರಕಾರದವರಿಗೆ ಉಳಿತಾಯವಾದರೂ ಆಗುವುದಿಲ್ಲವೇ ?

ಎಲ್. ಜಿ. ಪ್ರಧಾನ್, ಶಿವಮೊಗ್ಗ

'ಜನಶಕ್ತಿ'
ಕಾಶೀ ವಿಶ್ವೇಶ್ವರ ಗುಡಿ ಬೀದಿ,
ಬೆಂಗಳೂರು ೨
ಪ್ರಗತಿಶೀಲ ಕನ್ನಡ ವಾರಪತ್ರಿಕೆಗೆ
ಇಂದೇ ಚಂದಾದಾರರಾಗಿರಿ
ಚಂದಾ ವಿವರ :
ವಾರ್ಷಿಕ ಚಂದಾ ರೂ. 6—00
ಅರ್ಧ ವಾರ್ಷಿಕ ರೂ. 3—00
ಬಿಡಿ ಪ್ರತಿ 13 ನಯಾ ಪೈಸಾ

ತೀವ್ರಗೊಳ್ಳುತ್ತಿರುವ ಫ್ರೆಂಚ್ ಸಾಮ್ರಾಜ್ಯಶಾಹಿಯ ಬಿಕ್ಕಟ್ಟು

(೨ನೇ ಪುಟದಿಂದ)

ಅಧಿಕಾರವನ್ನು ಯಾವಾಗಲಾದರೂ ಸ್ವೀಕರಿಸುವುದಕ್ಕೆ ಸಿದ್ಧವಿರುವುದಾಗಿ ಘೋಷಿಸಿದ್ದಾರೆ. ಫ್ರಾನ್ಸ್‌ನ ಪ್ರತಿಗಾಮಿ ಬಲಪಂಥವಾದಿ ಶಕ್ತಿಗಳು ಫಾಸಿಸ್ಟ್ ಡಿಗಾಲೆಯನ್ನು ಅಧಿಕಾರಕ್ಕೆ ತರಲು ಯತ್ನಿಸುತ್ತಿವೆ. ಡಿಗಾಲೆಯವರ ಪತ್ರಿಕಾ ಸಮ್ಮೇಳನದಂದು ಅವರ ನೀತಿಗೆ ಪ್ರತಿಭಟನೆಯನ್ನು ತೋರುವ ಸಲುವಾಗಿ ಫ್ರೆಂಚ್ ಕಮ್ಯೂನಿಸ್ಟ್ ಪಾರ್ಟಿಯು ಕರೆಯಮೇರೆಗೆ ಕಾರ್ಮಿಕರು ಮುಷ್ಕರ ನಡೆಸಿದ್ದಾರೆ.

ಹೊಸದಾಗಿ ಅಧಿಕಾರ ವಹಿಸಿಕೊಂಡಿರುವ ಪ್ರಧಾನಿ ಫ್ಲಿಮ್‌ಲಿನ್‌ರವರಿಗೆ ವಿಶೇಷಾಧಿಕಾರಗಳನ್ನು ಫ್ರೆಂಚ್ ರಾಷ್ಟ್ರೀಯ ಸಭೆ ಇತ್ತಿದೆ. ರಾಜಕೀಯ ಬಿಕ್ಕಟ್ಟು ಮಾತ್ರ ಮುಂದುವರಿಯುತ್ತಿದೆ. ಒಂದು ವೇಳೆ ಸೈನಪಡೆಗಳು ಸರಕಾರದ ಶಕ್ತಿಗಿಂತ ಮೇಲುಗೈಯ್ಯಾದರೆ ಪರಿಸ್ಥಿತಿ ಏನು ಎಂಬುದೀಗ ಪಶ್ಚಿಮ ರಾಷ್ಟ್ರವಲಯಗಳಲ್ಲಿ ಚಿಂತೆಯಾಗಿದೆ.

ಫ್ರಾನ್ಸ್‌ನಲ್ಲಿ ಏರ್ಪಟ್ಟಿರುವ ಈ ಬಿಕ್ಕಟ್ಟಿನಿಂದಾಗಿ ನ್ಯಾಟೋ ಒಕ್ಕೂಟಕ್ಕೆ ಭಾದಕವಾಗುವುದೆಂಬ ಶಂಕೆಮೂಡಿದೆ. ನ್ಯಾಟೋದಲ್ಲಿ ಫ್ರಾನ್ಸ್ ಬಹು ಮುಖ್ಯವಾದ ಅಂಗವಾಗಿದೆ. ಜನರಲ್ ಡಿಗಾಲೆ ಯಾವಾಗಲೂ ಫ್ರಾನ್ಸ್ ನ್ಯಾಟೋದಿಂದ ಹೊರಬರಬೇಕೆಂದೂ, ರಷ್ಯದೊಂದಿಗೆ ಸಂಧಾನದ ಮೂಲಕ ಒಪ್ಪಂದವಾಗಬೇಕೆಂದು ಒತ್ತಾಯ ಪಡಿಸುತ್ತಿದ್ದಾರೆ. ಅದರಿಂದ ಡಿಗಾಲೆ ಅಧಿಕಾರಕ್ಕೆ ಬಂದರೇನಾಗುವುದು ಎಂಬ ಶಂಕೆ ಅಮೇರಿಕಾ, ಬ್ರಿಟನ್‌ಗಳನ್ನು ಪೀಡಿಸುತ್ತಿದೆ. ಡಿಗಾಲೆ ತಮ್ಮ ಅಭಿಪ್ರಾಯವನ್ನು ಬದಲಿಸಿರಬಹುದು ಎಂಬ ಭಾವನೆಯೂ ಇದೆ.

ಅಷ್ಟೇ ! ಅಲ್ಲದೆ ಸರಕಾರದ ಮೇಲೆ ಸೈನ್ಯ ಪಡೆಯು ಮೇಲುಗೈಯ್ಯಾದಲ್ಲಿ ಅಲ್ಜೀರಿಯಾದಲ್ಲೇ ಅಲ್ಲದೆ ಉತ್ತರಆಫ್ರಿಕಾದಲ್ಲಿ ಪರಿಸ್ಥಿತಿ ಏನಾಗುವುದೆಂಬ ಭೀತಿ ಇದೆ. ಏಕೆಂದರೆ ಫ್ರಾನ್ಸಿನ ಸುಮಾರು ಶೇಕಡ 70ರಷ್ಟು ಸೈನ್ಯ ಪಡೆಗಳು, ಅಂದರೆ ಸುಮಾರು 400,000 ಪಡೆಗಳಿವೆ. ಅಲ್ಜೀರಿಯವನ್ನು ಹತೋಟಿಯಲ್ಲಿರಿಸಿಕೊಳ್ಳಲಾಗದಿದ್ದಲ್ಲಿ ಸೈನ್ಯ ಪಡೆಳಗು ಸ್ವತಂತ್ರ ರಾಷ್ಟ್ರಗಳಾದ ಮೊರಾಕ್ಕೊ ಮತ್ತು ಟ್ಯುನೀಷಿಯಗಳ ಮೇಲೆ ಆಕ್ರಮಣ ಮಾಡುವ ಸಂಭವವಿದೆ. ಈಗಾಗಲೇ ಮೊರಾಕ್ಕೊದಲ್ಲಿ 30,000 ಫ್ರೆಂಚ್ ಸೈನ್ಯ ಪಡೆಯು, ಟ್ಯುನೀಷಿಯಾದಲ್ಲಿ 25,000 ಫ್ರೆಂಚ್ ಪಡೆಯೂ ಇದೆ. ಟ್ಯುನೀಷಿಯ ಮತ್ತು ಮೊರಾಕ್ಕೊಗಳಿಗೆ ಈ ಭೀತಿ ಇದ್ದೇ ಇದೆ. ಹಾಗೇನಾದರೂ ಆದ ಪಕ್ಷದಲ್ಲಿ ಕೊರಿಯ ಮತ್ತು ಸೂಯೆಜ್‌ನಲ್ಲಿ ಆದಂತೆ ವಿಶ್ವ ಸಂಸ್ಥೆಯು ಪ್ರವೇಶಿಸಿ ಆಕ್ರಮಣವನ್ನು ತಡೆಗಟ್ಟ ಬೇಕಾಗುವ ಪರಿಸ್ಥಿತಿ ಬರುತ್ತದೆ. ಈ ಕಾರಣದಿಂದಾಗಿ ಅಮೇರಿಕನ್ ಸಾಮ್ರಾಜ್ಯವಾದಿಗಳಿಗೆ ಅಲ್ಜೀರಿಯದ ಮಿಲಿಟರಿ ದಂಗೆಯನ್ನು ಅಡಗಿಸುವುದು ಬೇಕಾಗಿದೆ. ಫ್ರೆಂಚ್ ಸರಕಾರವು ಈ ಯತ್ನದಲ್ಲಿ ಯಶಸ್ವಿಯಾದಲ್ಲಿ ಫ್ರಾನ್ಸ್‌ನಲ್ಲಿ ಅಂತರ್ಯುದ್ಧದ ಭೀತಿಯಾಗಲೀ ಬಹು ಪಂಥವಾದಿಗಳ ಒಳಸಂಚಿನ ಭೀತಿಯಾಗಲೀ, ಇರದು ಎಂದು ಅಮೇರಿಕಾ ಭಾವಿಸುತ್ತಿದೆ.

ಫ್ರಾನ್ಸ್‌ನಲ್ಲಿ ಇಂದು ಏರ್ಪಟ್ಟಿರುವ ರಾಜಕೀಯ ಬಿಕ್ಕಟ್ಟು ಯುದ್ಧಾನಂತರದಲ್ಲಿ ಉದ್ಭವಿಸಿರುವ ದೊಡ್ಡ ಘಟನೆಯಾಗಿದೆ. ವಸಾಹತು ಶಾಹಿಯು ಅವನತಿ ಹೊಂದುತ್ತಿರುವುದಕ್ಕೆ ಇದು ನಿದರ್ಶನವಾಗಿದೆ. ಅಲ್ಜೀರಿಯಾದ ಸ್ವಾತಂತ್ರ್ಯದಲ್ಲಿ ಪ್ರಶ್ನೆ ಬಗೆಹರಿಯುವವರೆಗೂ ಈ ಬಿಕ್ಕಟ್ಟು ಬಗೆಹರಿಯದಾಗಿದೆ.

ಬಂಡವಾಳಶಾಹೀ ರಾಷ್ಟ್ರಗಳಲ್ಲಿ ನಿರುದ್ಯೋಗ ಭೂತ

ಬಂಡವಾಳಶಾಹೀ ರಾಷ್ಟ್ರಗಳಲ್ಲಿ ಆರ್ಥಿಕ ಬಿಕ್ಕಟ್ಟು ಪ್ರಾರಂಭವಾಗಿದೆ. ಇದರ ಪರಿಣಾಮವಾಗಿ ನಿರುದ್ಯೋಗವು ದಿನದಿನಕ್ಕೆ ಹೆಚ್ಚುತ್ತಿದೆ. ನಿರುದ್ಯೋಗದ ಬಗ್ಗೆ ಕೆಳಗಿನ ಅಂಕಿ-ಅಂಶಗಳನ್ನು ಲಂಡನಿನ ದೈನಿಕ "ಟೈಮ್ಸ್" ಪತ್ರಿಕೆಯು ಪ್ರಕಟಿಸಿದೆ. ನಿಜವಾದ ಅಂಕಿ-ಅಂಶ ಇದಕ್ಕಿಂತಲೂ ಅಧಿಕವಾಗಿದೆಯೆಂದು ಹಲವಾರು ಮಂದಿ ಆರ್ಥಿಕ ತಜ್ಞರ ಅಭಿಪ್ರಾಯವಾಗಿದೆ:

ದೇಶ ಮತ್ತು ತಾರೀಕು	ನಿರುದ್ಯೋಗಿಗಳ ಸಂಖ್ಯೆ	1957ರ (ಸ.) ಸಂಖ್ಯೆ
ಆಸ್ಟ್ರೇಲಿಯಾ (ಜನವರಿ 1958)	47,665	52,621
ಬೆಲ್ಜಿಯಂ (ಫೆಬ್ರವರಿ 1958)	195,144	148,728
ಬ್ರಿಟನ್ (ಫೆಬ್ರವರಿ 1958)	424,000	380,100
ಕೆನಡಾ (ಜನವರಿ 1958)	529,000	303,00
ಡೆನ್ಮಾರ್ಕ್ (ಡಿಸೆಂಬರ್ 1957)	112,046	93,142
ಫ್ರಾನ್ಸ್ (ಫೆಬ್ರವರಿ 1958)	110,148	104,301
ಪಶ್ಚಿಮ ಜರ್ಮನಿ (ಜನವರಿ 1958)	1,432,256	1,476,414
ಇಟಲಿ (ಅಕ್ಟೋಬರ್ 1957)	1,640,000	1,697,000
ಹಾಲೆಂಡ್ (ಫೆಬ್ರವರಿ 1958)	125,000	37,000
ಸ್ವೀಡನ್ (ಫೆಬ್ರವರಿ 1958)	56,000	41,000
ಸ್ವಿಟ್ಜರ್‌ಲೆಂಡ್ (ಜನವರಿ 1958)	9,091	9,041
ಅಮೆರಿಕಾ (ಫೆಬ್ರವರಿ 1958)	5,173,000	2,900,000

ಲ್ಯಾಟಿನ್ ಅಮೆರಿಕಾ ದೇಶಗಳಲ್ಲಿ ಉಪಾಧ್ಯಕ್ಷ ನಿಕ್ಸನ್‌ರ ವಿರುದ್ಧ ಪ್ರದರ್ಶನ

ಇತ್ತೀಚಿಗೆ ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳಾದ ಪೆರು, ಬೊಲೀವಿಯಾಗಳಿಗೆ ಅಮೆರಿಕದ ಉಪಾಧ್ಯಕ್ಷ ನಿಕ್ಸನ್‌ರವರು ಭೇಟಿಯಿತ್ತಿದ್ದಾಗ ಜನತೆ ನಿಕ್ಸನ್‌ರ ವಿರುದ್ಧ ಪ್ರದರ್ಶನ ನಡೆಸಿದರು. "ನಿಕ್ಸನರೇ ಹಿಂದೆ ಹೋಗಿ" ಎಂಬ ಪತಾಕೆಗಳನ್ನು ಕಪ್ಪು ಧ್ವಜಗಳನ್ನು ಹಿಡಿದು ಜನತೆ ಪ್ರದರ್ಶನ ನಡೆಸಿದರು.

ಉದ್ರಿಕ್ತಗೊಂಡ ಜನರು ಹಲವೆಡೆಗಳಲ್ಲಿ ನಿಕ್ಸನ್ನರ ಕಾರಿನ ಮೇಲೆ ಕಲ್ಲಿನ ಮಳೆಗರೆದರು. ಅಮೆರಿಕದ ಉಪಾಧ್ಯಕ್ಷರಿಗೆ ಪ್ರಥಮ ಬಾರಿಗೆ ಇಂಥ ಪ್ರತಿಭಟನಾ ಸ್ವಾಗತವು ಲ್ಯಾಟಿನ್ ಅಮೇರಿಕಾದ ರಾಷ್ಟ್ರಗಳಲ್ಲಿ ದೊರೆತಿದೆ.

ಅಮೆರಿಕದ ಪತ್ರಿಕಾರುಗಳ ಮತ್ತು ಅಧ್ಯಕ್ಷ ಐಸನ್ ಹೋವರರೂ ಇದೆಲ್ಲವೂ ಕಮ್ಯೂನಿಸ್ಟರ ಫಿತೂರಿ ಎಂದು ಜರಿದಿದ್ದಾರೆ. ಲ್ಯಾಟಿನ್ ಅಮೇರಿಕಾ ದೇಶಗಳ ಬಗ್ಗೆ ಅಮೇರಿಕಾ ಇನ್ನೂ ದೃಢವಾದ ನೀತಿಯನ್ನನ್ನು ಸರಿಸಬೇಕೆಂದು ತಿಳಿಸಿದ್ದಾರೆ.

ಲ್ಯಾಟಿನ್ ಅಮೇರಿಕಾದಲ್ಲಿ ನಿಕ್ಸನ್‌ರ ವಿರುದ್ಧ ನಡೆದ ಪ್ರದರ್ಶನವು ಅಮೆರಿಕದ ಯುದ್ಧಕೋರ ನೀತಿಯ ವಿರುದ್ಧವಾಗಿ ಬೆಳೆಯುತ್ತಿರುವ ಜನತೆಯ ವಿರೋಧವನ್ನು ಸೂಚಿಸುತ್ತದೆ.

ವಿಷಯ ತಿಳಿಯದೆ ನೆಹರೂರಿಂದ ಕಮ್ಯೂನಿಸ್ಟರ ಟೀಕೆ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಮಾತನಾಡುತ್ತಾ ಪಂಡಿತ ನೆಹರೂರವರು ಯುಗೋಸ್ಲಾವಿಯಾ ಕಮ್ಯೂನಿಸ್ಟ್ ಲೀಗಿನ ಅಧಿವೇಶನಕ್ಕೆ ಭಾರತ ಕಮ್ಯೂನಿಸ್ಟ್ ಪಕ್ಷವು ಕಳಿಸಿದ್ದ ಸಂದೇಶದಲ್ಲಿನ ಬದಲಾವಣೆಗೆ ಹೊರದೇಶಗಳ ಕಮ್ಯೂನಿಸ್ಟ್ ಪಕ್ಷದ ನಿರ್ದೇಶನವೇ ಕಾರಣವೆಂದೂ, ಭಾರತ ಕಮ್ಯೂನಿಸ್ಟರು, ಮಾಸ್ಕೋ ಕಮ್ಯೂನಿಸ್ಟರು ಹೇಗೆ ಹೊರಳಿದರೆ ಹಾಗೆ ಮಾಡುವರೆಂದು ಆಪಾದಿಸಿದರು. ಪಂಡಿತ ನೆಹರೂರವರ ಈ ಆಪಾದನೆ ನಿರಾಧಾರವಾದುದೆಂದೂ, ವಿಷಯ ತಿಳಿಯದೆ ಮಾಡಲಾಗಿರುವುದೆಂದೂ ತಿಳಿಸಿ, ಭಾರತ ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಲಿಯ ಸೆಕ್ರೆಟೇರಿಯಟ್ ಮೇ 12ರಂದು ಪತ್ರಿಕೆಗಳಿಗೆ ಈ ಕೆಳಕಂಡ ಹೇಳಿಕೆಯನ್ನಿತ್ತಿದೆ. ಅಷ್ಟೇ ಅಲ್ಲದೆ ಪಾರ್ಟಿ ಕೇಂದ್ರವು ಯುಗೋಸ್ಲಾವಿಯಾ ಕಮ್ಯೂನಿಸ್ಟ್ ಪಕ್ಷದ ಅಧಿವೇಶನಕ್ಕೆ ಕಳಿಸಿದ ಸಂದೇಶದ ಪೂರ್ಣ ಪಾಠವನ್ನೂ ಸಹ ಹೊರಗೆಡಹಿದೆ.

ಭಾರತ ಕಮ್ಯೂನಿಸ್ಟ್ ಪಕ್ಷವು ತನ್ನ ಮೊದಲನೆಯ ಸಂದೇಶವನ್ನು ಮಾರ್ಚ್ 19ರಂದೂ ಎರಡನೆಯದನ್ನು ಏಪ್ರಿಲ್ 19ರಂದೂ, ಮೂರನೆಯದನ್ನು ಏಪ್ರಿಲ್ 20ರಂದೂ ಕಳಿಸಿತು. ಯುಗೋಸ್ಲಾವಿಯದ ಕರಡು ಕಾರ್ಯಕ್ರಮದ ಬಗ್ಗೆ ಟೀಕೆಯು ಮಾಸ್ಕೋದ "ಕಮ್ಯೂನಿಸ್ಟ್"ನಲ್ಲಿ ಪ್ರಕಟವಾಗಿದ್ದು ಭಾರತದ ಪತ್ರಿಕೆಗಳಲ್ಲಿ ಪ್ರಕಟವಾಗಿ ಪಾರ್ಟಿಗೆ ದೊರಕಿದ್ದು ಏಪ್ರಿಲ್ 21ರಂದು ಎಂಬಂಶವನ್ನು ಇಲ್ಲಿ ಗಮನಿಸಬೇಕಾಗಿದೆ.

ಸೆಕ್ರೆಟೇರಿಯಟ್ಟಿನ ಹೇಳಿಕೆಯ ಪೂರ್ಣಪಾಠ ಈ ರೀತಿ ಇದೆ:

"ಏ. ಐ. ಸಿ. ಸಿ. ಯಲ್ಲಿ ಮಾತನಾಡುತ್ತಾ ಪಂಡಿತ ನೆಹರೂರವರು ಯುಗೋಸ್ಲಾವ್ ಕಮ್ಯೂನಿಸ್ಟ್ ಲೀಗ್ ಅಧಿವೇಶನಕ್ಕೆ ನಮ್ಮ ಪಕ್ಷವು ಕಳಿಸಿದ ಸಂದೇಶದ ಬಗ್ಗೆ ಪ್ರಸ್ತಾಪ ಮಾಡಿದರೆಂದು ವರದಿಯಾಗಿದೆ. ಅವರು ಕೆಲವು ಆಶ್ಚರ್ಯಕರವಾದ ಹೇಳಿಕೆಗಳನ್ನು ಮಾಡಿದ್ದಾರೆ ಮತ್ತು ವಾಸ್ತವಾಂಶಗಳಿಗೆ ಗಮನ ಕೊಟ್ಟಿಲ್ಲ.

"ಪಾರ್ಟಿಯ ಪ್ರಧಾನ ಕಾರ್ಯದರ್ಶಿಯವರು ಯುಗೋಸ್ಲಾವಿಯಾ ಕಮ್ಯೂನಿಸ್ಟ್ ಲೀಗಿಗೆ ಮಾರ್ಚ್ 19ರಂದು ಒಂದು ಸಂದೇಶವನ್ನು ಕಳಿಸಿದ್ದರು. ಆ ಸಮಯದಲ್ಲಿ ನಮಗೆ ಅವರ ಕರಡು ಕಾರ್ಯಕ್ರಮದಲ್ಲಿ ಏನಿತ್ತೆಂಬುದು ತಿಳಿದಿರಲಿಲ್ಲ. ಒಂದು ತಿಂಗಳ ನಂತರವೇ ನಮಗೆ ಕರಡು ಕಾರ್ಯಕ್ರಮದ ಪೂರ್ಣ ಪಾಠ ದೊರಕಿದ್ದು.

"ಕರಡು ಕಾರ್ಯಕ್ರಮವನ್ನು ಓದಿದ ನಂತರ, ಅದರಲ್ಲಿ ಅಂತರರಾಷ್ಟ್ರೀಯ ಪರಿಸ್ಥಿತಿಯ ಬಗ್ಗೆ ಮಾಡಲಾಗಿದ್ದ ನಿರೂಪಣೆಯು ನಮ್ಮ ನಿರೂಪಣೆಗಿಂತ ಪೂರ್ಣವಾಗಿ ಭಿನ್ನವಾಗಿದ್ದುದು ಕಂಡುಬಂದಿತು.

"ಈ ಬಗ್ಗೆ ನಮ್ಮ ಅಭಿಪ್ರಾಯಗಳು ಪಾರ್ಲಿಮೆಂಟಿನಲ್ಲಿ ನಮ್ಮ ಸದಸ್ಯರುಗಳ ಭಾಷಣದಿಂದ ಪಂಡಿತ ನೆಹರೂರವರಿಗೆ ಚೆನ್ನಾಗಿ ತಿಳಿದಿರಬೇಕು.

"ಅಷ್ಟೇ ಅಲ್ಲದೆ ಅನೇಕ ಸಿದ್ಧಾಂತಿಕ ಪ್ರಶ್ನೆಗಳ ಮೇಲೆ ಯುಗೋಸ್ಲಾವಿಯ ಕಮ್ಯೂನಿಸ್ಟ್ ಪಕ್ಷಕ್ಕೂ ನಮಗೂ ಭಿನ್ನಾಭಿಪ್ರಾಯವಿರುವುದು ಕಂಡುಬಂದಿತು.

"ವಿಶ್ವಶಾಂತಿಗಾಗಿ ಹೋರಾಟ ನಡೆಯುತ್ತಿರುವ ಇಂದಿನ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ, ಸರಿಯಾದ ನಿರೂಪಣೆಯನ್ನು ಮಾಡುವುದರ ಅಗತ್ಯತೆಯ ದೃಷ್ಟಿಯಿಂದ, ಯುಗೋಸ್ಲಾವಿಯ ಕಮ್ಯೂನಿಸ್ಟ್ ಲೀಗಿನ ಕರಡು ಕಾರ್ಯಕ್ರಮದಲ್ಲಿ ಈ ಅಂಶಗಳ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸುವುದು ಉಚಿತವೆಂದು ಭಾವಿಸಿದೆವು.

"ಅದೇ ಸಮಯದಲ್ಲಿ ಏಪ್ರಿಲ್ 19ರಂದು ಯುಗೋಸ್ಲಾವಿಯ ಕಮ್ಯೂನಿಸ್ಟರ ಕರಡು ಕಾರ್ಯಕ್ರಮದ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ಕಳಿಸಿಕೊಟ್ಟಾಗ ಇತರೇ ಕಮ್ಯೂನಿಸ್ಟ್ ಪಕ್ಷಗಳು ಏನು ಹೇಳಿದ್ದವೆಂಬುದರ ಅರಿವು ನಮಗಿರಲಿಲ್ಲ. ಬೇರೆಯವರು ಯುಗೋಸ್ಲಾವಿಯ ಕಮ್ಯೂನಿಸ್ಟರನ್ನು ಟೀಕಿಸಿದ್ದರಿಂದ ನಾವು ಮಾಡಿದೆವು ಎಂದು ನೆಹರೂರವರು ಹೇಳುವುದು ತೀರಾ ಅನ್ಯಾಯವಾಗಿದೆ. ಪಂಡಿತ ನೆಹರೂರವರು ಈ ವಿಷಯದಲ್ಲಿ ನಮ್ಮ ಸ್ಥಾನವನ್ನು ಗೌರವಿಸುವ ದೃಷ್ಟಿಯಿಂದ ಕಾಣಿದ್ದಾಗಿಲ್ಲ, ಇದನ್ನು ಆಧಾರವಾಗಿರಿಸಿಕೊಂಡು ಕಮ್ಯೂನಿಸ್ಟರ ವಿರುದ್ಧ ಯಥಾಪ್ರಕಾರದ ಆಪಾದನೆಗಳನ್ನು ಹೊರಿಸುವುದೇ ನೆಹರೂರವರ ಉದ್ದಿಶ್ಯವಾಗಿದೆ".

ಜತ್ತಿ ಮಂತ್ರಿಮಂಡಲ ಹೆಚ್ಚುಕಾಲ ಅಧಿಕಾರದಲ್ಲಿರದು

ನಾಯಕರಾಗಿ ಆಯ್ಕೆಯಾದನಂತರ ಹನ್ನೆರಡು ದಿನಗಳ ಮೇಲೆ ಬಸಪ್ಪ ದಾನಪ್ಪ ಜತ್ತಿಯವರು ತಮ್ಮ ಮಂತ್ರಿ ಮಂಡಲದ ಅಪೂರ್ಣ ಪಟ್ಟಿಯನ್ನು ಏಪ್ರಿಲ್ 20ರಂದು ಹೊರಗೆಡಹಿದ್ದಾರೆ. ಮಂತ್ರಿ ಮಂಡಲದಲ್ಲಿರುವ ವ್ಯಕ್ತಿಗಳನ್ನು ನೋಡಿದಲ್ಲಿ ಈ ಮಂತ್ರಿ ಮಂಡಲ ಹೆಚ್ಚುಕಾಲ ಅಧಿಕಾರದಲ್ಲಿರುವುದಿಲ್ಲವೆಂಬುದು ಖಚಿತವಾಗಿದೆ. ಈಗಾಗಲೇ ಈ ಬಗೆಯ ಮಾತುಕತೆಗಳು ಕಾಂಗ್ರೆಸ್ ವಲಯಗಳಲ್ಲಿ ಆರಂಭವಾಗಿ ಹರಡುತ್ತಿದೆ.

ಮಂತ್ರಿಮಂಡಲದ ಪಟ್ಟಿಯನ್ನು ಹೊರಗೆಡುವುದರಲ್ಲಿ ಜತ್ತಿಯವರು ಬಹಳ ಪ್ರಯಾಸಪಟ್ಟಿದ್ದಾರೆ. ಎರಡುಬಾರಿ ದೆಹಲಿ ಯಾತ್ರೆ ಪೂರಯಿಸಿಬಂದರೂ, ಹಗಲು ರಾತ್ರಿಯೆನ್ನದೆ ಶಾಸನಸಭಾ ಸದಸ್ಯರೊಂದಿಗೆ, ಸ್ಥಳೀಯ ಕಾಂಗ್ರೆಸ್ ನಾಯಕರೊಂದಿಗೆ ಮಾತುಕತೆ ನಡೆಸಿದರೂ ಸಹ ಮಂತ್ರಿಗಳ ಪಟ್ಟಿಯನ್ನು ಸಕಾಲದಲ್ಲಿ ತಯಾರಿಸಲು ಜತ್ತಿಯವರ ಕೈಲಾಗಲಿಲ್ಲ. ಎರಡು ಕಂತುಗಳಲ್ಲಿ ಮಂತ್ರಿಗಳ ಹೆಸರು ಪ್ರಕಟವಾಗಿದೆ. ಇನ್ನು ಒಂದು ಕಂತು ಬಾಕಿ ಇದೆ.

ಮಂತ್ರಿಗಳ ಸಂಖ್ಯೆ

ಹೊಸ ಮಂತ್ರಿಮಂಡಲದಲ್ಲಿ 10ಮಂದಿ ಸಚಿವರುಗಳು 7 ಮಂದಿ ಉಪಸಚಿವರುಗಳು ಇರುವರೆಂದು ತಿಳಿದುಬಂದಿದೆ. ಈವರೆಗೆ ಜತ್ತಿಯವರನ್ನು ಒಳಗೊಂಡು ಎಂಟು ಸಚಿವರುಗಳ ಮತ್ತು ಐದು ಉಪಸಚಿವರುಗಳ ಹೆಸರು ಪ್ರಕಟವಾಗಿದೆ. ಇನ್ನೂ ಇಬ್ಬರು ಮಂತ್ರಿಗಳು, ಇಬ್ಬರು ಉಪಸಚಿವರುಗಳ ನೇಮಕ ಉಳಿದಿದೆ.

ಮೇ 20ರಂದು ಸಂಪುಟದ ಪಟ್ಟಿಯನ್ನು ಹೊರಗೆಡಹುವುದಾಗಿ ತಿಳಿಸಿದ್ದ ಜತ್ತಿಯವರು ಅಂದು ಬೆಳಗ್ಗೆ 8-30 ರಿಂದ ರಾತ್ರಿ 8-30ರವರೆಗೆ ಪತ್ರಿಕಾ ವರದಿಗಾರರನ್ನು ಕಾಯಿಸಿದ್ದು ಕೊನೆಗೆ ಅಪೂರ್ಣ ಪಟ್ಟಿಯನ್ನು ಹೊರಗೆಡವಿದ್ದಾರೆ. ಇದರಲ್ಲೇ ಮಂತ್ರಿಮಂಡಲ ರಚನೆಯಲ್ಲಿ ಉದ್ಭವಿಸಿರುವ ಅವಾಂತರ ಎದ್ದು ಕಾಣುತ್ತದೆ.

ಎಂಥ ಪ್ರಾತಿನಿಧ್ಯ ?

ಪ್ರಾದೇಶಿಕ, ಕೋಮುವಾರು, ಅಲ್ಪಸಂಖ್ಯಾಕರು ಹಾಗು ಮಹಿಳಾ ಪ್ರತಿನಿಧಿಗಳಿಗೆ ತಮ್ಮ ಸಂಪುಟದಲ್ಲಿ ಸ್ಥಾನ ಕೊಟ್ಟಿರುವುದನ್ನು ಸ್ವಂತಃ ಜತ್ತಿಯವರೇ ಒಪ್ಪಿಕೊಂಡಿದ್ದಾರೆ. ವಿವಿಧ ಗುಂಪುಗಳನ್ನು ಶಮನಗೊಳಿಸಲು ಮಂತ್ರಿಮಂಡಲವನ್ನು ರಚಿಸಬೇಕಾದರೆ ಖಂಡಿತ ಈ 10ಮಂತ್ರಿಗಳು 7 ಉಪಮಂತ್ರಿಗಳು ಏನೇನೂ ಸಾಲದು. ಕೊನೆಯ ಪಕ್ಷ 20ಮಂತ್ರಿಗಳೂ, 15 ಉಪಸಚಿವರೂ ಆದಲ್ಲಿ ಮಾತ್ರ ತಕ್ಕಮಟ್ಟಿಗೆ ಕಾಂಗ್ರೆಸ್ಸಿನ ಅಂತರ್ಜಗಳ ಶಮನವಾಗಬಹುದು ಎಂಬ ವ್ಯಂಗ್ಯೋಕ್ತಿಯನ್ನು ಉದ್ಧರಿಸಬಹುದಾಗಿದೆ. ಮಂತ್ರಿಮಂಡಲದ ರಚನೆಯ ಘರ್ಷಣೆಯಲ್ಲಿ ಮೈಸೂರು ಕಾಂಗ್ರೆಸ್ಸಿನವರು ತಮ್ಮದೇ ಆದ ವೈಶಿಷ್ಟವನ್ನು ಬೆಳೆಸಿಕೊಂಡಿದ್ದಾರೆ.

ಮಂತ್ರಿ ಮಂಡಲದಲ್ಲಿರುವವರಾರು?

ಜತ್ತಿಯವರ ಮಂತ್ರಿಮಂಡಲದಲ್ಲಿ ಶ್ರೀಗಳಾದ ಕಡಿದಾಳ್ ಮಂಜಪ್ಪ, ಟಿ. ಸುಬ್ರಹ್ಮಣ್ಯ, ಟಿ. ಮರಿಯಪ್ಪ, ಎಚ್. ಎಂ. ಚನ್ನಬಸಪ್ಪ, ಕೆ. ಎಫ್. ಪಾಟೀಲ್, ಮಾಲಿ ಮರಿಯಪ್ಪ, ಕೆ.ಕೆ. ಹೆಗ್ಡೆಯವರು ಸಚಿವರುಗಳಾಗಿಯೂ, ಶ್ರೀಮತಿ ಲೀಲಾವತಿ ವೆಂಕಟೇಶ್ ಮಾಗಡಿ, ಮತ್ತು ಗ್ರೇಸ್ ಟಕ್ಕರ್, ಶ್ರೀಗಳಾದ ಜೆ. ಎಚ್. ಷಂಸುದ್ದೀನ್, ಎಂ. ಎಸ್. ನಾಗನೂರ್, ಎನ್. ಸಿ. ಲಿಂಗಾರೆಡ್ಡಿ ಇವರುಗಳಿದ್ದಾರೆ. ಸಚಿವರುಗಳೂ, ಉಪಸಚಿವರುಗಳೂ, ರಾಜ್ಯಪಾಲರ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

ಉಳಿದ ಇಬ್ಬರು ಮಂತ್ರಿಗಳಲ್ಲಿ ನಿಮ್ನವರ್ಗದವರೊಬ್ಬರು ಮತ್ತು ಹೈದರಾಬಾದ್ ಕರ್ಣಾಟಕದವರೊಬ್ಬರು ಎಂದು ತಿಳಿದುಬಂದಿದೆ. ನಿಮ್ನ ವರ್ಗದವರೊಬ್ಬರು ಎಂದು ತಿಳಿದುಬಂದಿದೆ. ನಿಮ್ನ ವರ್ಗದವರ ಪೈಕಿ ಶ್ರೀ ಬಸವಲಿಂಗಪ್ಪನವರು ಮಂತ್ರಿಯಾಗಬೇಕೆ ಇಲ್ಲ ಎ. ರಾಚಯ್ಯನವರೇ ಎಂಬುದು ಪ್ರಶ್ನೆಯಾಗಿದ್ದಲ್ಲಿ, ಹೈದರಾಬಾದ್ ಕರ್ನಾಟಕದಲ್ಲಿ ಶ್ರೀ ಕೊಲ್ಲೂರು ಮಲ್ಲಪ್ಪನವರೇ ಇಲ್ಲ ಅಣ್ಣಾರಾವ್ ಗಣಮುಖಿಯವರೇ ಎಂಬುದಾಗಿದೆ. ಉಪಸಚಿವರುಗಳ ನೇಮಕದ ಬಗ್ಗೆಯೂ ಹೀಗೆ ತಿಕ್ಕಾಟವುಂಟಾಗಿದೆ.

ಈಗಿನ ಮಂತ್ರಿ ಮಂಡಲದಲ್ಲಿರುವವರ ಪೈಕಿ, ಕಡಿದಾಳ ಮಂಜಪ್ಪನವರು ಹನುಮಂತಯ್ಯನವರ ಮಂತ್ರಿಮಂಡಲದಲ್ಲಿ ಅವರಿಗೇ ಕೈಕೊಟ್ಟ ಕೆಲವು ತಿಂಗಳಕಾಲ ಮಾಜಿ ಮೈಸೂರಿನ ಮುಖ್ಯಮಂತ್ರಿಗಳಾಗಿದ್ದನಂತರ ಮೂರು ತಿಂಗಳಕಾಲ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿಯೂ ಇದ್ದರು. ಇವರ ಆಡಳಿತೆಯ "ದಕ್ಷತೆ" ಮಾಜಿ ಮೈಸೂರಿನ ಜನತೆಗೆ ಚೆನ್ನಾಗಿ ಪರಿಚಿತವಾಗಿದೆ.

ನಿಜಲಿಂಗಪ್ಪನವರ ಮಂತ್ರಿಮಂಡಲದ ಅರ್ಥ ಸಚಿವರಾಗಿದ್ದು, ಕೆ.ಸಿ. ರೆಡ್ಡಿ ಮಂತ್ರಿಮಂಡಲದಲ್ಲಿ ಗೃಹ ಸಚಿವರಾಗಿದ್ದ ಟಿ. ಮರಿಯಪ್ಪನವರು ಒಬ್ಬ ಸಚಿವರಾಗಿದ್ದಾರೆ. ಮತ್ತೆ ಇವರೇ ಅರ್ಥಸಚಿವರಾಗಿ ಮುಂದುವರಿಯುವ ಸೂಚನೆಯಿದೆ. ಕಾಂಗ್ರೆಸ್ ಹೈಕಮಾಂಡಿನ ಆದೇಶದ ಮೇಲೆ ಇವರನ್ನು ಸಂಪುಟದಲ್ಲಿರಿಸಿಕೊಳ್ಳಲಾಗಿದೆಯೆಂದು ತಿಳಿದುಬಂದಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು ಹನುಮಂತಯ್ಯನವರ ಮಂತ್ರಿಮಂಡಲದಲ್ಲಿ ಒಂದು ವರ್ಷಕಾಲ ಕೈಗಾರಿಕಾ ಸಚಿವರಾಗಿದ್ದರು. ಅವರು ಸಚಿವರಾಗಿದ್ದಾಗ ಸಂಭವಿಸಿದ ಮ್ಯಾಂಗನೀಸ್ ಗಣಿ ಪ್ರಕರಣವನ್ನು ನೆನಪಿಗೆ ತರಬೇಕಾಗಿದೆ. ಯಾವ ಬಗೆಯ ಭೂಸುಧಾರಣೆಗಳನ್ನೂ ತೀವ್ರವಾಗಿ ವಿರೋಧಿಸುವವರಲ್ಲಿ ಇವರೂ ಒಬ್ಬರಾಗಿದ್ದಾರೆ. ಜತ್ತಿ ಸಮಿತಿಯ ಭೂಸುಧಾರಣಾ ವರದಿಯನ್ನು ಹೆಜ್ಜೆ ಹೆಜ್ಜೆಗೂ ಇವರು ವಿರೋಧಿಸಿದ್ದಾರೆ. ಇಂಥ ಮಹಾನುಭಾವರು ಇಂದು ಭೂಸುಧಾರಣಾ ವರದಿಯನ್ನು ತಯಾರಿಸಿದ ಜತ್ತಿಯವರ ಸಂಪುಟದಲ್ಲಿಯೇ ಸಚಿವರಾಗಿದ್ದಾರೆ. ಇದರ ಅರ್ಥ ಕಾಂಗ್ರೆಸ್ ಪಕ್ಷಕ್ಕೇ ತಿಳಿದಿರಲು ಸಾಧ್ಯ.

ಮುಂಬಯಿ ಕರ್ನಾಟಕದ ಕೆ. ಎಫ್. ಪಾಟೀಲರು ಮುಂಬಯಿ ರಾಜ್ಯದಲ್ಲಿ ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಿದ್ದವರು. ಮೈಸೂರು ಮಂತ್ರಿಮಂಡಲದ ರಾಜಕೀಯಕ್ಕೆ ಹೊಸಬರಾಗಿದ್ದಾರೆ. ಅದೇ ರೀತಿಯಲ್ಲಿ ಮಾಲಿ ಮರಿಯಪ್ಪ ಮತ್ತು ಕೆ. ಕೆ. ಹೆಗ್ಡೆಯವರೂ ಆಡಳಿತಕ್ಕೆ ಹೊಸಬರು. ಕಾಂಗ್ರೆಸ್ಸಿನ ಸಂಘಟನೆಯ ಗರಡಿಯಲ್ಲಿ ಪಳಗಿರುವ, ನಿಜಲಿಂಗಪ್ಪನವರ ಮಂತ್ರಿಮಂಡಲವನ್ನು ಉರುಳಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಶ್ರೀ ಟಿ. ಸುಬ್ರಹ್ಮಣ್ಯರವರೂ ಸಚಿವರಾಗಿದ್ದಾರೆ.

ಉಪ ಸಚಿವರುಗಳ ಪೈಕಿ ಶ್ರೀಮತಿ ಗ್ರೇಸ್ ಟಕ್ಕರ್ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿದ್ದವರು. ಉಳಿದವರು ಹೊಸಬರೆನ್ನಬಹುದು.

ಸಚಿವ ಸಂಪುಟವನ್ನು ಒಟ್ಟಾಗಿ ತೆಗೆದುಕೊಂಡು, ಕಾಂಗ್ರೆಸ್ ಶಾಸನ ಸಭೆಯಲ್ಲಿರುವ ಗುಂಪುಗಳ ರಾಜಕೀಯಕ್ಕೆ ಹೋಲಿಸಿದಲ್ಲಿ, ಇವರಲ್ಲಿ ಯಾರಿಗೂ ಹೆಚ್ಚು ಬೆಂಬಲವಿಲ್ಲವೆಂದು ಹೇಳಬಹುದು. ಏಕಾಭಿಪ್ರಾಯ ಹೊಂದಿರದ, ಸಾಮರಸ್ಯವಿಲ್ಲದ, ಈ ಮಂತ್ರಿಮಂಡಲದ ಕಾರ್ಯನಿರ್ವಹಣೆ ದಕ್ಷತೆ ಎಷ್ಟು ಎಂಬುದನ್ನು ಕಾದು ನೋಡಬೇಕಾಗಿದೆ ಅಷ್ಟೆ.

ಅಧಿಕಾರ ಹಂಚಿಕೆ ಹೇಗೆ ?

ತಮ್ಮ ಸಂಪುಟದ ಪಟ್ಟಿಯನ್ನು ಅಪೂರ್ಣವಾಗಿ ಹೊರಗೆಡಹಿ, ಕೃತಾರ್ಥರಾಗಿರುವ ಜತ್ತಿಯವರು ಇನ್ನೂ ಅಧಿಕಾರ ಹಂಚಿಕೆಯ ಮಹಾಕಾರ್ಯದಲ್ಲಿ ತೊಡಗಿದ್ದಾರೆ. ಮಂತ್ರಿಗಳನ್ನು ಆರಿಸಿಕೊಳ್ಳುವ ಮುಖ್ಯ ಮಂತ್ರಿಗಳಿಗೆ ಎಷ್ಟು ಕಷ್ಟವೋ ಅಷ್ಟೇ ಕಠಿಣವಾದ ಸಮಸ್ಯೆ ಅಧಿಕಾರದ ಹಂಚಿಕೆಯ ಪ್ರಶ್ನೆಯಾಗಿದೆ ತೆರೆಯ ಮರೆಯ ಹಿಂದೆ ಈ ಪ್ರಶ್ನೆಯಲ್ಲಿ ಹೆಚ್ಚಿನ ಕೆಲಸ ನಡೆಯುತ್ತದೆ. ಯಾರು ಯಾರು ಯಾವ ಇಲಾಖೆಗಳನ್ನು ತಮ್ಮ ಕೈಯಲ್ಲಿರಿಸಿಕೊಳ್ಳಬೇಕು, ಅದರಲ್ಲಿ ಯಾರ ಪಾಲು ಹೆಚ್ಚಾಗಿರಬೇಕು ಎಂದು ಘರ್ಷಣೆಯೇ ನಡೆಯುತ್ತದೆ. ಜತ್ತಿಯವರೇನೋ ಮೇ 31ರಂದು ಅಧಿಕಾರದ ಹಂಚಿಕೆಯನ್ನು ಹೊರಗೆಡಹುವುದಾಗಿ ಹೇಳಿದ್ದಾರೆ.

ದಕ್ಷತೆಯಿಂದ ಕರ್ತವ್ಯ ಶೀಲರಾಗಿ, ಜನತೆಯ ಅಭ್ಯುದಯಕ್ಕಾಗಿ ಶ್ರಮಿಸುವವರನ್ನು ತಾವು ಸಚಿವರಾಗಿ ನೇಮಿಸಿರುವುದಾಗಿಯೂ, ಗುಂಪು ರಾಜಕೀಯದ ಆಧಾರದ ಮೇಲಲ್ಲವೆಂದೂ ಜತ್ತಿಯವರು ಹೇಳಿಕೊಂಡಿದ್ದಾರೆ. "ಅಳಿಯನ ಕುರುಡು ಬೆಳಗಾದರೆ ತಿಳಿಯುವುದು" ಎಂಬ ನಾಣ್ಣುಡಿಯಂತೆ ಇದು ಶೀಘ್ರವಾಗಿ ಗೋಚರವಾಗುವುದರಲ್ಲಿ ಸಂಶಯವಿಲ್ಲ. ಅಧಿಕಾರವನ್ನು ವಹಿಸಿ ಕೊಳ್ಳುವಾಗ ಕಾಂಗ್ರೆಸ್ ಸಚಿವರುಗಳು "ದಕ್ಷತೆ, ಕರ್ತವ್ಯ ಶೀಲತೆ ಜನತಾಸೇವೆ" ಇತ್ಯಾದಿ ಪದಗಳನ್ನು ಬಳಸುವುದು ಹೊಸತೇನಿಲ್ಲ. ಕಾರ್ಯರೂಪದಲ್ಲಿ ತಾನೇ ಅದು ಕಾಣುವುದು?

22-5-58

ದೇವೀಕುಲಂ ಉಪಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ದಿಗ್ವಿಜಯ

(ಮೊದಲನೇ ಪುಟದಿಂದ)

ಸ್ಸಿನ ಒಳಜಗಳಗಳ ಬಗ್ಗೆ ಜನತೆಗಿರುವ ವಿರೋಧವನ್ನು ಸೂಚಿಸುತ್ತದೆಂದೂ ತಿಳಿಸಿದೆ. ಕೇರಳ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ದಾಮೋದರನ್‌ರವರು ಕಾಂಗ್ರೆಸ್ಸಿನ ಸೋಲು ಅನಿರೀಕ್ಷಿತವಾದದ್ದೆಂದು ತಿಳಿಸಿದ್ದಾರೆ. ಕಾಂಗ್ರೆಸ್ ವಲಯಗಳಲ್ಲಿ ಚುನಾವಣೆಯ ಫಲಿತಾಂಶವು ಭ್ರಮೆ ನಿರಸನಗೊಳಿಸಿದೆ.

ಚುನಾವಣೆಯ ಫಲಿತಾಂಶ ಹೊರಬಿದ್ದ ಕೂಡಲೇ ಮುಖ್ಯ ಮಂತ್ರಿ ಶ್ರೀ ಇ. ಎಂ. ಎಸ್. ನಂಬೂದ್ರಿಪಾದ್‌ರವರು "ದೇವಿಕುಲಂ ಕ್ಷೇತ್ರದ ಜನತೆಯು ಮತ್ತೊಮ್ಮೆ ಕಾಮ್ರೇಡ್ ರೋಸಮ್ಮ ಪೊನ್ನೂಸ್‌ರವರನ್ನು ಪುನಃ ಆಯ್ಕೆ ಮಾಡಿ ಕಮ್ಯೂನಿಸ್ಟ್ ಸರಕಾರದಲ್ಲಿ ತಮ್ಮ ವಿಶ್ವಾಸವನ್ನು ವ್ಯಕ್ತಗೊಳಿಸಿದ್ದಾರೆ.

"ಪ್ರತಿ ಪಕ್ಷಗಳೆಲ್ಲವೂ ಸಹ ಒಂದುಗೂಡಿದ್ದರೂ ಸಹ 1957ರ ಚುನಾವಣೆಗಿಂತ ಅಧಿಕ ಮತ ಬಂದಿದೆ. ಈ ರೀತಿಯಲ್ಲಿ ಅಧಿಕ ಬಲದಿಂದ ಮತವನ್ನು ಜನತೆ ಇತ್ತಿರುವುದು ಕಮ್ಯೂನಿಸ್ಟ್ ಪಾರ್ಟಿಯ ಮೇಲೆ, ಮತ್ತು ಸರಕಾರದ ಬಗ್ಗೆ ತಮ್ಮ ಅಧಿಕ ವಿಶ್ವಾಸವನ್ನು ತೋರಿದೆ" ಎಂದು ತಿಳಿಸಿದ್ದಾರೆ.

ಕೇರಳ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಎಂ. ಎನ್. ಗೋವಿಂದನ್ ನಾಯರ್‌ರವರು ಪತ್ರಿಕೆಗಳಿಗೆ ಹೇಳಿಕೆಯಿತ್ತು ಕಮ್ಯೂನಿಸ್ಟ್ ಉಮೇದುವಾರರನ್ನು ವಿಜಯಗೊಳಿಸಿದ್ದಕ್ಕಾಗಿ ಜನತೆಗೆ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನರ್ಪಿಸಿದ್ದಾರೆ.

ನಮ್ಮ ಅಭಿನಂದನೆ

ಉಪ ಚುನಾವಣೆಯಲ್ಲಿ ದಿಗ್ವಿಜಯವನ್ನು ಗಳಿಸಿದ ಕಮ್ಯೂನಿಸ್ಟ್ ಉಮೇದುವಾರರಾದ ಶ್ರೀಮತಿ ರೋಸಮ್ಮ ಪೊನ್ನೂಸರವರಿಗೂ, ಕೇರಳ ಕಮ್ಯೂನಿಸ್ಟ್ ಪಕ್ಷಕ್ಕೂ ಮತ್ತು ಜನತೆಗೂ ನಾವು ನಮ್ಮ ಅಭಿನಂದನೆಗಳನ್ನೂ, ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ. ಇನ್ನು ಮುಂದೆಯೂ ಜನತೆ ಇದೇ ರೀತಿಯಲ್ಲಿ ಜನತೆ ಕಮ್ಯೂನಿಸ್ಟ್ ಪಕ್ಷಕ್ಕೆ ಬೆಂಬಲ ಕೊಡುವುದೆಂದು ನಂಬಿದ್ದೇವೆ.

REG. No. M 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone 3810